# ಎನ್ ನಾಗರಾಜು. ಕನ್ನಡ ಭಾಷಾ ಶಿಕ್ಷಕ

# ಸರ್ಕಾರಿ ಪ್ರೌಢಶಾಲೆ,

# ರೈಲ್ವೆಕಾರ್ಯಾಗಾರ ಕಾಲೋನಿ, ಮೈಸೂರು –೦೮

# ಶತಕ ಸಂಭ್ರಮಕ್ಕಾಗಿ - ಒಂದು ಪ್ರಯತ್ನ

## ಪ್ರಥಮ ಭಾಷೆ ಕನ್ನಡ

(ಪ್ರಶ್ನೆಪತ್ರಿಕೆ ಹಂತ, ನೀಲ ನಕಾಶೆ ಆಧಾರಿತವಾಗಿ)

**ಒಂದೊಂದು ವಾಕ್ಯದಲ್ಲಿ ಉತ್ತರಿಸುವ ಪ್ರಶ್ನೆಗಳು ೯ಅಂಕ(ಗ–೫, ಪ–೩, ಪೋ–೧) = ೯ ಅಂಕ**

## ಗದ್ಯಪಾಠ – ೧

**ಶಬರಿ – ಪು. ತಿ. ನರಸಿಂಹಾಚಾರ್**

**೧. ಶ್ರೀ ರಾಮನ ತಂದೆಯ ಹೆಸರೇನು?**

ಶ್ರೀ ರಾಮನ ತಂದೆಯ ಹೆಸರು **ದಶರಥ.**

**೨. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**

ಶ್ರೀರಾಮನಿಗೆ ಸಮರ್ಪಿಸಲು ಶಬರಿ **ಪರಿಮಳದ ಹೂವು, ಮಧುಪರ್ಕ ಮತ್ತು ರುಚಿಕರ ಹಣ್ಣುಹಂಪಲುಗಳನ್ನು** ಸಂಗ್ರಹಿಸಿದ್ದಳು.

**೩. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**

ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ **ಶಬರಿ.**

**೪. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?**

ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು **ದಂಡಕಾರಣ್ಯದಲ್ಲಿ ವಾಸಮಾಡುತ್ತಿದ್ದ ಕಬಂಧ ಎಂಬ ಹೆಸರಿನ ರಾಕ್ಷಸ.**

**೫. ಶಬರಿ ಗೀತನಾಟಕದ ಕರ್ತೃ ಯಾರು?**

ಶಬರಿ ಗೀತನಾಟಕದ ಕರ್ತೃ **ಪು. ತಿ. ನರಸಿಂಹಾಚಾರ್ಯ.**

## ಗದ್ಯಪಾಠ – ೨.

**ಅಮೆರಿಕದಲ್ಲಿ ಗೊರೂರು. – ಗೊರೂರು ರಾಮಸ್ವಾಮಿ ಅಯ್ಯಂಗಾರ್**

**೧. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದುಕೊಂಡಿರುವ ಅಂಶಗಳಾವುವು?**

ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ "ಯಾಂತ್ರೀಕರಣ, ವಿದ್ಯುದೀಕರಣ, ಔದ್ಯೋಗೀಕರಣ, ಅಣುಶಕ್ತಿ ಇವುಗಳಿಂದ ಆಗುವ ಉಪಯೋಗ, ಬಳಸುವ ವಿಧಾನ ಹಾಗೂ ಹಾನಿಗಳ ಬಗ್ಗೆ ತಕ್ಕಮಟ್ಟಿನ ಜ್ಞಾನವನ್ನು ಪಡೆದುಕೊಂಡಿರುತ್ತಾರೆ.

**೨. ಅಮೆರಿಕ, ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆ?**

ಅಮೆರಿಕ, ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆಂದರೆ ಇಲ್ಲಿ ಮನೆಗಳನ್ನು ಸಾಧಾರಣವಾಗಿ ಮರದಿಂದಲೇ ಕಟ್ಟಿರುತ್ತಾರೆ.

**೩. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸ್ಕೂಲಿನತ್ತ ಹೆಜ್ಜೆ ಹಾಕಲು ಕಾರಣವೇನು?**

ಅಡುಗೆ ಮನೆಯ ವಿದ್ಯುತ್ ಒಲೆಯಿಂದ ಬರುತ್ತಿದ್ದ ಕೊಂಬಿನ ಸದ್ದನ್ನು ನಿಲ್ಲಿಸಲು ತಿಳಿಯದೆ, ಯಾರನ್ನಾದರೂ ಕರೆಯುವ ಉದ್ದೇಶದಿಂದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಸ್ಕೂಲಿನತ್ತ ಹೆಜ್ಜೆ ಹಾಕಿದರು.

**೪. ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳಾವುವು?**

ಗೊರೂರು ರಾಮಸ್ವಾಮಿ ಅಯ್ಯಂಗಾರರು ಹೇಳಿದ ಕನ್ನಡನಾಡಿನ ಅನೇಕ ಜಾನಪದ ಹಾಸ್ಯ ಕಥೆಗಳು, ಗಾದೆಗಳು ಮತ್ತು ಪಂಚತಂತ್ರದ ಕಥೆಗಳು ಅಮೆರಿಕದ ವಿದ್ಯಾರ್ಥಿಗಳನ್ನು ರಂಜಿಸಿದ ಕನ್ನಡ ಸಾಹಿತ್ಯ ಭಾಗಗಳಾಗಿವೆ.

**೫. ಶಾಲೆಗೆ ಹೋದ ಕೆಲಸದ ಬಗ್ಗೆ ಗೊರೂರರಿಗೆ ಯಾವಾಗ ಜ್ಞಾನೋದಯವಾಯಿತು?**

'ಅವರ ಹೆಂಡತಿ ಶಾಲೆಯ ಬಾಗಿಲಿನಿಂದ ಒಳಗೆ ಬಂದು, ಅವರ ಮುಂದೆ ನಿಂತಾಗ' ಗೊರೂರು ರಾಮಸ್ವಾಮಿ ಅಯ್ಯಂಗಾರರಿಗೆ ಶಾಲೆಗೆ ಹೋದ ಕೆಲಸದ ಬಗ್ಗೆ ಜ್ಞಾನೋದಯವಾಯಿತು.

## ಗದ್ಯಪಾಠ – ೩.

## ಜೀವನದೃಷ್ಟಿ. – ವಿನಾಯಕ ಕೃಷ್ಣ ಗೋಕಾಕ್.

**೧. ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆ?**

ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಒಂದು ಹೆಚ್ಚಿನ ಸ್ಥಾನವಿದೆ.

**೨. ಅಂತರ್‌ಜೀವಿಗೆ ಯಾವುದು ದೊಡ್ಡ ಸಮಸ್ಯೆಯಾಗುತ್ತದೆ?**

ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ.

**೩. ಅಂತರ್‌ಜೀವಿಯ ಶಕ್ತಿ ಹೇಗೆ ವೆಚ್ಚವಾಗುತ್ತಿರುತ್ತದೆ?**

ಅಂತರ್‌ಜೀವಿಗೆ ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತಿರುತ್ತದೆ.

**೪. ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠ ಏನು?**

ಸಾಧಕನಿಗೆ, ಅಂತರ್‌ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂಬುದು ಧರ್ಮಗಳು ಹಾಕಿಕೊಟ್ಟ ರತ್ನಪಾಠ.

**೫. ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು?**

ಗೃಹಸ್ಥಾಶ್ರಮವು ಧನ್ಯವೆಂದು ಕಾಳಿದಾಸನು ಕಲ್ಪಿಸಿದ ಒಬ್ಬ ಋಷಿ ಅರಣ್ಯಕನು ಹೇಳುತ್ತಾನೆ.

## ಗದ್ಯಪಾಠ – ೪

## ಧರ್ಮಸಮದೃಷ್ಟಿ. – ಶಾಸನ (ಸಂಗ್ರಹ)

**೧. ಬುಕ್ಕರಾಯನ ಹಿರಿಮೆ ಏನು?**

ಅರಿರಾಯ ವಿಭಾಡ ಹಾಗೂ ಭಾಷೆಗೆ ತಪ್ಪುವ ರಾಯರ ಗಂಡ ಎಂಬುದು ಬುಕ್ಕರಾಯನ ಹಿರಿಮೆ.

**೨. ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು?**

ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಜೈನರಿಗೂ ಭಕ್ತರಿಗೂ (ಶ್ರೀವೈಷ್ಣವರಿಗೂ) ಸಂವಾದ ನಡೆಯಿತು.

**೩. ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು?**

ನಾಡ ಭವ್ಯ ಜನರು ಬುಕ್ಕರಾಯನ ಬಳಿ ಭಕ್ತರು (ಶ್ರೀವೈಷ್ಣವರು) ಮಾಡುವ ಅನ್ಯಾಯಗಳನ್ನು ಬಿನ್ನಹ ಮಾಡಿದರು.

**೪. ಶ್ರೀವೈಷ್ಣವರೊಡನೆ ಮಹಾರಾಜನು ಏನು ಹೇಳಿದನು?**

ಶ್ರೀವೈಷ್ಣವರೊಡನೆ ಮಹಾರಾಜನು ವೈಷ್ಣವ ದರ್ಶನಕ್ಕೂ ಜೈನದರ್ಶನಕ್ಕೂ ಭೇದವಿಲ್ಲವೆಂದು ಹೇಳಿದನು.

**೫. ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಆಗುವ ಪರಿಣಾಮವೇನು?**

ರಾಯರು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಅವನು ರಾಜದ್ರೋಹಿ ಎನಿಸುವನು.

## ಗದ್ಯಪಾಠ – ೫

## ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ – ಡಿ. ಎಸ್. ಜಯಪ್ಪ ಗೌಡ

**೧. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು?**

ವಿಶ್ವೇಶ್ವರಯ್ಯನವರ ಪೂರ್ವಜರು ಮೂಲತ: ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಗಿಡ್ಡಲೂರು ತಾಲೂಕಿನ 'ಮೋಕ್ಷಗುಂಡಂ' ಅಗ್ರಹಾರಕ್ಕೆ ಸೇರಿದವರು

**೨. ವೆಂಕಟಲಕ್ಷ್ಮಮ್ಮ ಅವರು ತಮ್ಮ ಕುಟುಂಬವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದ್ದು ಏಕೆ?**

ವೆಂಕಟಲಕ್ಷ್ಮಮ್ಮ ಅವರಿಗೆ ಮಕ್ಕಳು ಹೆಚ್ಚು ಓದಿ ದೊಡ್ಡ ವ್ಯಕ್ತಿಗಳಾಗಬೇಕೆಂಬ ಹಂಬಲವಿತ್ತು ಆದ್ದರಿಂದ ಅವರು ತಮ್ಮ ಕುಟುಂಬವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದರು.

**೩. ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು?**

ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್' ಪದವಿಯನ್ನು ನೀಡಿ ಗೌರವಿಸಿತು.

**೪. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು?**

ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದರು.

**೫. ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?**

ವಿಶ್ವೇಶ್ವರಯ್ಯ ಅವರ ಹುಟ್ಟು ಹಬ್ಬದ ನೆನಪಿಗಾಗಿ 'ಎಂಜನಿಯರ್ಸ್ ದಿನಾಚರಣೆ'ಯನ್ನು ಮಾಡಲಾಗುತ್ತಿದೆ.

## ಗದ್ಯಪಾಠ – ೬.

## ಎದೆಗೆ ಬಿದ್ದ ಅಕ್ಷರ – ದೇವನೂರು ಮಹಾದೇವ

**೧. ಮನೆ ಮಂಚಮ್ಮ ಯಾರು?**

**ಕವಿ ಸಿದ್ಧಲಿಂಗಯ್ಯ ಅವರು ದೇವನೂರು ಮಹಾದೇವ ಅವರಿಗೆ ಹೇಳಿದ ಕತೆಯಲ್ಲಿನ ಗ್ರಾಮದೇವತೆ** ಮನೆ ಮಂಚಮ್ಮ.

**೨. ಮನೆಮಂಚಮ್ಮನ ಕತೆ ಹೇಳಿದ ಕವಿ ಯಾರು?**

ಮನೆಮಂಚಮ್ಮನ ಕತೆ ಹೇಳಿದ **ಕವಿ ಸಿದ್ಧಲಿಂಗಯ್ಯ.**

**೩. 'ಮಲೆಗಳಲ್ಲಿ ಮದುಮಗಳು' ಯಾರು ಬರೆದ ಕಾದಂಬರಿ?**

'ಮಲೆಗಳಲ್ಲಿ ಮದುಮಗಳು' **ಕುವೆಂಪು (ಕೆ. ವಿ. ಪುಟ್ಟಪ್ಪ)** ಬರೆದ ಕಾದಂಬರಿ.

**೪. ಅಶೋಕ ಪೈ ಅವರ ವೃತ್ತಿ ಯಾವುದು?**

ಅಶೋಕ ಪೈ ಅವರು **ಮನೋವೈದ್ಯರು.**

**೫. ದೇವನೂರರ 'ನನ್ನ ದೇವರು' ಯಾರೆಂಬುದನ್ನು ಸ್ಪಷ್ಟೀಕರಿಸಿ.**

**ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ** ಅದು ದೇವನೂರು ಮಹಾದೇವ ಅವರ ದೇವರು ಆಗುತ್ತದೆ.

## ಗದ್ಯಪಾಠ – ೭

## ವೃಕ್ಷಸಾಕ್ಷಿ – ದುರ್ಗಸಿಂಹ

**೧. 'ವೃಕ್ಷಸಾಕ್ಷಿ' ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?**

'ವೃಕ್ಷಸಾಕ್ಷಿ' ಕತೆಯನ್ನು **ದುರ್ಗಸಿಂಹನ 'ಕರ್ನಾಟಕ ಪಂಚತಂತ್ರ'** ಕೃತಿಯಿಂದ ಆರಿಸಲಾಗಿದೆ.

**೨. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?**

ದುಷ್ಟಬುದ್ಧಿಯ ಧರ್ಮಬುದ್ಧಿಯ ಮೇಲೆ **ಹೊನ್ನಿನ ಕಳ್ಳತನದ** ಆರೋಪವನ್ನು ಹೊರಿಸಿದನು.

**೩. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?**

**ದುಷ್ಟಬುದ್ಧಿಯು "ಆ ಸ್ಥಳದಲ್ಲಿ ಹೊನ್ನನ್ನು ಇಡುವಾಗ ಈತ ಮತ್ತು ನಾನು ಅಲ್ಲದೆ ಬೇರೆ ಯಾರು ಮನುಷ್ಯರು ಇರಲಿಲ್ಲ. ಆ ಸ್ಥಳದಲ್ಲಿ ಇದ್ದ ಆಲದ ಮರವೇ ಸಾಕ್ಷಿ"** ಎಂದು ಹೇಳಿದ್ದನ್ನು ಕೇಳಿ ಧರ್ಮಾಧಿಕರಣರು ವಿಸ್ಮಯ ಹೊಂದಿದರು.

**೪. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?**

ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು **ದೇವರು, ಗುರುಗಳು, ವೇದಾಧ್ಯಯನ ನಿರತರನ್ನು ಪೂಜೆ ಮಾಡುತ್ತ** ಕಳೆದನು.

**೫. ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು?**

ದುಷ್ಟಬುದ್ಧಿ ಮತ್ತು ಧರ್ಮಬುದ್ಧಿಯ ನಡುವಿನ ವ್ಯಾಜ್ಯವನ್ನು ಪರಿಹರಿಸಲು, ವೃಕ್ಷಸಾಕ್ಷಿಯನ್ನು ಕೇಳಲು **ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಬಂದರು.**

## ಗದ್ಯಪಾಠ – ೮.

## ವ್ಯಾಘ್ರಗೀತೆ – ಎ. ಎನ್. ಮೂರ್ತಿರಾವ್

**೧. ಭಗವದ್ಗೀತೆಯನ್ನು ರಚಿಸಿದವರು ಯಾರು?**
ಭಗವದ್ಗೀತೆಯನ್ನು ರಚಿಸಿದವರು ಮಹರ್ಷಿ ವೇದವ್ಯಾಸರು.
**೨. ಹುಲಿಗೆ ಪರಮಾನಂದವಾಗಲು ಕಾರಣವೇನು?**
ಶಾನುಭೋಗರ ದುಂಡುದುಂಡಾದ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.
**೩. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?**
ಹುಲಿಗೆ ತಮ್ಮ ಮುಖದರ್ಶನವಾಗದಂತೆ ತಪ್ಪಿಸಿಕೊಳ್ಳುವ ದೊಂಬರಾಟದಲ್ಲಿ ಶಾನುಭೋಗರಿಗೆ ತಲೆ ಸುತ್ತಲಾರಂಭಿಸಿತು.
**೪. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು?**
ಶಾನುಭೋಗರ ಬ್ರಹ್ಮಾಸ್ತ್ರ ಖಿರ್ದಿ ಪುಸ್ತಕ
**೫. ಹಸಿದು ಮಲಗಿದ್ದ ಹುಲಿಯು ಏನೆಂದು ಯೋಚಿಸಿತು?**
ಹಸಿದು ಮಲಗಿದ್ದ ಹುಲಿಯು ವಿಧಿ ಆಹಾರಕ್ಕೆ ಏನನ್ನು ಒದಗಿಸುವುದೋ ಎಂದು ಯೋಚಿಸಿತು.

## ಪದ್ಯಪಾಠ – ೧.

## ಎಮ್ಮನುಡಿಗೇಳ್ – ಆದಿಕವಿ ಪಂಪ

**೧. ಭೀಮನಿಗೆ ಪವನನಂದನನೆಂದು ಹೆಸರು ಬರಲು ಕಾರಣವೇನು?**
**ಪವನನ (ವಾಯುವಿನ) ವರಬಲದಿಂದ ಕುಂತಿಯಲ್ಲಿ ಜನಿಸಿದ್ದರಿಂದ** ಭೀಮನಿಗೆ ಪವನನಂದನ ಎಂದು ಹೆಸರು ಬಂದಿತು.
**೨. ಘಟ ಸಂಭೂತ ಯಾರು?**
ಘಟ ಸಂಭೂತ **ಎಂದರೆ ದ್ರೋಣಾಚಾರ್ಯ.**
**೩. ಗಾಂಡೀವಿ ಎಂದು ಅರ್ಜುನನ್ನು ಏಕೆ ಕರೆಯುತ್ತಾರೆ?**
**ಗಾಂಡೀವ ಎಂಬ ಬಿಲ್ಲನ್ನು ಹೊಂದಿರುವುದರಿಂದ** ಅರ್ಜುನನ್ನು ಗಾಂಡೀವಿ ಎಂದು ಕರೆಯುತ್ತಾರೆ.
**೪. ಪಂಪ ಭಾರತದ ಇನ್ನೊಂದು ಹೆಸರೇನು?**
ಪಂಪ ಭಾರತದ ಇನ್ನೊಂದು ಹೆಸರು **'ವಿಕ್ರಮಾರ್ಜುನ ವಿಜಯ'.**

## ಪದ್ಯಪಾಠ – ೨

## ಹಕ್ಕಿ ಹಾರುತಿದೆ ನೋಡಿದಿರಾ – ದ. ರಾ. ಬೇಂದ್ರೆ

**೧. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?**
ಹಕ್ಕಿಯು **ಎವೆ ತೆರೆದಿಕ್ಕುವ ಹೊತ್ತಿನೊಳಗೆ ಅಂದರೆ ಕಣ್ಣು ರೆಪ್ಪೆ ಮಿಟಿಕಿಸುವಷ್ಟು ಸಮಯದಲ್ಲಿ (ನಿಮಿಷದಲ್ಲಿ) ಗಾವುದ ಗಾವುದ ಗಾವುದ ಮುಂದೆ** ಹಾರುತ್ತಿದೆ.
**೨. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?**
ಹಕ್ಕಿಯ **ಗರಿಯಲ್ಲಿ ಕರಿ, ಬಿಳಿ ಕೆಂಪು, ಹೊನ್ನಿನ ಹೊಳೆಯುವ** ಬಣ್ಣಗಳಿವೆ.
**೩. ಹಕ್ಕಿಯು ಕಣ್ಣುಗಳು ಯಾವುವು?**
**ಸೂರ್ಯ ಚಂದ್ರರು** ಹಕ್ಕಿಯ ಕಣ್ಣುಗಳು.
**೪. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?**
ಹಕ್ಕಿಯು **ಸಾರ್ವಭೌಮರ** ನೆತ್ತಿಯನ್ನು ಕುಕ್ಕಿದೆ.
**೫. ಹಕ್ಕಿ ಯಾರನ್ನು ಹರಸಿದೆ?**
ಹಕ್ಕಿಯು **ಹೊಸಗಾಲದ ಹಸುಮಕ್ಕಳನ್ನು** ಹರಸಿದೆ.
**೬. ಹಕ್ಕಿಯು ಯಾವುದರ ಸಂಕೇತವಾಗಿದೆ?**
ಹಕ್ಕಿಯು **ಕಾಲಪಕ್ಷಿಯ** ಸಂಕೇತವಾಗಿದೆ.

## ಪದ್ಯಪಾಠ – ೩.

## ಹಲಗಲಿ ಬೇಡರು – ಜಾನಪದ (ಸಂಗ್ರಹ)

**೧. ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಏನು?**
ಕುಂಪಣಿ ಸರ್ಕಾರದ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಿಬೇಕು ಎಂಬ ಆದೇಶ ಹೊರಡಿಸಿತು.

**೨. ಹಲಗಲಿಯ ನಾಲ್ವರು ಪ್ರಮುಖರು ಯಾರು?**
ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಈ ನಾಲ್ವರುಹಲಗಲಿಯ ಪ್ರಮುಖರು.
**೩. ಹಲಗಲಿಯ ಗುರುತು ಉಳಿಯದಂತಾದದು ಏಕೆ?**
ಹಲಗಲಿಯ ಮೇಲೆ ಬ್ರಿಟಿಷ್ ಸರ್ಕಾರದ ದಂಡು ದಾಳಿ ಮಾಡಿ, ಬೆಂಕಿ ಹಚ್ಚಿದ್ದರಿಂದ ಹಲಗಲಿಯ ಗುರುತು ಉಳಿಯದಂತಾಯಿತು.
**೪.ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ?**
ಹಲಗಲಿಯ ಬೇಡರ ಹತಾರ ಕದನ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ.
**೫. ಹಲಗಲಿ ಗ್ರಾಮ ಎಲ್ಲಿದೆ?**
ಹಲಗಲಿ ಮುಧೋಳ ಸಂಸ್ಥಾನದಲ್ಲಿದ್ದು ಇಂದಿನ ಬಾಗಲಕೋಟೆ ಜಿಲ್ಲೆಗೆ ಸೇರಿದೆ.

## ಪದ್ಯಪಾಠ – ೪.
### ವಚನ ಸೌರಭ – ಜೇಡರ ದಾಸಿಮಯ್ಯ, ಬಸವಣ್ಣ

**೧. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?**
ಶಿವನಿಗೆ **ಸತಿಪತಿಗಳು ಒಂದಾದ** ಭಕ್ತಿ ಹಿತವೆನಿಸುತ್ತದೆ.
**೨. ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ ಏನೆನಿಸುತ್ತದೆ?**
ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಸಹ **ಪಟ್ಟಣ** ಎನಿಸುತ್ತದೆ.
**೩. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?**
ಮಾನವನ ಸ್ವಭಾವವನ್ನು ವಚನಕಾರರು **ಅಂದಣವನ್ನು ಏರಿದ ಸೊಣಗನ (ಶುನಕ) ಸ್ವಭಾವಕ್ಕೆ** ಹೋಲಿಸಿದ್ದಾರೆ.
**೪. ಕೂಡಲ ಸಂಗಮದೇವ ಯಾವಾಗ ಒಲಿಯುವುದಿಲ್ಲ?**
ಕೂಡಲ ಸಂಗಮದೇವ **ನುಡಿಗೆ ತಕ್ಕ ನಡೆ ಇಲ್ಲದಿದ್ದರೆ** ಒಲಿಯುವುದಿಲ್ಲ.

## ಪದ್ಯಪಾಠ – ೫.
### ಸಂಕಲ್ಪ ಗೀತೆ – ಜಿ. ಎಸ್. ಶಿವರುದ್ರಪ್ಪ

**೧. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು?**
ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲ್ಲಿ ಮನ್ನಡೆಸಬೇಕು.
**೨. ನದೀಜಲಗಳು ಏನಾಗಿವೆ?**
ನದೀಜಲಗಳು ಕಲುಷಿತವಾಗಿವೆ.
**೩. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು?**
ಕಲುಷಿತವಾಗಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.
**೪. ಕಾಡುಮೇಡುಗಳ ಸ್ಥಿತಿ ಹೇಗಿದೆ?**
ಕಾಡುಮೇಡುಗಳು ಬರಡಾಗಿವೆ.
**೫. ಯಾವ ಎಚ್ಚರದೊಳು ಬದುಕಬೇಕಿದೆ?**
ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ.

## ಪದ್ಯಪಾಠ – ೬.
### ಕೌರವೇಂದ್ರನ ಕೊಂದೆ ನೀನು – ಕುಮಾರ ವ್ಯಾಸ

**೧. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಹೇಗೆ ಕೂರಿಸಿಕೊಂಡನು?**
**ಕೃಷ್ಣನು ಕರ್ಣನ** ಸಂಗಡ ಮೈದುನತನದ ಸರಸವನ್ನು ಮಾಡಿ, ಕೈಹಿಡಿದು ಎಳೆದು ರಥದ **ಪೀಠದಲ್ಲಿ ಕೂರಿಸಿದನು.**
**೨. ಕುಮಾರ ವ್ಯಾಸನ ಆರಾಧ್ಯ ದೈವ ಯಾರು?**
ಕುಮಾರವ್ಯಾಸನ ಆರಾಧ್ಯ ದೈವ **ಗದುಗಿನ ವೀರನಾರಾಯಣ.**
**೩. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು?**
ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು **ನಕುಲ ಮತ್ತು ಸಹದೇವ.**
**೪. ಕುಮಾರವ್ಯಾಸನಿಗೆ ಇರುವ ಬಿರುದು ಯಾವುದು?**
ಕುಮಾರವ್ಯಾಸನಿಗೆ **'ರೂಪಕ ಸಾಮ್ರಾಜ್ಯ ಚಕ್ರವರ್ತಿ'** ಎಂಬ ಬಿರುದು ಇದೆ.
**೫. ನಾರಣಪ್ಪನಿಗೆ ಕುಮಾರವ್ಯಾಸ ಎಂಬ ಹೆಸರು ಏಕೆ ಬಂತು?**

ನಾರಣಪ್ಪನು ವ್ಯಾಸರ ಸಂಸ್ಕೃತ ಮಹಾಭಾರತವನ್ನು ಕನ್ನಡದಲ್ಲಿ ಕರ್ನಾಟ ಭಾರತ ಕಥಾಮಂಜರಿ ಎಂಬ ಕೃತಿ ರಚಿಸಿದ್ದರಿಂದ ಕುಮಾರವ್ಯಾಸ ಎಂಬ ಹೆಸರು ಬಂದಿತು.

**ಪದ್ಯಪಾಠ – ೭.**

**ವೀರಲವ – ಲಕ್ಷ್ಮೀಶ**

**೧. 'ಜೈಮಿನಿ ಭಾರತ' ಕಾವ್ಯವನ್ನು ಬರೆದ ಕವಿ ಯಾರು?**
ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಲಕ್ಷ್ಮೀಶ
**೨. ಯಜ್ಞಾಶ್ವವನ್ನು ಕಟ್ಟಿದವರು ಯಾರು?**
ಯಜ್ಞಾಶ್ವವನ್ನು ಕಟ್ಟಿದವರು ಲವ
**೩. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?**
ಕುದುರೆಯನ್ನು ಲವನು ತನ್ನ ಉತ್ತರೀಯದಿಂದ ಕಟ್ಟಿದನು.
**೪. ಮುನಿಸುತರು ಹೆದರಲು ಕಾರಣವೇನು?**
ಲವನು ಯಜ್ಞಾಶ್ವವನ್ನು ಕಟ್ಟಿ ಹಾಕಿದ್ದರಿಂದ ಮುನಿಸುತರು ಹೆದರಿದರು.

**ಪದ್ಯಪಾಠ – ೮. ಸಾರ್ಥಕ ರಕ್ಷಣೆ**

**ಸಂಕಟಕೆ ಗಡಿ ಇಲ್ಲ – ದು. ಸರಸ್ವತಿ ನನ್ನಾಸೆ ಇಂದುಮತಿ ಲಮಾಣಿ**

**೨. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡ?**
ಮಾನವ ಗಡಿಯನ್ನು **ಮಣ್ಣಿನ (ಭೂಮಿಯ) ಮಾಲೀಕ ಆದೆನೆಂಬ ಅಮಲಿನಿಂದ ಭೂಮಿಯ ಮೇಲೆ ಗೆರೆ ಎಳೆದು**ನಿರ್ಮಿಸಿಕೊಂಡ.
**೩. ಮಾನವನ ಕಾದಾಟಕ್ಕೆ ಕಾರಣವೇನು?**
ಮಾನವನ ಕಾದಾಟಕ್ಕೆ ಕಾರಣ **ಹಮ್ಮು (ಗರ್ವ)**
**೪. ಗಡಿಯ ಆಚೆ–ಈಚೆ ಹರಿದದ್ದು ಏನು?**
ಗಡಿಯ ಆಚೆ– ಈಚೆ ಹರಿದದ್ದು **ನೆತ್ತರು (ರಕ್ತ).**
5. ಅಜ್ಞಾನ ತ ೊಲಗಿಸಲು ಕವ ಯಿತ್ರಿ ಏನಾಗ ಬಯಸಿದ್ದಾರೆ?
ವ ಾನವ ನ ಅಜ್ಞಾನ ತೊಲಗಿಸ ಲು ಕವಯಿತ್ರಿ ವಾಗ್ದೇವಿಯ ಕ ೈಯಲ್ಲಿರುವ ಗ್ರಂಥ ವಾಗಬ ೇಕ ು ಎಂದು ಬಯ ಸಿದ್ದಾರೆ.
6. ಸದಾ ಚಿಮ್ಮುವ ಚಿಲುಮೆಯಾಗಬ ೇಕು ಏಕೆ?
ದಾಹಗೊಂಡ ವರ ತನ ುವ ನ್ನು ತಣಿಸ ುವುದ ಕ್ಕಾಗಿ ಸ ದಾ ಚಿಮ್ಮುವ ಚಿಲುವ ು ಆಗಬೇಕ ು.

**ಪಠ್ಯ ಪೋಷಕ ಅಧ್ಯಯನ**

**ಪಾರಿವಾಳ – ಸು. ರಂ. ಎಕ್ಕುಂಡಿ**

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು – ಎರಡು ವಾಕ್ಯಗಳಲ್ಲಿ ಉತ್ತರಿಸಿ.**
**1. ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿತ್ತು?**
ದಟ್ಟ ಕಾಡಿನಲ್ಲಿ ಮರದ ಪೊಟರೆಯಲ್ಲಿ ಮುದ್ದು ಪಾರಿವಾಳಗಳ ಜೋಡಿ ಸಂಸಾರ ಹೂಡಿತ್ತು.
**2. ಜೋಡಿ ಪಾರಿವಾಳಗಳು ಹೇಗೆ ಬಾಳುತ್ತಿದ್ದವು?**
ಜೋಡಿ ಪಾರಿವಾಳಗಳು ಒಂದನ್ನೊಂದು ಅಗಲದಂತೆ ಹಗಲಿರುಳು ಜೊತೆಗೂಡಿ ಬಾಳುತ್ತಿದ್ದವು.
**3. ಪಾರಿವಾಳಗಳ ಆನಂದಕ್ಕೆ ಕಾರಣವೇನು?**
ಪಾರಿವಾಳ ಇಟ್ಟ ಮೊಟ್ಟೆಗಳು ಒಡೆದು ಹೊರಬಂದ ಮುದ್ದು ಮರಿಗಳ ಮಧುರ ಸದ್ದನ್ನು ಕೇಳಿ ಪಾರಿವಾಳಗಳು ಆನಂದಪಟ್ಟವು.

## ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸುವ ಪ್ರಶ್ನೆಗಳು = ೨೦ ಅಂಕ

**ಗದ್ಯ(೪ಪ್ರಶ್ನೆ), ಪದ್ಯ(೨ಪ್ರಶ್ನೆ) ಪೋಷಕಅಧ್ಯಯನ(೪ಪ್ರಶ್ನೆ)**

**ಗದ್ಯಪಾಠ – ೧**

**ಶಬರಿ – ಪು. ತಿ. ನರಸಿಂಹಾಚಾರ್**

**೧. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**

ರಾಮನು ಗಿರಿವನಗಳನ್ನು ಕುರಿತು "ಗಿರಿವನಗಳೇ ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ? ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಪ್ರಾರ್ಥಿಸಿದನು.

**೨. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ತಿಳಿಸಿ.**

ಲಕ್ಷ್ಮಣನು ಸೀತೆಗಾಗಿ ಪರಿತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು "ತಾಳಿಕೋ ಅಣ್ಣ ತಾಳಿಕೋ, ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು? ರಾಮನೇ ಧೈರ್ಯಗೆಡಲು ಲೋಕಕ್ಕೆ ಸ್ಥೈರ್ಯ ನೀಡುವವರು ಯಾರು?" ಎಂದು ಹೇಳಿ ಸಂತೈಸಿದನು.

**೩. ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು?**

ರಾಮನ ಸ್ವಾಗತಕ್ಕಾಗಿ ಶಬರಿಯು ಸವಿಯಾದ ಬಗೆಬಗೆಯ ಹಣ್ಣುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಸಂಗ್ರಹಿಸಿ ಸಿದ್ಧಮಾಡಿಕೊಂಡಿದ್ದಳು.

**೪. ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.**

ಶಬರಿಯು ರಾಮಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಕಣ್ಣಿಗೊತ್ತಿಕೊಂಡಳು. ಬಗೆಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸಪಟ್ಟಳು. "ಜಗದಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ. ನಿಮಗೆಂದೆ ತಂದೆನು" ಎಂದು ಹೇಳುತ ಸವಿಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

**೫. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದಳು?**

ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ "ನಾವು ನಿನ್ನ ಪ್ರೀತಿಯ ಸ್ವಾಗತದಿಂದ ಸಂತಸಗೊಂಡೆವು. ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು. ಕಣ್ಣಿಗೆ ಕಾಣದ ಆನಂದವನ್ನು ಅನುಭವಿಸುವ ಪುಣ್ಯ ನಮ್ಮದಾಯಿತು. ನಾವು ನಿನಗೆ ಎಂದೆಂದಿಗೂ ಋಣಿಗಳು" ಎಂದು ಹೇಳಿದರು.

## ಗದ್ಯಪಾಠ – ೨.

**ಅಮೆರಿಕದಲ್ಲಿ ಗೊರೂರು. – ಗೊರೂರು ರಾಮಸ್ವಾಮಿ ಅಯ್ಯಂಗಾರ್**

**೧. ವಿದ್ಯಾರ್ಥಿಗಳು ಗೊರೂರರನ್ನು ಕಂಡು ಭಯಗೊಳ್ಳಲು ಕಾರಣವೇನು?**

ಅಗಲವಾದ ಎಂಟೂವರೆ ಮೊಳ ಉದ್ದದ, ನಾಲ್ಕು ಜರಿ ಗೆರೆಗಳುಳ್ಳ ಕೆಂಪು ಕಂಬಿಯ ಖಾದಿ ಕಚ್ಚೆ ಪಂಚೆ, ಕಾವಿ ಬಣ್ಣದ ನೀಳವಾದ ಜುಬ್ಬ, ಕೆಂಪು ಉಣ್ಣೆಯ ಶಾಲು, ಕೊರಳಿನಲ್ಲಿ ಜೋತಾಡುತ್ತಿದ್ದ ಮಫ್ಲರ್, ಹಣೆಯಲ್ಲಿ ಢಾಳಾದ ಕೆಂಪು ನಾಮ, ತಲೆಯ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು, ಬಿಳಿಗಡ್ಡ, ಮೀಸೆ, ಕಾಲಿಗೆ ದಪ್ಪನಾದ ಎಕ್ಕಡ ಇವುಗಳನ್ನೆಲ್ಲಧರಿಸಿದ್ದಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರನ್ನು ಕಂಡು ವಿದ್ಯಾರ್ಥಿಗಳು ಭಯಗೊಂಡರು.

**೨. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತದ್ದು ಏಕೆ?**

ವಿದ್ಯುತ್ ಒಲೆಯಿಂದ ಬರುತ್ತಿದ್ದ ಸದ್ದನ್ನು ನಿಲ್ಲಿಸಲು ತಿಳಿಯದೆ, ಯಾರದಾದರೂ ಸಹಾಯ ಪಡೆಯುವ ಉದ್ದೇಶದಿಂದ ಗೊರೂರರು ಸ್ಕೂಲಿಗೆ ಹೋದರು. ಅವರ ವಿಚಿತ್ರ ಉಡುಪಿನಿಂದ ವಿದ್ಯಾರ್ಥಿಗಳು ಭಯಗೊಂಡರು. ಆಗ ಅಲ್ಲಿನ ಉಪಾಧ್ಯಾಯರು ಅವರ ಉಡುಪಿನ ಬಗ್ಗೆ ವಿಚಾರಿಸಿದರು. ಅವರೊಡನೆ ಗೊರೂರರು ತಮ್ಮ ಉಡುಪಿನ ಬಗ್ಗೆ ಮಾತನಾಡಲು ತೊಡಗಿದರು. ಈ ಅವಾಂತರದಲ್ಲಿ ಗೊರೂರರು ಶಾಲೆಗೆ ಬಂದ ಉದ್ದೇಶವನ್ನೇ ಮರೆತುಬಿಟ್ಟರು.

**೩. ಗೊರೂರು ರಾಮಸ್ವಾಮಿ ಅಯ್ಯಂಗಾರರು ಇದ್ದ ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತು ಎಂದು ಆತಂಕ ಪಟ್ಟದ್ದು ಏಕೆ?**

ಗೊರೂರು ರಾಮಸ್ವಾಮಿ ಅಯ್ಯಂಗಾರರು ಇದ್ದ ಮನೆಯ ಅಡುಗೆಯ ಮನೆಯಎಲ್ಲ ಸ್ವಿಚ್‌ಗಳೂ ಆಫ್ ಆಗಿದ್ದರೂ ವಿದ್ಯುತ್ ಒಲೆಯಿಂದ ಕೊಂಬಿನ ಸದ್ದು ಒಂದೇ ಸಮನಾಗಿ ಬರುತ್ತಿತ್ತು. ವಿದ್ಯುತ್ ಒಲೆಗಳ ಸ್ವಿಚ್ ಜೋಡಣೆ ಹೊಸ ತರಹದಾಗಿದ್ದು ಅಸಂಖ್ಯಾತ ಅಂಕಿ, ಗೆರೆ ಮತ್ತು ಬಣ್ಣಗಳಿಂದ ಕೂಡಿತ್ತು. "ಯಾವುದನ್ನು ಮುಟ್ಟಿದರೆ ಏನೋ" ಎಂಬ ಭಯದಿಂದ "ಮನೆಯಲ್ಲಿ ಬೆಂಕಿ ಹೊತ್ತಿ ಕೊಂಡೀತು" ಎಂಬ ಆತಂಕವನ್ನು ಉಂಟುಮಾಡಿತ್ತು.

## ಗದ್ಯಪಾಠ – ೩.

**ಜೀವನದೃಷ್ಟಿ. – ವಿನಾಯಕ ಕೃಷ್ಣ ಗೋಕಾಕ್.**

**೧. ಅಂತರ್‌ಜೀವಿಗೆ ಸುಲಭವಾಗಿ ರಕ್ತಗತವಾಗದ ಸಂಗತಿ ಯಾವುದು?**

ಅಂತರ್‌ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ. ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಹೊರಟ ಅವನಿಗೆ ಉಳಿದವರ ಯೋಗಕ್ಷೇಮವನ್ನು ಹೊರುವ

ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು ಸುಲಭವಾಗಿ ರಕ್ತಗತವಾಗುವುದಿಲ್ಲ. ಉಳಿದವರನ್ನು ಪ್ರೀತಿಯಿಂದ ಅವನು ಕಾಣಬಲ್ಲ. ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರಪಡಬಲ್ಲ.

**೨. ಕಲೋಪಾಸಕನ ಕರ್ತವ್ಯ ಏನು?**

ಕಲೋಪಾಸಕನೂ ಒಬ್ಬ ವ್ಯಕ್ತಿ; ಸಮಾಜದ–ಮನುಕುಲದ–ಒಂದು ಘಟಕ. ಪರಾಂತಃಕರಣಪ್ರವೇಶಿಯಾಗಿ ಜನತೆಯ ಮನವನ್ನೂ, ಅಂತಃಕರಣವನ್ನೂ ಅವನು ತಿದ್ದಬಹುದು. ಆದರೆ ಯಾವ ವ್ಯಕ್ತಿಗಳೊಡನೆ ಅವನ ಸಂಬಂಧ ಬರುವುದೋ ಅವರ ಅಂತಃಕರಣವನ್ನು ನೋಯಿಸದಂತೆ ತನ್ನನ್ನು ಅಲಕ್ಷಿಸಿಯಾದರೂ ಉಳಿದವರ ಹಿತಚಿಂತನೆ ಹಾಗೂ ಹಿತಸಾಧನೆಯಲ್ಲಿ ತೊಡಗುವುದು ಎಲ್ಲ ವ್ಯಕ್ತಿಗಳಂತೆ ಅವನ ಕರ್ತವ್ಯವೂ ಆಗಿದೆ.

**೩. ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸುತ್ತಿತ್ತು?**

ಸಾಧಕನಿಗೆ ಯಾವ ತೊಂದರೆಯೂ ಆಗಬಾರದೆಂದು, ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು, ಎಲ್ಲ ಧರ್ಮಗಳು ಹೇಳಿವೆ. ಆದ್ದರಿಂದ ಸಾಧಕರ ಯೋಗಕ್ಷೇಮವನ್ನು ನೋಡಿಕೊಳ್ಳಲು ಧರ್ಮಶಾಲೆಗಳಲ್ಲಿ, ವಿಹಾರಗಳಲ್ಲಿ, ಅನ್ನಛತ್ರಗಳಲ್ಲಿ, ದೇವಸ್ಥಾನಗಳಲ್ಲಿ ಹಾಗೂ ಮಠಗಳಲ್ಲಿ ಉಚಿತ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತಿತ್ತು. ಕೆಲವರು ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಂಡಿದ್ದು ಉಂಟು. ಹೀಗೆ ಸಮಾಜವು ಸಾಧಕನ ಯೋಗಕ್ಷೇಮವನ್ನು ನಿರ್ವಹಿಸುತ್ತಿತ್ತು.

**೪. ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳಾವುವು?**

ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳೆಂದರೆ ಒಂದು ತನ್ನಿಂದ ಹೆರವರಿಗೆ ಯಾವ ತೊಂದರೆಯೂ ಮಾನಸಿಕ ವ್ಯಥೆಯೂ ಆಗದಂತೆ ಎಚ್ಚರಪಡುವ ಕಣ್ಣು: ಇನ್ನೊಂದು ತನ್ನ ಅಳವಿನಲ್ಲಿ ಹೆರವರ ಐಹಿಕ, ಮಾನಸಿಕ ಇಲ್ಲವೆ ಆತ್ಮಿಕ ಹಿತಚಿಂತನೆ ಎಲ್ಲೆಲ್ಲಿ ಸಾಧ್ಯ ಎಂದು ಸದಾ ಅಭ್ಯಸಿಸುವ ಕಣ್ಣು.

**ಗದ್ಯಪಾಠ – ೪**

**ಧರ್ಮಸಮದೃಷ್ಟಿ. – ಶಾಸನ (ಸಂಗ್ರಹ)**

**೧. 'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?**

'ಧರ್ಮಸಮದೃಷ್ಟಿ' ಪಾಠದಲ್ಲಿ ರಾಮಾನುಜಾಚಾರ್ಯರನ್ನು ಪಾಷಂಡ (ನಾಸ್ತಿಕ) ಸಾಗರ ಮಹಾಬಡಬಾ ಮುಖಾಗ್ನಿಯಂತಿರುವವರು, ಶ್ರೀರಂಗರಾಜ ಪಾದಕಮಲಗಳಲ್ಲಿ ಮೂಲ ದಾಸರಾದವರು, ಶ್ರೀವಿಷ್ಣುಲೋಕ ಮುನಿಮಂಟಪ ಮಾರ್ಗದಾಯಿಗಳು, ಯತಿರಾಜರಾಜರಂತಿರುವವರು ಎಂದು ಕೊಂಡಾಡಲಾಗಿದೆ.

**೨. ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು?**

ಕೋವಿಲ್, ತಿರುಮಲೆ, ಪೆರುಮಾಳ್‌ಕೋವಿಲ್, ತಿರು ನಾರಾಯಣಪುರ ಮುಖ್ಯಕ್ಷೇತ್ರಗಳ ಸಕಲಾಚಾರ್ಯರು, ಸಕಲ ಧರ್ಮಾನುಯಾಯಿಗಳು, ಸಕಟ ಸಾತ್ವಿಕರು, ಮೋಷ್ಟಿಕರು, ತಿರುಪಣಿ, ತಿರುವಿಡಿ, ತಣ್ಣೀರವರು, ನಲವತ್ತೆಂಟು ಕುಲದವರು, ಸಾವಂತ ಸಾಮಂತರಾದ ಮಲೆನಾಡಿನವರು, ತಿರಿಕುಲ, ಜಾಂಬವಕುಲ ಒಳಗೊಂಡ ಹದಿನೆಂಟು ನಾಡಿನವರನ್ನು ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಆಹ್ವಾನಿಸಿದನು.

**೩. ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?**

ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಸಮಸ್ತ ರಾಜ್ಯದ ಜೈನಮತದ ಜನಗಳ ಅನುಮತದಿಂದ "ಬೆಳುಗೊಳದ ಪುಣ್ಯಕ್ಷೇತ್ರದಲ್ಲಿ ವೈಷ್ಣವ ಅಂಗರಕ್ಷೆಗಾಗಿ ಸಮಸ್ತ ರಾಜ್ಯದೊಳಗೆ ಇರುವಂತಹ ಜೈನರ ಬಾಗಿಲು ಕಟ್ಟಳೆಯಾಗಿ ಮನೆಮನೆಗೆ ವರ್ಷಕ್ಕೆ ಒಂದು ಹಣ ಕೊಡುವುದು. ಹಾಗೆ ಸಂಗ್ರಹಿಸಿದ ಆ ಒಂದು ಹಣದಿಂದ ದೇವರ ಅಂಗರಕ್ಷೆಗೆ ಇಪ್ಪತ್ತು ಆಳುಗಳನ್ನು ಸಂತವಿಟ್ಟು, ಉಳಿದ ಹೊನ್ನಿನಿಂದ ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿಸುವುದು" ಎಂದು ಶಾಸನ ಬರೆಸಿದನು.

**ಗದ್ಯಪಾಠ – ೫**

**ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ – ಡಿ. ಎಸ್. ಜಯಪ್ಪ ಗೌಡ**

**೧. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು ಏನೆಂದು ಹೇಳಿದ್ದಾರೆ?**

ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ.

**೨. ನೆಹರೂ ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?**

ನೆಹರೂ ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ

ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಹೇಳಿದ್ದಾರೆ.

**೩. ಹೈದರಾಬಾದ್ ನಗರದಲ್ಲಿ ವಿಶ್ವೇಶ್ವರಯ್ಯ ಅವರು ಸಲ್ಲಿಸಿದ ಸೇವೆ ಯಾವುದು?**

ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವ ಮೂಲಕ ಸಮಸ್ಯೆಯನ್ನು ವಿಶ್ವೇಶ್ವಯ್ಯನವರು ಬಗೆಹರಿಸಿದರು. ಅವರು ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

**೪. ಎಂಜಿನಿಯರ್‌ಗಳಿಗೆ ವಿಶ್ವೇಶ್ವರಯ್ಯ ಅವರು ಏನೆಂದು ಮಾರ್ಗದರ್ಶನ ಮಾಡಿದರು?**

ವಿಶ್ವೇಶ್ವರಯ್ಯ ಅವರು ಎಂಜಿನಿಯರುಗಳಿಗೆ "ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು, ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜಿನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತವೆ ಈ ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ" ಎಂದು ಮಾರ್ಗದರ್ಶನ ಮಾಡಿದರು.

**೫. ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯ ಅವರು ಮಾಡಿದ ಮಾರ್ಪಾಡುಗಳಾವುವು?**

ವಿಶ್ವೇಶ್ವರಯ್ಯ ಅವರು ಕ್ರಿ.ಶ. ೧೯೧೩ರಲ್ಲಿ ಮೈಸೂರು ಬ್ಯಾಂಕನ್ನು ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಹಾಗೂ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳು ರಚಿತಗೊಂಡವು. ಸಾರ್ವಜನಿಕ ಜೀವವಿಮಾ ಯೋಜನೆ ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ ಸಹಕಾರಿ ಬ್ಯಾಂಕ್‌ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

**ಗದ್ಯಪಾಠ – ೬.**

**ಎದೆಗೆ ಬಿದ್ದ ಅಕ್ಷರ – ದೇವನೂರು ಮಹಾದೇವ**

**೧. ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯವೇನು?**

ಕೆಲವು ಜನ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿರುವಾಗ, ಇನ್ನೊಂದಿಷ್ಟು ಜನ ಇದರ ಅರಿವಿಲ್ಲದೆ ಇನ್ನೊಂದು ಪಕ್ಕದ ಕೊಠಡಿಯಲ್ಲಿ ಏನೋ ಮಾತುಕತೆ ಆಡುತ್ತ ತಮ್ಮಷ್ಟಕ್ಕೆ ತಾವು ಇರುವಾಗ, ಟೆಲಿವಿಷನ್‌ನಲ್ಲಿ ಯಾವುದಾದರೂ ಕೊಲೆ ದೃಶ್ಯ ಬಂದಾಗ ಇಲ್ಲಿ ಇದನ್ನು ನೋಡುತ್ತಿದ್ದವರ ದುಃಖದ ಭಾವನೆಯು ಇದನ್ನು ನೋಡದೆ ಇರುವ ಪಕ್ಕದ ಕೊಠಡಿಯಲ್ಲಿ ಇರುವವರ ಮನಸ್ಸಿಗೂ ಮುಟ್ಟಿ ಅವರ ಮನಸ್ಸು ಸ್ವಲ್ಪಮಟ್ಟಿಗೆ ದುಗುಡಗೊಳ್ಳುತ್ತದೆ. ಅದೇ ಟೆಲಿವಿಷನ್‌ನಲ್ಲಿ ಯಾವುದಾರೊಂದು ನೃತ್ಯ ದೃಶ್ಯ ಬಂದಾಗ ಅದನ್ನು ನೋಡುತ್ತಿರುವವರ ಖುಷಿ ಭಾವನೆಯು ಪಕ್ಕದ ಕೊಠಡಿಯಲ್ಲಿ ಇದನ್ನು ನೋಡದೆ ತಮ್ಮಷ್ಟಕ್ಕೆ ತಾವೇ ಇದ್ದವರ ಮನಸ್ಸಿನ ಮೇಲೂ ಪರಿಣಾಮ ಬೀರಿ ಸ್ವಲ್ಪಮಟ್ಟಿಗೆ ಸಂತೋಷದ ಭಾವನೆ ಉಂಟಾಗುತ್ತದೆ. ಇದು ಅಶೋಕ ಪೈ ಅವರು ಹೇಳಿದ ಸಂಶೋಧನಾ ಸತ್ಯ.

**೨. 'ವಚನಧರ್ಮ'ದ** ಬಗೆಗೆ ದೇವನೂರರ ಅಭಿಪ್ರಾಯ ಏನು?

"ಕರ್ನಾಟಕದ ಹನ್ನೆರಡನೆಯ ಶತಮಾನದಲ್ಲಿ ನಡೆದವಚನ ಆಂದೋಲನ ಜಗತ್ತಿನಲ್ಲಿ ಎಲ್ಲೂ ನಡೆದಿಲ್ಲ. ಈ ವಚನ ಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೆ ಇದು ಬೆಳಕಾಗಬಹುದು. ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ" ಎಂಬುದು 'ವಚನ ಧರ್ಮ'ದ ಬಗೆಗೆ ದೇವನೂರರ ಅಭಿಪ್ರಾಯವಾಗಿದೆ.

**೩. ಪರಮಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು?**

"ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸ. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೇ ಕೂಡಿಸುತ್ತ ಕೂಡಿಸುತ್ತಾ ಹೋದವರು ಪರಮಹಂಸರು" ಎಂಬುದು ದೇವನೂರು ಮಹಾದೇವ ಅವರ ಆಬಿಪ್ರಾಯವಾಗಿದೆ.

**೪. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು?**

**'ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ'** ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾಗಿವೆ.

**ಗದ್ಯಪಾಠ – ೭**

**ವೃಕ್ಷಸಾಕ್ಷಿ – ದುರ್ಗಸಿಂಹ**

**೧. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯಿತ್ತನು?**

ಅರ್ಧರಾತ್ರಿಯಲ್ಲಿ ಧರ್ಮಬುದ್ಧಿಯು ದುರ್ಬುದ್ಧಿಯಾದ ದುಷ್ಟಬುದ್ಧಿಯನ್ನು ಕರೆದು, "ಚಿನ್ನವನ್ನು ಹಂಚಿಕೊಳ್ಳೋಣ" ಎಂದಾಗ ದುಷ್ಟಬುದ್ಧಿಯು ಪಾಪಬುದ್ಧಿಯವನಾಗಿ "ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರಲ್ಲ. ಮತ್ತೆ ವ್ಯಾಪಾರಕ್ಕೆ ಹೋಗಬೇಕಾಗುತ್ತದೆ. ಆಕಾರಣದಿಂದ ನಿನಗೂ ನನಗೂ ಖರ್ಚಿಗೆ ತಕ್ಕಷ್ಟು ಹೊನ್ನನ್ನು ತೆಗೆದುಕೊಂಡು, ಉಳಿದ ಹೊನ್ನೆಲ್ಲವನ್ನು ಇಲ್ಲೆಯೇ ಇಟ್ಟು ಬಿಡೋಣ" ಎಂದು ಸಲಹೆಯಿತ್ತನು.

**೨. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು?**

ದುಷ್ಟಬುದ್ಧಿಯು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ "ನಿನ್ನ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲವೂ ಪರಿಹಾರವಾಗಿ, ಹಲವು ಕಾಲ ಹಸಿಯದೆ ಊಟಮಾಡಿ ಬಾಳುವಂತಹ ಸಾಧನೆಯನ್ನು ಮಾಡಬಹುದು. ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದನು.

**೩. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?**

ಧರ್ಮಾಧಿಕರಣರು **ವಟವೃಕ್ಷಕ್ಕೆ** "ನೀನಾದರೋ ಯಕ್ಷಾದಿ ದಿವ್ಯ ದೇವತೆಗಳು ವಾಸ ಮಾಡುವಂತಹ ಮತ್ತು ಅವರ ಸೇವೆಯನ್ನು ಮಾಡುವಂತಹವನು ಆಗಿದ್ದೀಯಾ, ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ, ನೀನು ತಪ್ಪದೆ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

## ಗದ್ಯಪಾಠ – ೮.

**ವ್ಯಾಘ್ರಗೀತೆ** – ಎ. ಎನ್. ಮೂರ್ತಿರಾವ್

**೧. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?**

ಶಾನುಭೋಗರು ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು. ಅದು ಕಾಡುದಾರಿಯಾಗಿತ್ತು. ಆದಿನ ಬೆಳುದಿಂಗಳಿನ ರಾತ್ರಿ. ಅದರೂ ಶಾನುಭೋಗರ ಮನಸ್ಸಿನಲ್ಲಿ ಭಯ ಆವರಿಸಿತ್ತು. ಹೊಟ್ಟೆಯೂ ಹಸಿಯುತ್ತಿತ್ತು. "ಸ್ವಲ್ಪ ದೊಡ್ಡ ಹೆಜ್ಜೆ ಹಾಕಿ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು" ಎಂದು ಶಾನುಭೋಗರು ಯೋಚಿಸಿದರು.

**೨. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು?**

ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ ಏಕೆಂದರೆ ಶತ್ರುಗಳಾದರೂ ಸರಿಯೆ, ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲ. ಆದ್ದರಿಂದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಹಾರಿ ಕೊಲ್ಲಲಿಲ್ಲ.

**೩. ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ.**

ಚಿಕ್ಕನಾಯಕನಹಳ್ಳಿಗೆ ತೆಂಗಿನಕಾಯಿ ತುಂಬಿಕೊಂಡು ಹೋಗಿದ್ದ ರೈತರ ಗಾಡಿಯ ಎತ್ತುಗಳು ಮುಂದೆ ಹೋಗದೆ ನಿಂತವು. ಹುಲಿಯ ಗರ್ಜನೆ ಕೇಳಿಸಿತು. ಎತ್ತುಗಳ ಗಂಟೆಯ ಸದ್ದನ್ನು ಕೇಳಿದ ಹುಲಿಯು ಕೆಲವು ನಿಮಿಷ ತಡೆದು ರೈತರ ಮಾತು ಕೇಳಿಬಂದ ಮೇಲೆ ನಿರಾಶೆಯಿಂದ ಪಲಾಯನಮಾಡಿತು. ಅನಂತರ ರೈತರು ತಮ್ಮಲ್ಲಿದ್ದ ಕೋವಿಯಿಂದ ಒಂದೆರಡು ತೋಟಾ ಹಾರಿಸಿ, ಕೈಲಾದಷ್ಟು ಗಲಭೆ ಮಾಡುತ್ತಾ ತೆಂಗಿನಗರಿಯ ಪಂಜು ಹೊತ್ತಿಸಿಕೊಂಡು ಜಾಗರೂಕತೆಯಿಂದ ಮುಂದೆ ಬಂದರು. ಮೂರ್ಛೆಯಲ್ಲಿ ಬಿದ್ದಿದ್ದ ಶಾನುಭೋಗರನ್ನು ಕಂಡು, ಮುಖದ ಮೇಲೆ ನೀರೆರಚಿ ಎಚ್ಚರಿಸಿದರು.

## ಪದ್ಯಪಾಠ – ೧.

**ಎಮ್ಮನುಡಿಗೇಳ್** – ಆದಿಕವಿ ಪಂಪ

**೧. ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಹೇಗೆ ಸಮರ್ಥಿಸಿದನು?**

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ (ಭೇದವಿಲ್ಲ); ರಾಜ್ಯವನ್ನು ವಿಭಾಗ ಮಾಡಿ ಆಳೋಣ. ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವವರೇ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೇ; ಭೀಷ್ಮನಿಗೆ, ದ್ರೋಣನಿಗೆ, ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಕೋಪಿಸಿ ಯುದ್ಧ ಮಾಡುವವರು ಇನ್ನು ಯಾರು? ಸಂಧಿಯನ್ನು ಮಾಡೋಣ" ಎಂದು ಹೇಳಿ ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಸಮರ್ಥಿಸಿದನು.

**೨. ದುರ್ಯೋಧನನಿಗೆ ಗಾಂಧಾರಿ ನೀಡಿದ ಉಪದೇಶವೇನು?**

ಗಾಂಧಾರಿಯು ದುರ್ಯೋಧನನನ್ನು ಕುರಿತು "ಕುರುವಂಶವೆಂಬ ತೋಟವು ಭೀಮನೆಂಬ ಮದದಿಂದ ಕುರುಡಾಗಿ ಸೊಕ್ಕೇರಿದ ಆನೆಯು ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು; ಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದೆ; ಇನ್ನು ಯುದ್ಧ ಮಾಡುವಂಥವರೂ ಇಲ್ಲ; ಮಗನೇ, ಮುದುಕರೂ ಕುರುಡರೂ ಎಂದು ಹೇಳದೆ ನಮ್ಮ ಮಾತನ್ನು ಕೇಳು, ಆಲೋಚಿಸು, ತಂದೆಯ ಮಾತಿಗೆ ಒಪ್ಪಿಗೆ ಕೊಡು" ಎಂದು ಹೇಳುತ್ತಾಳೆ.

## ಪದ್ಯಪಾಠ – ೨

**ಹಕ್ಕಿ ಹಾರುತಿದೆ ನೋಡಿದಿರಾ ?** **– ದ. ರಾ. ಬೇಂದ್ರೆ**

**೧. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?**

ತರತಮರಹಿತ ಸಮದೃಷ್ಟಿಯಿಂದ ಕೂಡಿದ ನೀಲಮೇಘಮಂಡಲ – ಸಮಬಣ್ಣ ಎಂದು ಹೇಳಿ ಕಾಲದ ದೈತ್ಯತೆಯನ್ನು ಸಂಕೇತಿಸುವ ಕವಿ ಮುಗಿಲಿಗೆ ರೆಕ್ಕೆಗಳು ಮೂಡಿ ಇಡೀ ಆಕಾಶವೇ ಹಾರಿದಂತೆ ಆಗುತ್ತದೆ ಎನ್ನುತ್ತಾರೆ. ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ ಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿರುವ ನೋಟ ಅದ್ಭುತವಾದುದು ಎಂದು ಕವಿ ಬೇಂದ್ರೆ ವರ್ಣಿಸುತ್ತಾರೆ.

**೨. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**

ಹಕ್ಕಿಯು (ಕಾಲಪಕ್ಷಿಯು) ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಹಕ್ಕಿಯು (ಕಾಲಪಕ್ಷಿಯು) ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಹೊಸಗಾಲದ ಹಸುಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.

**ಪದ್ಯಪಾಠ – ೩.**

**ಹಲಗಲಿ ಬೇಡರು** **– ಜಾನಪದ (ಸಂಗ್ರಹ)**

**೧. ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು?**

ಕ್ರಿ.ಶ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಬೇಡರು ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರ ನಾಯಕತ್ವದಲ್ಲಿ ಸಭೆ ಸೇರಿ ತಮ್ಮ ಬದುಕಿನ ಆಧಾರವಾದ ಆಯುಧಗಳನ್ನು ಸರ್ಕಾರಕ್ಕೆ ಹಿಂದಿರುಗಿಸಲು ಒಪ್ಪಲಿಲ್ಲ. ಆದರೆ ಬ್ರಟಿಷ್ ಸಿಪಾಯಿಗಳು ಬಂದು ಬಲವಂತವಾಗಿ ಆಯುಧಗಳನ್ನು ಕಸಿದುಕೊಳ್ಳಲು ಪ್ರಾರಂಭಿಸಿದರು. ಇದು ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು.

**೨. ಹಲಗಲಿಗೆ ದಂಡು ಬರಲು ಕಾರಣವೇನು?**

ಹಲಗಲಿಯ ಬೇಡರಾದ ಪೂಜೇರಿ ಹನುಮ, ಬ್ಯಾಡರ ಬಾಲ, ರಾಮ, ಜಡಗ ಇವರುಗಳು ಬ್ರಿಟಿಷ್ ಸರ್ಕಾರ ಹೊರಡಿಸಿದ್ದ ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ದಂಗೆ ಎದ್ದರು. ಈ ದಂಗೆಯನ್ನು ಹತ್ತಿಕ್ಕಲು ಬಂದ ಕಾರಕೂನನ ಕಪಾಳಕ್ಕೆ ಹೊಡೆದು ಸಿಪಾಯಿಗಳನ್ನು ಹೊಡೆದುರುಳಿಸಿದರು ಇದರಿಂದ ಕೋಪಗೊಂಡ ಕುಂಪಣಿ ಸರ್ಕಾರದ ಅಧಿಕಾರಿಗಳು ಹಲಗಲಿಯ ಬೇಡರ ದಂಗೆಯನ್ನು ಬಗ್ಗುಬಡಿಯಲು ದಂಡನ್ನು ಕರೆಯಿಸಿದರು.

**೩. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು?**

ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು. ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಬ್ರಿಟಿಷ್ ಸಿಪಾಯಿಗಳ ಗುಂಡಿಗೆ ಹೆದರಿ ಹಲಗಲಿಯ ಬೇಡರು ಗುಡ್ಡದ ಕಡೆಗೆ ಓಡಿ ತಲೆಮರೆಸಿಕೊಂಡರು.

**೪. ಲಾವಣಿಗಳನ್ನು ಏಕೆ ವೀರಗೀತೆಗಳು ಎನ್ನಲಾಗಿದೆ?**

ಲಾವಣಿಗಳು ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಒಂದು ಘಟನೆಯನ್ನು ಆಧರಿಸಿ, ಕಥನಾತ್ಮಕವಾಗಿ ಕಟ್ಟಿದ ಹಾಡನ್ನು ಲಾವಣಿಗಳೆನ್ನುವರು. ಲಾವಣಿಗಳು ಸಾಮಾನ್ಯವಾಗಿ ವೀರತನ ಹಾಗೂ ಸಾಹಸವನ್ನು ವರ್ಣಿಸುವುದರಿಂದ ಅವುಗಳನ್ನು  ವೀರಗೀತೆಗಳು ಎನ್ನುವರು.

**ಪದ್ಯಪಾಠ – ೪.**

**ವಚನ ಸೌರಭ** **– ಜೇಡರ ದಾಸಿಮಯ್ಯ, ಬಸವಣ್ಣ**

**೧. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರದಾಸಿಮಯ್ಯನ ಅಭಿಪ್ರಾಯವೇನು?**

ಪತಿ ಪತ್ನಿಯರು ಒಂದಾದ ಭಕ್ತಿ ಶಿವನಿಗೆ ಹಿತ. ಪತಿಪತ್ನಿಯರು ಒಂದಾಗದ ಭಕ್ತಿ ಅಮೃತದಲ್ಲಿ ವಿಷ ಬೆರತಂತೆ. ಇದನ್ನು ಶಿವನು ಮೆಚ್ಚುವುದಿಲ್ಲ. ನಿಷ್ಠನಾದ ಭಕ್ತ ದಟ್ಟವಾದ ಅರಣ್ಯದಲ್ಲಿ ಇದ್ದರೂ ಅದು ಅವನಿಗೆ ಪಟ್ಟಣ ಎನಿಸುವುದು. ನಿಷ್ಠೆಯಿಲ್ಲದೆ ಭಕ್ತ  ನಗರವಾಸಿಯಾದರೂ ಅವನಿಗೆ ಅದು ದಟ್ಟಡವಿಯೇ ಎಂದು ಜೇಡರ ದಾಸಿಮಯ್ಯ ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಅಭಿಪ್ರಾಯಪಟ್ಟಿದ್ದಾನೆ.

**೨. ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.**
ಮರ್ಕಟವು ಮರ ಹತ್ತಿ ಹಲವು ಕೊಂಬೆಗಳಿಗೆ ನೆಗೆಯುವಂತೆ ಬೆಂದ ಮನವು ಚಂಚಲವಾಗಿರುತ್ತದೆ. ಹೀಗಾದಾಗ ಮನಸ್ಸು ದೇವರೆಡೆಗೆ ತಿರುಗಲು ಸಾಧ್ಯವಿಲ್ಲ. ಪಲ್ಲಕ್ಕಿಯನ್ನು ಏರಿದ ನಾಯಿ ಹೊಲಸು ಕಂಡಾಗ ತನ್ನ ಸ್ವಭಾವದಂತೆ ಆ ಕಡೆಗೆ ಓಡುತ್ತದೆ. ಅದೇ ರೀತಿ ಚಂಚಲ ಮನಸ್ಸು ವಿಷಯ ಸುಖದ ಕಡೆಗೆ ವಾಲುತ್ತದೆ. ದೇವರನ್ನು ನೆನೆಯಲು ಬಿಡುವುದಿಲ್ಲ ಎಂದು ಬಸವಣ್ಣನವರು ತಮ್ಮ ವಚನದಲ್ಲಿ ತಿಳಿಸಿದ್ದಾರೆ.
**೩. ಮಾತಿನ ಮಹತ್ತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ?**
"ಮಾತು ಬೆಲೆ ಬಾಳುವ ಮುತ್ತಿನಹಾರದಂತೆ ಸ್ಪಷ್ಟವಾಗಿ, ಎಲ್ಲರಿಗೂ ಅರ್ಥವಾಗುವಂತೆ ಇರಬೇಕು. ಮಾತು ಮಾಣಿಕ್ಯದ ದೀಪ್ತಿಯಂತೆ ಹಿತವಾಗಿದ್ದು, ಜ್ಞಾನದ ಬೆಳಕನ್ನು ನೀಡಬೇಕು. ಮಾತು ಸ್ಫಟಿಕದ ಸಲಾಕೆಯಂತೆ ಪಾರದರ್ಶಕವಾಗಿದ್ದು ಸತ್ಯ ದಿಂದ ಕೂಡಿರಬೇಕು. ನಾವಾಡುವ ಮಾತು ದೇವರು ಮೆಚ್ಚುವಂತೆ ಇರಬೇಕು. ಅದೇರೀತಿ ನುಡಿಗೆ ತಕ್ಕ ನಡೆ ಇದ್ದರೆ ಮಾತ್ರ ದೇವರು ಒಲಿಯುವನು" ಎಂಬುದು ಬಸವಣ್ಣನವರ ಅಭಿಪ್ರಾಯವಾಗಿದೆ.

**ಪದ್ಯಪಾಠ – ೫.**
**ಸಂಕಲ್ಪ ಗೀತೆ – ಜಿ. ಎಸ್. ಶಿವರುದ್ರಪ್ಪ**

**೧. ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?**
ನಮ್ಮ ಬದುಕಿನ ಸುತ್ತಮುತ್ತಲು ಕವಿದಿರುವ ಕತ್ತಲೆಯನ್ನು ಕಳೆಯಲು ಪ್ರೀತಿಯೆಂಬ ಹಣತೆಯನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಜ್ಞಾನದೀವಿಗೆಯ ಮೂಲಕ ಎಚ್ಚರಿಕೆಯಿಂದ ಮುನ್ನಡೆಸಬೇಕಿದೆ.
**೨. ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ?**
ಋತುಗಳ ರಾಜನಾದ ವಸಂತನು ಬರಡಾಗಿರುವ ಕಾಡುಗಳು ಹಚ್ಚಹಸಿರಿನಿಂದ ಕಂಗೊಳಿಸುವಂತೆ ಮುಟ್ಟಬೇಕಿದೆ. ವಸಂತನ ಆಗಮನದಿಂದ ಬರಡಾಗಿರುವ ಕಾಡಿನಲ್ಲಿ ಮರಗಿಡಗಳು ಚಿಗುರಿ ಪ್ರಕೃತಿಗೆ ನವಚೈತನ್ಯ ಮೂಡಬೇಕಿದೆ ಎಂಬುದು ಕವಿಯ ಆಶಯವಾಗಿದೆ.
**೩. ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?**
ಭಾಷೆ, ಜಾತಿ, ಮತಧರ್ಮಗಳ ಭೇದಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು. ಬದುಕಿನಲ್ಲಿ ಹೊಸ ಭರವಸೆಗಳನ್ನು ಮೂಡಿಸಿ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ.
**೪. ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**
ಎಲ್ಲ ಮತಧರ್ಮಗಳು ದಾರಿ ತೋರಿಸುವ ದೀಪಗಳಾಗಿರುವುದರಿಂದ ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸ್ಸನ್ನು ಬಿತ್ತುತ್ತ ಬದುಕು ನಡೆಸಬೇಕು.

**ಪದ್ಯಪಾಠ – ೬.**
**ಕೌರವೇಂದ್ರನ ಕೊಂದೆ ನೀನು – ಕುಮಾರ ವ್ಯಾಸ**

**೧. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಉಭಯವನ್ನು ಬಿತ್ತಿದನು?**
"ಕರ್ಣ ನಿಮಗೂಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ. ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು.
**೨. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?**
ಕುಂತಿಯು ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನ್ನು ಪಡೆದಳು. ಮಾದ್ರಿಯು ಅಶ್ವಿನೀದೇವತೆಗಳ ಅನುಗ್ರಹದಿಂದ ನಕುಲ ಸಹದೇವರನ್ನು ಪಡೆದಳು.
**೩. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?**
ಕೃಷನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅ ಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು" ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ.ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು"ಎಂದು ಮನದಲ್ಲಿ ನೊಂದುಕೊಂಡನು.

**೪. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?**

ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ ಕೊಂದೆ" ಎಂದನು.

**೫. ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು?**

ಕರ್ಣನು ಕೃಷ್ಣನನ್ನು ಕುರಿತು "ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು.ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

**ಪದ್ಯಪಾಠ – ೭.**

**ವೀರಲವ – ಲಕ್ಷ್ಮೀಶ**

**೧. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ.**

ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು.

**೨. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**

ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ "ಭೂಮಂಡಲದಲ್ಲಿ ಕೌಸಲ್ಯೆಯು ಮಗನಾದರಾಮನು ಒಬ್ಬನೇ ವೀರನು ಇದು ಅವನ ಯಜ್ಞ ಕುದುರೆ ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರು ತಡೆಯಲಿ" ಎಂದ ಬರೆಯಲಾಗಿತ್ತು.

**೩. ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.**

ಲವನು ಆಶ್ರಮವನ್ನು ಹೊಕ್ಕ ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಬಾಳೆಯ ಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಹೆದರಿದ ಮುನಿಸುತರು "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು" ಎಂದು ಹೇಳಿದರು. ಆಗ ಲವನು ನಗುತ "ಬ್ರಾಹ್ಮಣರ ಮಕ್ಕಳು ಹೆದರಿದರೆ. ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಶೌರ್ಯದಿಂದ ಹೇಳಿದನು.

**ಪದ್ಯಪಾಠ – ೮.**

**ಸಂಕಟಕೆ ಗಡಿ ಇಲ್ಲ – ದು. ಸರಸ್ವತಿ**

**೧. ಗಡಿಯ ಆಚೆ-ಈಚೆ ಜೀವಿಗಳು ಏಕೆ ಶವವಾದವು?**

ಮಾನವನು ಭೂಮಿಯ ಮಾಲೀಕನಾದೆನೆಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡನು. ಈ ಗಡಿ ನನ್ನದು ಎಂದು ಗರ್ವಪಟ್ಟು ಕಾದಾಟ (ಯುದ್ಧ) ಮಾಡಿದ್ದರಿಂದ ಜೀವಿಗಳು ಶವವಾದವು.

**೨. ಸಂಕಟಕೆ ಗಡಿ ಇಲ್ಲ ಏಕೆ?**

ಮಾನವನು ಗರ್ವಪಟ್ಟು ತಾನು ನಿರ್ಮಿಸಿಕೊಂಡ ಗಡಿಯ ರಕ್ಷಣೆಗಾಗಿ ಯುದ್ಧ ಮಾಡಿದನು. ಇದರಿಂದ ಗಡಿ ಆಚೆ – ಈಚೆ ಅನೇಕ ಜೀವಗಳು ಹೋರಾಡಿ ಶವವಾದವು. ಗಡಿಯ ಎರಡೂ ಕಡೆಯು ನೆತ್ತರು ಹರಿಯಿತು. ಇದರಿಂದಾಗಿ ಗಡಿಯ ಎರಡು ಕಡೆಯವರು ಅನುಭವಿಸಿದ ನೋವು, ಸಂಕಟ ಒಂದೇ ತೆರನಾದುದು. ಆದ್ದರಿಂದ ಸಂಕಟಕೆ ಗಡಿ ಇಲ್ಲ ಎಂಬುದು ಕವಿ ಅಭಿಪ್ರಾಯವಾಗಿದೆ.

**೩.ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು?**

ತನ್ನನ್ನೇ ಸುಟ್ಟು ಬೆಳಕು ನೀಡುವ ಬತ್ತಿ, ಪುಣ್ಯವಂತರಿಗೆ ಬೆಳಕಾಗುವ ಮರ, ದಾಹಗೊಂಡವರ ತಣಿಸುವ ನೀರಿನ ಚಿಲುಮೆ, ಅಳುವ ಕಂದನ ನಗಿಸುವ ಅಮ್ಮನ ಕಂಠದ ಜೋಗುಳ, ಮಾನವನ ಅಜ್ಞಾನವನ್ನು ತೊಲಗಿಸುವ ವಾಗ್ದೇವಿಯಕೈಯ ಗ್ರಂಥ, ಮುಸ್ಸಂಜೆಯ ಹೊಸ್ತಿಲಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲು, ನೆಲಕ್ಕೆ ಬಿದ್ದು ಹೊರೆಯಾಗುವ ಮುನ್ನ ಅಂತ್ಯ ಕಾಣಬೇಕು.ಎಂದು ಕವಯತ್ರಿ ಅವರ ಆಸೆಯಾಗಿದೆ.

**ಪಠ್ಯ ಪೋಷಕ ಅಧ್ಯಯನ – 1.**

**ವಿಜ್ಞಾನ ಮತ್ತು ಸಮಾಜ – ಎಚ್. ನರಸಿಂಹಯ್ಯ**

**1. ವಿಜ್ಞಾನಿಗಳ ವೈರುಧ್ಯ ಭಾವನೆಯನ್ನು ವಿವರಿಸಿರಿ.**

ವಿಜ್ಞಾನಿಗಳು ಪ್ರಯೋಗಶಾಲೆಗಳಲ್ಲಿ ತಮ್ಮ ಹೆಚ್ಚಿನ ವಿಚಾರಶಕ್ತಿಯನ್ನೂ, ವೈಜ್ಞಾನಿಕ ಮನೋಭಾವವನ್ನೂ ಪ್ರದರ್ಶಿಸುತ್ತಾರೆ. ಆದರೆ ನಿಜಜೀವನದಲ್ಲಿ ಅವೈಜ್ಞಾನಿಕವಾಗಿ ವರ್ತಿಸುತ್ತಾರೆ. ಒಂದೇ ಮನಸ್ಸು ಒಮ್ಮೆ ತಾರ್ಕಿಕವಾಗಿ ಚಿಂತಿಸಿದರೆ ಮತ್ತೊಮ್ಮೆ ಅತಾರ್ಕಿಕವಾಗಿ ಯೋಚಿಸುತ್ತದೆ. ಯೋಚನೆಯಲ್ಲಿ ಏಕಸೂತ್ರತೆ ಕಂಡುಬರುವುದಿಲ್ಲ.

**2. ವೈಜ್ಞಾನಿಕ ಸಂಶೋಧನೆಗಳು ಯಾವಾಗ ಅರ್ಥರಹಿತವಾಗುತ್ತವೆ?**

ವಿಜ್ಞಾನಿಯೊಬ್ಬನ ವಸ್ತು ಸ್ಥಿರತೆಯ ವಿಶ್ವ ನಿಯಮ ಸಮಾಜದ ಕೆಲವರಿಗೆ ಮಾತ್ರ ಅನ್ವಯಿಸುವುದಿಲ್ಲ ಎಂದರೆ ಅದು ಮೂರ್ಖತನ. ಶೂನ್ಯದಿಂದ ಏನನ್ನಾದರೂ ಸೃಷ್ಟಿಸಬಹುದೆಂದರೆ ಅದು ಮೂರ್ಖತನದ ಪರಮಾವಧಿ. ಅಶಿಕ್ಷಿತನೊಬ್ಬ ಹೀಗೆ ಹೇಳಿದರೆ ಕ್ಷಮೆಯುಂಟು; ಆದರೆ ವಿದ್ಯಾವಂತ ಈ ರೀತಿ ಅಭಿಪ್ರಾಯವನ್ನು ತಿಳಿಸುವುದು ಶೋಚನೀಯ. ಇದು ನಿಜವಾದರೆ ಜಗತ್ತಿನ ವಿಜ್ಞಾನ ಕ್ಷೇತ್ರದಲ್ಲಿ ನಡೆದಿರು ಎಲ್ಲ ಶೋಧನೆಗಳು ಅರ್ಥರಹಿತವಾಗುತ್ತವೆ.

**3. ಲೇಖಕರ ಪ್ರಕಾರ 'ವಿಶ್ವಧರ್ಮ' ಯಾವಾಗ ರೂಪಿತವಾಗಬಲ್ಲದು?**

ಹೆಚ್. ನರಸಿಂಹಯ್ಯನವರ ಪ್ರಕಾರ"ವೈಜ್ಞಾನಿಕ ಮನೋಧರ್ಮ, ವಿಚಾರಗಳು ಪಠ್ಯಗಳಲ್ಲಿ ಸೇರ್ಪಡೆಯಾಗಬೇಕು. ಎಲ್ಲ ವಿಜ್ಞಾನದ ಅಧ್ಯಾಪಕರೂ ವೈಜ್ಞಾನಿಕ ಮನೋಧರ್ಮವನ್ನು ಮೊದಲು ತಮ್ಮಲ್ಲಿ ರೂಢಿಸಿಕೊಳ್ಳುವುದರ ಜೊತೆಗೆ ವ್ಯಾಪಕವಾಗಿ ಪ್ರಚಾರ ಮಾಡಬೇಕು. ನಮ್ಮ ದೇಶ ನೂರಾರು ವರ್ಷಗಳಿಂದ ಎದುರಿಸುತ್ತಿರುವ ಜಟಿಲಾತಿಜಟಿಲವಾದ ಸಮಸ್ಯೆಗಳನ್ನೂ ಸಹ ವೈಜ್ಞಾನಿಕ ಮಾರ್ಗಗಳಿಂದ ಪರಿಹರಿಸಲು ಸಾಧ್ಯ. ನಮ್ಮ ಸಮಾಜ ಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರವೂ ಸಹ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳಿಂದ ಸಾಧ್ಯ. ಆಗ ಮಾತ್ರ ಮಾನವೀಯ ಮೌಲ್ಯ ಹಾಗೂ ನೀತಿಯಾಧಾರಿತ ವಿಶ್ವಧರ್ಮ ರೂಪಿತವಾಗ ಬಲ್ಲುದು."

**4. ಸಮಾಜ ಸುಧಾರಣೆ ಯಾವಾಗ ಸಾಧ್ಯವೆಂದು ಲೇಖಕರು ವಿವರಿಸಿದ್ದಾರೆ?**

ವಿಜ್ಞಾನ ಮತ್ತದರ ಬಳಕೆ ಹಾಗೂ ವೈಜ್ಞಾನಿಕ ಮನೋಧರ್ಮವನ್ನು ಪಡೆದು ಕಾರ್ಯಪ್ರವೃತ್ತರಾದಾಗ ಮಾತ್ರ ಬಡತನ ನಿರ್ಮೂಲನ ಮತ್ತು ಶೋಷಣೆಗಳ ನಾಶ ಸಾಧ್ಯವಾಗುತ್ತದೆ ಅದು ಪ್ರಗತಿವಿರೋಧಿ ಸಿದ್ಧಾಂತಗಳನ್ನೂ ಸ್ವಹಿತಾಸಕ್ತಿಯನ್ನೂ ದೂರಮಾಡಬಲ್ಲುದು. ವಿಜ್ಞಾನಿಗಳು ವಿಜ್ಞಾನದಲ್ಲಿ ಜೀವಂತ ನಂಬಿಕೆ ಹೊಂದಬೇಕು.ಅಂತೆಯೇ ತರ್ಕಬದ್ಧರಾಗಿ ಧೈರ್ಯ ದಿಂದ ವರ್ತಿಸಬೇಕು ಆಗ ಸಮಾಜದ ಸುಧಾರಣೆ ಆಗುತ್ತದೆ.

**ಪಠ್ಯ ಪೋಷಕ ಅಧ್ಯಯನ – 2.**

**ನಾಮಫಲಕ – ನಿರ್ಮಲ**

**4. ಪಂಪನು ತನ್ನ ಹೆಸರನ್ನು ಏಕೆ ಕೆತ್ತಿಸಲಿಲ್ಲ?**

ಪಂಪನಿಗೆ ತನ್ನ ಹೆಸರನ್ನು ಬಂಡೆಯ ಮೇಲೆ ಕೆತ್ತಿಸದಿದ್ದರೂ ತನ್ನ ಕೃತಿಗಳ ಮಹತ್ತ್ವದಿಂದ ಶತಮಾನಗಳ ಕಾಲ ಉಳಿಯುತ್ತದೆ ಎಂಬ ನಂಬಿಕೆಯಿತ್ತು. ದಿಗ್ವಿಜಯವನ್ನು ವೃಷಭಾಚಲದಲ್ಲಿ ಬರೆಸಲು ಹೋದ ಭರತನ ಗರ್ವಭಂಗವಾದ್ದನ್ನು ಪಂಪನೇ ತನ್ನ ಆದಿಪುರಾಣದಲ್ಲಿ ನಿರೂಪಿಸಿದ್ದನು. ಈ ಕಾರಣಗಳಿಂದ ಪಂಪನು ತನ್ನ ಹೆಸರನ್ನು ಕೆತ್ತಿಸಲಿಲ್ಲ.

**5. ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಏಕೆ ಸಾಧ್ಯವಾಗಲಿಲ್ಲ?**

ವೃಷಭಾಚಲದಲ್ಲಿ ಹಿಂದಿನ ಅನೇಕ ಚಕ್ರವರ್ತಿಗಳು ಬರೆಸಿದ ಆತ್ಮಪ್ರಶಂಸೆಗಳು ತುಂಬಿಹೋಗಿದ್ದು ಭರತಚಕ್ರವರ್ತಿಗೆ ತನ್ನ ಹೆಸರು ಬರೆಸಲು ಸೂಕ್ತವಾದ ಸ್ಥಳ ದೊರಕಲಿಲ್ಲ ಆದ್ದರಿಂದ ಭರತಚಕ್ರವರ್ತಿಗೆ ತನ್ನ ಹೆಸರನ್ನು ಬರೆಸಲು ಸಾಧ್ಯವಾಗಲಿಲ್ಲ.

**ಪಠ್ಯ ಪೋಷಕ ಅಧ್ಯಯನ – 3.**

**ಉದಾತ್ತ ಚಿಂತನೆಗಳು – ಸಂಗ್ರಹ**

**2. ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೇನು?**

ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ವದಿಂದ ಅನುಗಮನ ಮಾಡಿದ ತತ್ವ. ಇದರಿಂದ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ವ್ಯಕ್ತಿಗೆ ಪಾಲು ಇರುತ್ತದೆ ಅಲ್ಲದೆ ಜನರಿಗೆ ಜೀವನ, ಸ್ವಾತಂತ್ರ್ಯ ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಜವಾಬ್ದಾರಿಯೂ ಇರುತ್ತದೆ.

**3. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**

"ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಆವಶ್ಯಕ ಅಂಶ" ಎನ್ನುವುದು ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವಾಗಿತ್ತು.

**4. 'ಅನ್ ಟು ದಿ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?**

'ಆನ್ ಟು ದಿ ಲಾಸ್ಟ್' ಕೃತಿಯಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಗಾಂಧೀಜಿಯವರು ತಮ್ಮ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು.

**5. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**

ಜನರಿಗೆ ಸಂಸ್ಕೃತಿಯನ್ನು ಕೊಡಬೇಕು ಆಗ ಮಾತ್ರ ದೇಶದ ಪ್ರಗತಿ ಸ್ಥಿರವಾಗಲು ಸಾಧ್ಯ ಏಕೆಂದರೆ ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು ಎಂಬುದು ವಿವೇಕಾನಂದರ ಅಭಿಪ್ರಾಯವಾಗಿತ್ತು.

**6. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?**

"ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣಕ್ಕಾಗಿ ಕಾರ್ಯೋನ್ಮುಖರಾಗಿ ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಲು ದುಡಿದಾಗ ಬಾಳಿನಲ್ಲಿ ತೃಪ್ತಿ ದೊರಕುತ್ತದೆ" ಎನ್ನುವುದು ವಿವೇಕಾನಂದರ ಅಭಿಪ್ರಾಯ.

**ಪದ್ಯ ಪೋಷಕ ಅಧ್ಯಯನ – 5.**

**ಜನಪದ ಒಗಟುಗಳು – ಸಂಗ್ರಹ**

**1. ಒಂದನೆಯ ಒಗಟಿನ ಉತ್ತರ 'ಅಂಗಿ' ಎಂಬುದನ್ನು ಸಮರ್ಥಿಸಿರಿ.**

ಅಂಗಿಯ ಎರಡು ತೋಳುಗಳ ಭಾಗವೇ ಕೈ. ಅಂಗಿಗೆ ತಲೆಯಿಲ್ಲ. ಅಂಗಿಯ ಬೇರೆಬೇರೆ ಭಾಗ ಸೇರಿಸಿ ಹೊಲಿಗೆ ಹಾಕಿರುವುದೇ ನವಗಾಯ, ಮೆಲ್ಲನೆ ಬಂದು ಶರೀರಕ್ಕೆ ತೊಡಿಸುವುದರಿಂದ ಅದು ಅಂಗಿಯಾಗಿ ಎಲ್ಲರಿಗೂ ಪ್ರಚಂಡವಾಗಿದೆ.

**2. ಎರಡನೆಯ ಒಗಟಿಗೆ 'ಕುಪ್ಪಸ'ವು ಉತ್ತರ ಎಂಬುದನ್ನು ಹೇಗೆ ಹೇಳುವಿರಿ?**

ಕುಪ್ಪಸಕ್ಕೆ ಅಂಗೈಯನ್ನು ತೂರಿಸಿದರೆ ಮುಂಗೈಯನ್ನು ದಾಟಿ ಶರೀರಕ್ಕೆ ಕೂರುತ್ತದೆ. ಆದ್ದರಿಂದ ಅದು ಸಿಂಗಳೀಕನಾಗದೆ ಕುಪ್ಪಸವಾಗಿದೆ.

**3. ಐದನೆಯ ಒಗಟಿಗೆ 'ತಾವರೆ ಬೇರು' ಎಂಬುದು ಉತ್ತರ – ಹೇಗೆ?**

ಕೆಸರಿನಲ್ಲಿ ಹುಟ್ಟಿ ಕೆಸರಿನಲ್ಲಿ ಬೆಳೆದು ಗಿಡವಾಗುವುದೆಂದರೆ ಅದು ತಾವರೆಯೇ ಹೌದು. ತಾವರೆ ಹುಟ್ಟುವುದು ಕೆಸರಿನಲ್ಲೇ ಆಗಿದೆ. ಆದ್ದರಿಂದ ಆ ಒಗಟಿಗೆ ಅರ್ಥ ತಾವರೆ ಬೇರು.

**4. ಎಂಟನೆಯ ಒಗಟಿನ ಉತ್ತರ 'ಕೊಕ್ಕರೆ' ಎಂಬುದನ್ನು ಸಮರ್ಥಿಸಿ.**

ಕೊಕ್ಕರೆ ಕಲ್ಲಿನಲ್ಲಿ ಕುಕ್ಕುವುದಿಲ್ಲ. ನೀರಿನಲ್ಲಿ ಮುಳುಗದೆ ತೇಲುತ್ತದೆ. ಮಡಿಮಡಿಯಾಗಿ ಬಿಳಿಯಾಗಿ ಇರುವುದರಿಂದ ಈ ಒಗಟಿನ ಉತ್ತರ ಕೊಕ್ಕರೆ.

**5. ಒಗಟುಗಳಿಂದ ಶೈಕ್ಷಣಿಕವಾಗಿ ಏನು ಲಾಭ?**

ಒಗಟುಗಳಿಂದ ಚಿಂತನೆ ಮಾಡುವ ಮನೋಭಾವ ಹೆಚ್ಚುತ್ತದೆ. ಉತ್ತರ ಕಂಡುಕೊಳ್ಳಲು ಮನಸ್ಸು ಆಲೋಚಿಸುತ್ತದೆ. ಮುದುಡಿದ ಮನಸ್ಸನ್ನು ಅರಳಿಸಲು, ಮನೋರಂಜನೆ ನೀಡಲು ಒಗಟುಗಳು ಸಹಾಯಕವಾಗುತ್ತವೆ. ಜನಪದರ ಬುದ್ಧಿವಂತಿಕೆಯನ್ನು ತಿಳಿಯುವುದರ ಜೊತೆಗೆ ಒಂದು ವಸ್ತುವನ್ನು ಹೇಗೆಲ್ಲ ಬಣ್ಣಿಸಬಹುದೆಂಬ ಚಿಂತನೆ ಮೂಡುತ್ತದೆ.

## ಸಂದರ್ಭದೊಂದಿಗೆ ವಿವರಿಸಿ, – ೧೨ಅಂಕಗಳು

**ಗದ್ಯಪಾಠ – ೧**

**ಶಬರಿ – ಪು. ತಿ. ನರಸಿಂಹಾಚಾರ್**

**ಕೊಟ್ಟಿರುವ ಪ್ರತಿ ಹೇಳಿಕೆಯನ್ನು ಸಂದರ್ಭದೊಂದಿಗೆ ವಿವರಿಸಿ, ಸ್ವಾರಸ್ಯವನ್ನು ಬರೆಯಿರಿ.**

**೧. "ಆವುದೀ ಮರುಳು? ನಮ್ಮೆಡೆಗೆ ಬರುತಿಹುದು."**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ಸೀತಾಪಹರಣದ ಅನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತ, ತಪಸ್ವೀ ಧನುಪತ್ರರ ಸೂಚನೆಯಂತೆ ಮಾತಂಗಾಶ್ರಮವನ್ನು ಪ್ರವೇಶಿಸುವ ಸಂದರ್ಭದಲ್ಲಿ ಎದುರಿಗೆ ಬರುತ್ತಿದ್ದ ವೃದ್ಧೆಯನ್ನು (ಶಬರಿಯನ್ನು) ಕಂಡು ರಾಮನು ಈ ಮಾತನ್ನು ಲಕ್ಷ್ಮಣನಿಗೆ ಹೇಳುತ್ತಾನೆ.

**ಸ್ವಾರಸ್ಯ :–** ಶ್ರೀರಾಮನ ಬರುವಿಕೆಗಾಗಿ ಕಾದು, ಕಾತರಿಸಿ,ಮರುಳಳಂತೆ ಆಗಿದ್ದ ವೃದ್ಧೆ ಶಬರಿಯನ್ನು ಕಂಡು ರಾಮಲಕ್ಷ್ಮಣರು ಭಯಗೊಂಡದ್ದನ್ನು ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ವರ್ಣಿಸಲಾಗಿದೆ.

**೨. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ತನ್ನಿಂದ ಇನಿತು ಉಪಕಾರವಿಲ್ಲದಿದ್ದರು ತನ್ನನ್ನು ಪ್ರೀತಿಯಿಂದ ನೆನೆಯುತ್ತ ಹಂಬಲಿಸುತ್ತಿರುವ ವೃದ್ಧೆ ಶಬರಿಯನ್ನು ಕಂಡ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಪೂಜ್ಯೆಯಾದ ಶಬರಿಯು ತನ್ನನ್ನು ಪ್ರೀತಿಯಿಂದ ನೆನೆಯುತ್ತ, ಬರುವಿಕೆಗಾಗಿ ಭಕ್ತಿಯಿಂದ ಹಂಬಲಿಸುತ್ತ ಇರುವ ದೃಶ್ಯವನ್ನು ನೋಡಿ ರಾಮನು "ಅವಳ ಅನುರಾಗವನ್ನು ಕಂಡು ನಾಚಿದೆನು" ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

**೩. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವದೇ?"**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ಮಾತಂಗಾಶ್ರಮವನ್ನು ಪ್ರವೇಶಿಸಿದ ಸಂದರ್ಭದಲ್ಲಿ "ಎಂದು ಕಾಣುವೆನು ಶ್ರೀರಾಮನನ್ನು, ಸನ್ಮಂಗಳ ಮೂರುತಿಯನ್ನು" ಎಂದು ಹಾಡುತ್ತ ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕಂಡು ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ತನಗಾಗಿ ಹಂಬಲಿಸುತ್ತಿರುವ ಶಬರಿಯನ್ನು ಕುರಿತು ರಾಮನು ಏನೂ ಅರಿಯದವನಂತೆ"ದಾರಿಗರಾದ ನಮಗೆ ಇಲ್ಲಿ ಉಳಿದುಕೊಳ್ಳಲು ಸ್ಥಳಾವಕಾಶ ದೊರೆಯುವದೇ?"ಎಂದು ಕೇಳುವುದು ಸ್ವಾರಸ್ಯಪೂರ್ಣವಾಗಿದೆ.

**೪. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ?"**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು "ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು, ಇಷ್ಟು ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು" ಎಂದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ಹೇಳುತ್ತಾಳೆ.

**ಸ್ವಾರಸ್ಯ :–** "ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮಧುರವಾದುದು" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾಳೆ.

**೫. "ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು."**

**ಆಯ್ಕೆ :–**ಈ ವಾಕ್ಯವನ್ನು **ಪು. ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'**ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :–**ರಾಮನ ದರ್ಶನ ಭಾಗ್ಯದಿಂದ ಸಂತುಷ್ಟಳಾದ ಶಬರಿಯು ಮುಕ್ತಿಯನ್ನು ಪಡೆಯುವುದಕ್ಕಾಗಿ ಅಗ್ನಿ ಪ್ರವೇಶಿಸಿದ ಸಂದರ್ಭದಲ್ಲಿ ರಾಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** "ಬೆಳಕಿಗೆ ಒಲಿದವರು ಉರಿವ ಬತ್ತಿಯ ಕಪ್ಪನ್ನು ನೋಡುವುದಿಲ್ಲ" ಎಂಬ ಮಾತು ಶಬರಿಯ ರಾಮಭಕ್ತಿಯ ಶ್ರೇಷ್ಠತೆಯನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತದೆ.

## ಗದ್ಯಪಾಠ – ೨.

## ಅಮೆರಿಕದಲ್ಲಿ ಗೊರೂರು.– ಗೊರೂರು ರಾಮಸ್ವಾಮಿ ಅಯ್ಯಂಗಾರ್

**೧. "ನನಗೆ ಇಂಗ್ಲಿಷ್ ಬಂದಿದ್ದರೆ ನಾನು ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೇ ಕರೆಸಿ ಬಿಡುತ್ತಿದ್ದೆ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಗೊರೂರು ರಾಮಸ್ವಾಮಿ ಅಯ್ಯಂಗಾರರ ಅಡುಗೆಯ ಮನೆಯಎಲ್ಲ ಸ್ವಿಚ್‌ಗಳೂ ಆಫ್ ಆಗಿದ್ದರೂ ವಿದ್ಯುತ್ ಒಲೆಯಿಂದ ಕೊಂಬಿನ ಸದ್ದು ಒಂದೇ ಸಮನಾಗಿ ಬರುತ್ತಿತ್ತು. ಇದರಿಂದ ಭಯಗೊಂಡು ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತು ಎಂಬ ಆತಂಕ ಉಂಟಾದ ಸಂದರ್ಭದಲ್ಲಿ ಗೊರೂರರ ಹೆಂಡತಿಯು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಗೊರೂರರ ಹೆಂಡತಿಯು ತಮ್ಮ ಯಜಮಾನರಿಗೆ ಮನೆಯ ವಿದ್ಯುತ್ ಯಂತ್ರಗಳನ್ನು ಬಳಸುವುದರ ಜ್ಞಾನ ಇಲ್ಲದಿರುವ ಬಗ್ಗೆ ತಮ್ಮ ಕೋಪವನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ

**೨. "ನಮ್ಮ ಪುಸ್ತಕದಲ್ಲಿ ಗಾಂಧಿ ಮೇಲೆ ಒಂದು ಪಾಠವಿದೆಯಲ್ಲ."**

**ಆಯ್ಕೆ :–** ಈ ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅಮೆರಿಕದ ಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ "ನೀವು ಗಾಂಧೀಜಿಯವರ ಹೆಸರು ಕೇಳಿರುವಿರಾ?" ಎಂದು ಪ್ರಶ್ನಿಸಿದ ಸಂದರ್ಭದಲ್ಲಿ ಆ ಶಾಲೆಯ ವಿದ್ಯಾರ್ಥಿಯೊಬ್ಬನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :–** ಅಮೆರಿಕದ ವಿದ್ಯಾರ್ಥಿಗಳಿಗೆ ಗಾಂಧೀಜಿಯವರ ಪರಿಚಯವಿತ್ತು ಎಂಬುದು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

**೩. "ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ."**

**ಆಯ್ಕೆ :– ಈ** ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–**ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅಮೆರಿಕದ ಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ತಾವು ಧರಿಸಿದ್ದ ಖಾದಿಬಟ್ಟೆಯ ವೈಶಿಷ್ಟ್ಯವನ್ನು ಕುರಿತು ವಿವರಿಸುವ ಸಂದರ್ಭದಲ್ಲಿ ಗೊರೂರರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಯಂತ್ರದ ಸಹಾಯವಿಲ್ಲದೆ ತಯಾರಾಗುವ ಖಾದಿಬಟ್ಟೆಯ ವೈಶಿಷ್ಟ್ಯತೆಯು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

**೪. "ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ."**

**ಆಯ್ಕೆ :– ಈ** ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಗೊರೂರರವರು ತಮ್ಮ ಅಡುಗೆ ಮನೆಯ ವಿದ್ಯುತ್ ಒಲೆಯಲ್ಲಿ ಉಂಟಾದ ಸಮಸ್ಯೆಯನ್ನು ಪರಿಹರಿಸಲು ಶಾಲೆಯ ಉಪಾಧ್ಯಾಯರ ಸಹಾಯವನ್ನು ಕೇಳಿದ ಸಂದರ್ಭದಲ್ಲಿ ಉಪಾಧ್ಯಾಯರು ಶಾಲೆಯ ಒಬ್ಬ ಹುಡುಗನಿಗೆ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಸಂಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡಬೇಕೆಂಬಅಮೆರಿಕದ ಉಪಾಧ್ಯಾಯರ ಮನೋಧರ್ಮ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

**೫. "ಕೈಯಿಂದ ಇದನ್ನು ಮಾಡುವುದು ಹೇಗೋ."**

**ಆಯ್ಕೆ :– ಈ** ವಾಕ್ಯವನ್ನು ಶ್ರೀ **ಗೊರೂರು ರಾಮಸ್ವಾಮಿ ಅಯ್ಯಂಗಾರ್** ಅವರು ರಚಿಸಿರುವ **'ಅಮೆರಿಕದಲ್ಲಿ ಗೊರೂರು'** ಪ್ರವಾಸ ಕಥನದಿಂದ ಆಯ್ದ **'ಅಮೆರಿಕದಲ್ಲಿ ಗೊರೂರು'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :–** ಅಮೆರಿಕದ ಶಾಲೆಯ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಗೊರೂರು ರಾಮಸ್ವಾಮಿ ಅಯ್ಯಂಗಾರರು "ತಾವು ಧರಿಸಿದ್ದ ಖಾದಿಬಟ್ಟೆ ಪೂರ್ಣವಾಗಿ ಕೈಯಿಂದಲೇ ತಯಾರಾದದ್ದು ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಸೋಂಕು ಉಂಟಾಗಿಲ್ಲ" ಎಂದು ಹೇಳಿದ ಸಂದರ್ಭದಲ್ಲಿ ಉಪಾಧ್ಯಾಯರೊಬ್ಬರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :–** ಅಮೆರಿಕದ ಉಪಾಧ್ಯಾಯರ ಮನದಲ್ಲಿ ಉಂಟಾದ ಆಶ್ಚರ್ಯ ಹಾಗೂ ಅಪನಂಬಿಕೆಯು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತಗೊಂಡಿದೆ.

## ಗದ್ಯಪಾಠ – ೩.

**ಜೀವನದೃಷ್ಟಿ. – ವಿನಾಯಕ ಕೃಷ್ಣ ಗೋಕಾಕ್.**

**೧. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು".**

**ಆಯ್ಕೆ:** ಈ ವಾಕ್ಯವನ್ನು **'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರ ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:**ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಒಂದು ಹೆಚ್ಚಿನ ಸ್ಥಾನವಿದೆ ಎಂಬುದನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:**ತನ್ನಲ್ಲಿಯೂ ಪರರಲ್ಲಿಯೂ ಅಡಗಿರುವ ಆತ್ಮವು ಒಂದೇ ಎಂದು ಅರಿತಾಗ ಬದುಕು ಸುಖಮಯವಾಗುತ್ತದೆ ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**೨. "ತನ್ನ ಗುಂಗಿನಲ್ಲಿದ್ದ ಈ ಅಂತರ್ಜೀವಿಗೆ ಪರರ ಹಂಗೆಲ್ಲಿ?"**

**ಆಯ್ಕೆ:** ಈ ವಾಕ್ಯವನ್ನು **'ವಿನಾಯಕ,** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರ ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:**ಅಂತರ್‌ಜೀವಿಯ ವ್ಯಕ್ತಿತ್ವವನ್ನು ವರ್ಣಿಸುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:**ಅಂತರ್‌ಜೀವಿಯು ಪರರ ಹಂಗಿಗೆ ಒಳಪಡದೆ ತನ್ನ ಅಂತರಂಗದ ಭವ್ಯತೆಯ ಕಡೆಗೆ ಹೆಚ್ಚು ಗಮನ ಹರಿಸುತ್ತಾನೆ ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

**೩. "ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು".**

**ಆಯ್ಕೆ:** ಈ ವಾಕ್ಯವನ್ನು **'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರ ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:**ಸಮಾಜದಲ್ಲಿ ಕಲೋಪಾಸಕನ ಮಹತ್ತ್ವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಲೇಖಕರು ಒಬ್ಬ ಹಿರಿಯ ಸಾಹಿತಿಯ ಈ ಮಾತನ್ನು ಉದಾಹರಿಸುತ್ತಾರೆ.

**ಸ್ವಾರಸ್ಯ:**ಕಲೋಪಾಸಕರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಸಮಾಜದ ಆದ್ಯ ಕರ್ತವ್ಯ ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

**೪. "ದಾತೃವಿನ ಮನವನ್ನು ಹತ್ತುಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು".**

**ಆಯ್ಕೆ:** ಈ ವಾಕ್ಯವನ್ನು **'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರ ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:**ಲೇಖಕರು ಸಾಧಕನ ಕರ್ತವ್ಯಗಳನ್ನು ಕುರಿತು ವಿವರಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:**ಸಾಧಕನು ದಾನವನ್ನು ಸ್ವೀಕರಿಸುವ ಮೊದಲು ದಾನಿಯ ಯೋಗ್ಯತೆಯನ್ನು ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು ಅಂದರೆಅಪಾತ್ರರಿಂದ ದಾನವನ್ನು ಸ್ವೀಕರಿಸಬಾರದು ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

**೫. "ಜೀವನರಥಕ್ಕೆ ಒಗ್ಗಾಲಿಯ ಭೀತಿಯಿದೆ".**

**ಆಯ್ಕೆ:** ಈ ವಾಕ್ಯವನ್ನು **'ವಿನಾಯಕ'** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿ. ಕೃ.ಗೋಕಾಕ್** ಅವರ ರಚಿಸಿರುವ **'ಜೀವನ ಪಾಠಗಳು'** ಪ್ರಬಂಧ ಸಂಕಲನದಿಂದ ಆಯ್ದ **'ಜೀವನದೃಷ್ಟಿ'** ಗದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ವ್ಯಕ್ತಿಯ ಜೀವನದಲ್ಲಿ ಆಂತರಿಕ ದೃಷ್ಟಿಯ ಹಾಗು ಅನ್ಯರ ಹಿತದೃಷ್ಟಿ ಪ್ರಜ್ಞೆಯ ಸಮ್ಮಿಲನವಾಗಿರಬೇಕು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** ವ್ಯಕ್ತಿಯಲ್ಲಿ ಸ್ವಾನುಭೂತಿ ಮಾತ್ರ ಇದ್ದರೆ ಸಾಲದು; ಸಹಾನುಭೂತಿಯೂ ಇರಬೇಕು. ಇವೆರಡು ಜೀವನರಥದ ಎರಡು ಗಾಲಿಗಳಿದ್ದಂತೆ ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

## ಗದ್ಯಪಾಠ – ೪

**ಧರ್ಮಸಮದೃಷ್ಟಿ. – ಶಾಸನ (ಸಂಗ್ರಹ)**

**೧. "ಪಾಷಂಡ ಸಾಗರ ಮಹಾಬಡವಾಮುಖಾಗ್ನಿಃ"**

**ಆಯ್ಕೆ :**ಈ ವಾಕ್ಯವನ್ನು ಶ್ರೀ **ಬಿ. ಎಂ.ಶ್ರೀ** ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.

**ಸಂದರ್ಭ :**ವಿಜಯನಗರ ಸಾಮ್ರಾಜ್ಯದ ರಾಜ ವೀರಬುಕ್ಕರಾಯನ ಕಾಲದ 'ಧರ್ಮಸಮದೃಷ್ಟಿ' ಶಾಸನದ ಪ್ರಾರಂಭದಲ್ಲಿ ಶ್ರೀರಾಮಾನುಜಾಚಾರ್ಯರನ್ನು ಸ್ಮರಿಸುವ ಸಂದರ್ಭದಲ್ಲಿ ಶಾಸನಕಾರನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**ಸಮುದ್ರ ಮಧ್ಯದಲ್ಲಿ ಬಡಬಾನಲ ಇರುವಂತೆ ನಾಸ್ತಿಕರ ನಡುವೆ ಶ್ರೀರಾಮಾನುಜಾಚಾರ್ಯರು ಆಸ್ತಿಕರಾಗಿ ಶೋಭಿಸುತ್ತಿದ್ದರು ಎಂಬುದನ್ನು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**೨. "ಎಲ್ಲಾ ರಾಜ್ಯದೊಳಗುಳ್ಳಂತಹ ಬಸ್ತಿಗಳಿಗೆ ಶ್ರೀವೈಷ್ಣವರು ಶಾಸನವ ನಟ್ಟು ಪಾಲಿಸುವರು"**

**ಆಯ್ಕೆ :**ಈ ವಾಕ್ಯವನ್ನು ಶ್ರೀ **ಬಿ. ಎಂ.ಶ್ರೀ** ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.

**ಸಂದರ್ಭ :**ರಾಜನಾದವೀರಬುಕ್ಕರಾಯನು ಶ್ರೀವೈಷ್ಣವರು ಹಾಗೂ ಜೈನರ ನಡುವೆ ಸಂಘರ್ಷವುಂಟಾದ ಸಮಯದಲ್ಲಿ ಸಭೆ ಕರೆದು, ಅವರ ಕೈಕೈ ಹಿಡಿಸಿ ಸಾಮರಸ್ಯದಿಂದ ಇರುವಂತೆ ಸೂಚಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**ಶ್ರೀವೈಷ್ಣವರು ಜೈನ ಬಸದಿಗಳನ್ನು ಗೌರವಿಸಬೇಕು ಎಂದು ಶಾಸನ ಬರೆಸಿರುವುದರಲ್ಲಿ ರಾಜನಾದ ವೀರಬುಕ್ಕರಾಯನ ಧರ್ಮಸಮದೃಷ್ಟಿಯನ್ನು ಕಾಣಬಹುದಾಗಿದೆ.

**೩. "ಮಿಕ್ಕ ಹೊನ್ನಿಂಗೆ ಜೀರ್ಣಜಿನಾಲಯಂಗಳಿಗೆ ಸೊದೆಯನಿಕ್ಕುವುದು."**

**ಆಯ್ಕೆ :**ಈ ವಾಕ್ಯವನ್ನು ಶ್ರೀ **ಬಿ. ಎಂ.ಶ್ರೀ** ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.

**ಸಂದರ್ಭ :**ರಾಜನಾದ ವೀರಬುಕ್ಕರಾಯನು ಜೈನಧರ್ಮದ ಸುಧಾರಣೆಗಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು ಸೂಚಿಸುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**ಜೀರ್ಣಾವಸ್ಥೆಯಲ್ಲಿರುವ ಜಿನಾಲಯಗಳಿಗೆ ಸುಣ್ಣ ಬಳಿದು ಪುನಶ್ಚೇತನ ಗೊಳಿಸಬೇಕು ಎಂಬ ವಿಶಾಲ ಮನೋಭಾವನೆಯನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ.

೪. **"ಈ ಮಾಡಿದ ಕಟ್ಟಳೆಯನು ಆವನೊಬ್ಬನು ಮೀರಿದವನು ರಾಜದ್ರೋಹಿಯಪ್ಪನು".**
**ಆಯ್ಕೆ :**ಈ ವಾಕ್ಯವನ್ನು ಶ್ರೀ ಬಿ. ಎಂ.ಶ್ರೀ ಅವರು ಸಂಪಾದಿಸಿರುವ **'ಕನ್ನಡ ಬಾವುಟ'** ಕೃತಿಯಿಂದ ಆಯ್ದ **'ಧರ್ಮಸಮದೃಷ್ಟಿ'** ಶಾಸನದಿಂದ ಆರಿಸಲಾಗಿದೆ.
**ಸಂದರ್ಭ :** ರಾಜನಾದವೀರಬುಕ್ಕರಾಯನು ಶ್ರೀವೈಷ್ಣವರು ಹಾಗೂ ಜೈನರ ನಡುವೆ ಸಂಘರ್ಷವುಂಟಾದ ಸಮಯದಲ್ಲಿ ಸಭೆ ಕರೆದು, ಅವರ ಕೈಕೈ ಹಿಡಿಸಿ ಸಾಮರಸ್ಯದಿಂದ ಇರುವಂತೆ ಸೂಚಿಸಿ ಶಾಸನ ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ :**ರಾಜನು ಮಾಡಿದ ಶಾಸನವನ್ನು ಯಾರು ಮೀರಬಾರದು; ಮೀರಿದರೆ ಅವರಿಗೆ ರಾಜದ್ರೋಹಿಗೆ ಆಗುವ ಶಿಕ್ಷೆಯು ಆಗುತ್ತದೆ ಎಂಬ ಎಚ್ಚರಿಕೆಯನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ.

## ಗದ್ಯಪಾಠ – ೫

**ಭಾಗ್ಯಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ – ಡಿ. ಎಸ್. ಜಯಪ್ಪ ಗೌಡ**

೧. **"ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ"**
**ಆಯ್ಕೆ :** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗ ದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ಪಂಡಿತ್ ಜವಾಹರಲಾಲ್ ನೆಹರು ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಪ್ರಧಾನ ಭಾಷಣ ಮಾಡಿದ ಸಂದರ್ಭದಲ್ಲಿ ಈ ಮಾತುಗಳನ್ನು ಹೇಳುತ್ತಾರೆ.
**ಸ್ವಾರಸ್ಯ :** ವಿಶ್ವೇಶ್ವರಯ್ಯ ಅವರು 'ಮಾತಿಗಿಂತ ಕೃತಿ ಲೇಸು' ಎಂದು ತಿಳಿದು ಕಾರ್ಯ ಪ್ರವೃತ್ತರಾಗಿದ್ದರು ಎಂಬುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.
೨. **"ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"**
**ಆಯ್ಕೆ :** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗ ದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ವಿಶ್ವೇಶ್ವರಯ್ಯ ಅವರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಫೀಪ್ ಜಲಾಶಯಕ್ಕೆ ಸ್ವತಃ ತಾವೇ ಅನ್ವೇಷಣೆ ಮಾಡಿದ ಸ್ವಯಂಚಾಲಿತ ಬಾಗಿಲುಗಳನ್ನು ಯಶಸ್ವಿಯಾಗಿ ಅಳವಡಿಸಿದರು ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.
**ಸ್ವಾರಸ್ಯ :** ವಿಶ್ವೇಶ್ವರಯ್ಯ ಅವರಲ್ಲಿದ್ದ ಬುದ್ಧಿಶಕ್ತಿ ಹಾಗೂ ಅನ್ವೇಷಣಾ ಸಾಮರ್ಥ್ಯವನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.
೩. **"ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ"**
**ಆಯ್ಕೆ :** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗ ದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಂದ ದಿವಾನರಾಗಿ ನೇಮಕಗೊಂಡ ವಿಶ್ವೇಶ್ವರಯ್ಯ ಅವರು ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದ ಸಂದರ್ಭದಲ್ಲಿ ಜನರು ಈ ರೀತಿ ಹಾಡಿ ಹೊಗಳುತ್ತಾರೆ.
**ಸ್ವಾರಸ್ಯ :**ಮೈಸೂರು ಸಂಸ್ಥಾನದ ದಿವಾನರಾಗಿ ವಿಶ್ವೇಶ್ವರಯ್ಯ ಅವರು ಮಾಡಿದ ಕಾರ್ಯಗಳು ಅಭೂತಪೂರ್ವವಾದವುಗಳು ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.
೪. **"ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು"**
**ಆಯ್ಕೆ :** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗ ದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ದಿವಾನರಾಗಿದ್ದವಿಶ್ವೇಶ್ವರಯ್ಯ ಅವರು ಮೈಸೂರು ಸಂಸ್ಥಾನದಲ್ಲಿ ಶಿಕ್ಷಣಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ವಿವರಿಸುವ ಸಂದರ್ಭದಲ್ಲಿ ಲೇಖಕರು ವಿಶ್ವೇಶ್ವರಯ್ಯ ಅವರ ಈ ಮಾತನ್ನು ಉದಾಹರಿಸುತ್ತಾರೆ.

**ಸ್ವಾರಸ್ಯ** :ನಾಡಿನ ಎಲ್ಲರಿಗೂ ಸಮಾನ ಶಿಕ್ಷಣ ಅವಕಾಶಗಳು ದೊರೆಯಬೇಕೆಂಬ ವಿಶ್ವೇಶ್ವರಯ್ಯ ಅವರ ಹಂಬಲ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**೫. "ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ"**

**ಆಯ್ಕೆ** : ಈ ವಾಕ್ಯವನ್ನು **ಶ್ರೀ ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್.ಎಂ.ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗ ದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ವಿಶ್ವೇಶ್ವರಯ್ಯಅವರು ಎಂಜನಿಯರುಗಳಿಗೆ "ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜಿನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು" ಎಂದು ಹೇಳಿ ಮಾರ್ಗದರ್ಶನ ಮಾಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ** :ಪ್ರತಿನಿತ್ಯಹೊಸಹೊಸಮಾಹಿತಿ ಸಂಗ್ರಹ ಮಾಡುವದರಿಂದ ವ್ಯಕ್ತಿಯ ಕಾರ್ಯಕ್ಷಮತೆ ಹೆಚ್ಚಾಗುತ್ತದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

## ಗದ್ಯಪಾಠ – ೬.

**ಎದೆಗೆ ಬಿದ್ದ ಅಕ್ಷರ – ದೇವನೂರು ಮಹಾದೇವ**

**೧. "ಏನ್ರಯ್ಯಾ ಏನ್ ಮಾಡ್ತಾ ಇದ್ದೀರಿ?"**

**ಆಯ್ಕೆ** :ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ** :ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಜನ ಪ್ರಾರಂಭಿಸಿದ ಸಂದರ್ಭದಲ್ಲಿ ಒಬ್ಬನ ಮೈ ಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರಿಗೆ ಈ ಪ್ರಶ್ನೆಯನ್ನು ಕೇಳುತ್ತಾಳೆ.

**ಸ್ವಾರಸ್ಯ** :ಸ್ವತಃ ತಮಗೆ ಮನೆ ಇಲ್ಲದಿದ್ದರೂ ದೇವರಿಗೆ ಮನೆ ಕಟ್ಟಲು ಹೊರಟ ಜನರ ಮುಗ್ಧತೆಯನ್ನು ಪ್ರಶ್ನಿಸುವ ಮೂಲಕ ಮಂಚಮ್ಮ ಕಾರುಣ್ಯ ಮತ್ತು ಸಮಾನತೆ ದೇವತೆಯಂತೆ ಕಾಣುವುದು ಈ ಮಾತಿನ ಸ್ವಾರಸ್ಯವಾಗಿದೆ.

**೨. "ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ."**

**ಆಯ್ಕೆ** :ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ** :ಗ್ರಾಮದೇವತೆ ಮಂಚಮ್ಮನಿಗೆ ಗುಡಿ ಕಟ್ಟಲು ಜನ ಪ್ರಾರಂಭಿಸಿದಾಗ, ಒಬ್ಬನ ಮೈ ಮೇಲೆ ಗ್ರಾಮದೇವತೆ ಮಂಚಮ್ಮ ಆವಾಹಿಸಿಕೊಂಡು ಬಂದು ಜನರೊಡನೆ ಮಾತನಾಡುವ ಸಂದರ್ಭದಲ್ಲಿ ಈ ಮಾತನ್ನು ಗ್ರಾಮದೇವತೆ ಮಂಚಮ್ಮ ಜನರಿಗೆ ಹೇಳುತ್ತಾಳೆ.

**ಸ್ವಾರಸ್ಯ** :ತನ್ನ ಭಕ್ತರಿಗೆ ಮನೆ ಇಲ್ಲದ ಮೇಲೆ ನನಗೂ ಮನೆ ಬೇಡ ಎಂಬ ಮಂಚಮ್ಮ ದೇವತೆಯ ಮಾತು ಕಾರುಣ್ಯ ಮತ್ತು ಸಮಾನತೆಯ ದ್ಯೋತಕವಾಗಿರುವುದು ಈ ಮಾತಿನ ಸ್ವಾರಸ್ಯವಾಗಿದೆ.

**೩. "ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ."**

**ಆಯ್ಕೆ** :ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ** :ಲೇಖಕರಾದ ದೇವನೂರು ಮಹಾದೇವ ಅವರು ಡಾ. ಅಶೋಕ ಪೈ ಅವರ ಒಂದು ಸಂಶೋಧನಾ ಸತ್ಯಕತೆಯನ್ನು ಉದಾಹರಣೆ ನೀಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ** :"ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ, ಎಲ್ಲಾ ಜೀವಿಗಳಲ್ಲೂ ಕಂಪನ ಉಂಟುಮಾಡುತ್ತಿರುತ್ತದೆ" ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**೪. "ನಾವು ಮನುಷ್ಯರು."**

**ಆಯ್ಕೆ** :ಈ ವಾಕ್ಯವನ್ನು **ಶ್ರೀ ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ** :ಲೇಖಕರಾದ ದೇವನೂರು ಮಹಾದೇವ ಅವರು "ಕೊಲೆ. ಸುಲಿಗೆ, ದ್ವೇಷ, ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನು ಘಾಸಿಗೊಳಿಸುತ್ತಿದೆ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ** : "ಜಾಗತೀಕರಣದ ಸಂದರ್ಭದಲ್ಲಿ ಮನುಷ್ಯರಾದ ನಾವು ನಮ್ಮೊಳಗೆ ಮೂರ್ಛಾವಸ್ಥೆಯಲ್ಲಿರುವ ಕಾರುಣ್ಯವನ್ನು ಎಚ್ಚರಗೊಳಿಸಬೇಕಾಗಿದೆ" ಎಂಬುದು ಈ ಮಾತಿನ ಸ್ವಾರಸ್ಯವಾಗಿದೆ.

೫. **"ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ."**

**ಆಯ್ಕೆ :**ಈ ವಾಕ್ಯವನ್ನು ಶ್ರೀ **ದೇವನೂರು ಮಹಾದೇವ** ಅವರು ರಚಿಸಿರುವ **'ಎದೆಗೆ ಬಿದ್ದ ಅಕ್ಷರ'** ಕೃತಿಯಿಂದ ಆಯ್ದ **'ಎದೆಗೆ ಬಿದ್ದ ಅಕ್ಷರ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :**ಲೇಖಕರಾದ ದೇವನೂರು ಮಹಾದೇವ ಅವರು "ಕೊಲೆ. ಸುಲಿಗೆ, ದ್ವೇಷ, ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನು ಘಾಸಿಗೊಳಿಸುತ್ತಿದೆ" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**ಸಮಷ್ಟಿ ಮನಸ್ಸಿನಲ್ಲಿ ಎಲ್ಲರೂ ಇರುವುದರಿಂದ ಕಾರುಣ್ಯ ಹಾಗೂ ಸರ್ವಸಮಾನತೆ ಮನೋಭಾವ ಮೂಡಿಸಿಕೊಂಡು ಬದುಕಬೇಕು ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

## ಗದ್ಯಪಾಠ – ೭

**ವೃಕ್ಷಸಾಕ್ಷಿ** – **ದುರ್ಗಸಿಂಹ**

೧. **"ಪೊನ್ನನೆಲ್ಲಮಂ ನೀನೆ ಕೊಂಡೆ"**

**ಆಯ್ಕೆ :**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :** ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ ಮುಚ್ಚಿ, ತಾನೇ ಧರ್ಮಬುದ್ಧಿಯ ಹತ್ತಿರ ಬಂದು "ಖರ್ಚಿಗೆ ಹೊನ್ನು ಇಲ್ಲ, ಸ್ವಲ್ಪ ಹೊನ್ನನ್ನು ತೆಗೆದುಕೊಳ್ಳೋಣ ಬಾ" ಎಂದು ಜೊತೆಯಲ್ಲಿ ಕರೆದುಕೊಂಡು ಹೋಗಿ, ಹೂತಿಟ್ಟ ಸ್ಥಳದಲ್ಲಿ ಹೊನ್ನನ್ನು ಕಾಣದೆ ಇದ್ದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**ದುಷ್ಟಬುದ್ಧಿಯುಇನ್ನುಮಾತನಾಡದಿದ್ದರೆ ಅಪವಾದವು ತನ್ನ ಮೇಲೆ ಬರುವುದೆಂದು, "ಹೊನ್ನೆಲ್ಲವನ್ನು ನೀನೆ ತೆಗೆದುಕೊಂಡಿದ್ದೀಯೆ" ಎಂದನು ಎಂದು ಕವಿ ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

೨. **"ಈತನ ಮಾತು ಅಶ್ರುತಪೂರ್ವಮ್"**

**ಆಯ್ಕೆ :**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :**ದುಷ್ಟಬುದ್ಧಿಯು "ಆ ಸ್ಥಳದಲ್ಲಿ ಹೊನ್ನನ್ನು ಇಡುವಾಗ ಈತ ಮತ್ತು ನಾನು ಅಲ್ಲದೆ ಬೇರೆ ಯಾರು ಮನುಷ್ಯರು ಇರಲಿಲ್ಲ. ಆ ಸ್ಥಳದಲ್ಲಿ ಇದ್ದ ಆಲದ ಮರವೇ ಸಾಕ್ಷಿ" ಎಂದ ಸಂದರ್ಭದಲ್ಲಿ ಧರ್ಮಾಧಿಕರಣರು ಆಶ್ಚರ್ಯಗೊಂಡು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**ಧರ್ಮಾಧಿಕರಣರು "ವೃಕ್ಷವು ಸಾಕ್ಷಿಯನ್ನು ಹೇಳುವುದುಎಂಬುದನ್ನು ಹಿಂದೆ ಎಂದೂ ಕೇಳಿಲ್ಲ"ಎಂದು ವಿಸ್ಮಯ ದಿಂದ ಹೇಳುವುದು ಬಹುಸ್ವಾರಸ್ಯಪೂರ್ಣವಾಗಿದೆ.

೩. **"ನಿನ್ನ ಪಳುವಗೆ ನಮ್ಮ ಕುಲಮನೆಲ್ಲಮನಳಿವ ಬಗೆ"**

**ಆಯ್ಕೆ :**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :**ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ, ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದ ಸಂದರ್ಭದಲ್ಲಿ ಅವನಿಗೆ ಬುದ್ಧಿಯನ್ನು ಹೇಳುತ್ತ ತಂದೆಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**ದುಷ್ಟಬುದ್ಧಿಯನ್ನು ಕುರಿತು ಅವನ ತಂದೆಯು "ನಿನ್ನ ಕೆಟ್ಟತನ ನಮ್ಮ ಕುಲವನ್ನು ನಾಶಮಾಡುವ ರೀತಿಯದಾಗಿದೆ" ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

೪. **"ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗುಂ"**

**ಆಯ್ಕೆ :**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :**ಮರದ ಪೊಟರೆಯೊಳಗೆ ಅಡಗಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿಯು ಮತಿಗೆಟ್ಟು, ಧರ್ಮದ ಹಾದಿಯನ್ನು ಬಿಟ್ಟು "ಧರ್ಮಬುದ್ಧಿಯೇ ಹೊನ್ನನ್ನು ತೆಗೆದುಕೊಂಡನೆಂದು" ನುಡಿದ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**ಪಾಪಕರ್ಮನಾದ ದುಷ್ಟಮಗನ ಮಾತನ್ನು ಕೇಳಿ ತಂದೆಯು ತೊಂದರೆಗೆ ಒಳಗಾದನು ಎಂಬುದನ್ನು 'ಪ್ರಕೃತಿ ವಿಕೃತಿಯಾದ ಮನುಷ್ಯನ ಆಯುಷ್ಯವು ಕಡಿಮೆಯಾಗುತ್ತದೆ' ಎಂಬ ಮಾತು ಸ್ವಾರಸ್ಯಪೂರ್ಣವಾಗಿ ವರ್ಣಿಸಲ್ಪಟ್ಟಿದೆ.

೫. ಹುಸಿಯದ ಬೇಹಾರಿಯೇ ಇಲ್ಲ"

**ಆಯ್ಕೆ :**ಈ ಮಾತನ್ನು **ಕವಿ ದುರ್ಗಸಿಂಹನು** ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ :**ಧರ್ಮಬುದ್ಧಿಯು ಆಲದ ಮರದ ಬಳಿ ಬಂದು ನೋಡಿ, ಮರವನ್ನು ಸುತ್ತು ಹಾಕಿ, ದೊಡ್ಡದಾದ ಪೊಟರೆಯನ್ನು, ಮನುಷ್ಯ ಸಂಚಾರವಾಗಿರುವುದನ್ನು ಕಂಡು ನಿಶ್ಚಯಿಸಿದ ಸಂದರ್ಭದಲ್ಲಿ ಧರ್ಮಾಧಿಕಾರಿಗಳಿಗೆ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**ವ್ಯಾಪಾರಿ ವೃತ್ತಿಧರ್ಮದಲ್ಲಿ ಧರ್ಮಬುದ್ಧಿಯು ಅಧರ್ಮಬುದ್ಧಿಯಾಗಿ ಸುಳ್ಳು ಹೇಳುವ ಮನಸ್ಸು ಉಂಟಾಗುತ್ತದೆ ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

## ಗದ್ಯಪಾಠ – ೮.

**ವ್ಯಾಘ್ರಗೀತೆ – ಎ. ಎನ್. ಮೂರ್ತಿರಾವ್**

೧. **"ಖಂಡವಿದೆಕೋ, ಮಾಂಸವಿದೆಕೋ, ಗುಂಡಿಗೆಯ ಬಿಸಿರಕ್ತವಿದೆಕೋ"**

**ಆಯ್ಕೆ :**ಈ ವಾಕ್ಯವನ್ನು **ಶ್ರೀ ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :**ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು, ಗೊಂದಲದಲ್ಲಿ ಇದ್ದ ಸಂದರ್ಭದಲ್ಲಿ ಪುಣ್ಯಕೋಟಿಯ ಈ ಮಾತನ್ನು ಲೇಖಕರು ನೆನಪಿಸಿಕೊಳ್ಳುತ್ತಾರೆ.

**ಸ್ವಾರಸ್ಯ :**ತನ್ನನ್ನು ತಿನ್ನಲು ಆಹ್ವಾನ ಕೊಟ್ಟಾಗಲೂ ಹುಲಿರಾಯ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ಪ್ರಾಣಬಿಟ್ಟು, ತನ್ನ ಆದರ್ಶವನ್ನು ಹಾಗೂ ಧರ್ಮಶ್ರದ್ಧೆಯನ್ನು ಮೆರೆಯಿತು ಎಂಬುದನ್ನು ಈ ವಾಕ್ಯದಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

೨. **"ಸ್ವಧರ್ಮೇ ನಿಧನಂ ಶ್ರೇಯಃ"**

**ಆಯ್ಕೆ :**ಈ ವಾಕ್ಯವನ್ನು **ಶ್ರೀ ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :**ಮದಲಿಂಗನ ಕಣಿವೆಯ ಕಾಲುದಾರಿಯಲ್ಲಿ ಶಾನುಭೋಗರ ಬೆನ್ನ ಹಿಂದೆ ಬಂದ ಹುಲಿಯು 'ವೈರಿಯಾದರೂ ಸರಿಯೇ ಹಿಂದಿನಿಂದ ಹಾರಿ ಕೊಲ್ಲಬಾರದು' ಎಂಬ ತನ್ನ ಧರ್ಮವನ್ನು ನೆನೆದು, ಗೊಂದಲದಲ್ಲಿ ಇದ್ದ ಸಂದರ್ಭದಲ್ಲಿ ಹುಲಿಗೆ ಭಗವದ್ಗೀತೆಯ ಈ ಮಾತು ನೆನಪಿಗೆ ಬಂದಿತು.

**ಸ್ವಾರಸ್ಯ :**. ಸದ್ವಂಶದಲ್ಲಿ ಜನಿಸಿದ ಹುಲಿಯು ಶಾನುಭೋಗರ ಬೆನ್ನ ಹಿಂದಿನಿಂದ ಆಕ್ರಮಣ ಮಾಡದೆ ಭಗವದ್ಗೀತೆಯ ಈ ಮಾತನ್ನು ನೆನೆಯುವುದು ಸ್ವಾರಸ್ಯಪೂರ್ಣವಾಗಿದೆ.

೩. **"ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು"**

**ಆಯ್ಕೆ :**ಈ ವಾಕ್ಯವನ್ನು **ಶ್ರೀ ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :**ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಳ್ಳಲು, ಶಾನುಭೋಗರು ಖಿರ್ದಿ ಪುಸ್ತಕವನ್ನು ಹುಲಿಯ ಮುಖದ ಮೇಲೆ ಎಸೆದು, ಮರದ ಕಡೆಗೆ ಓಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**'ಸಂಕಟ ಬಂದಾಗ ವೆಂಕಟರಮಣ' ಎಂಬಂತೆ ಶಾನುಭೋಗರು ಹುಲಿಯಿಂದ ತಪ್ಪಿಸಿಕೊಳ್ಳಲು ಅವಕಾಶ ಮಾಡಿಕೊಡು ಎಂದು ದೇವರನ್ನು ಪ್ರಾರ್ಥಿಸುವುದು ಬಹು ಸ್ವಾರಸ್ಯಪೂರ್ಣವಾಗಿದೆ.

೪. **"ನಾನು ಮುಖ ಮೇಲಾಗಿ ಬಿದ್ದಿದ್ದೇನೇ?"**

**ಆಯ್ಕೆ :**ಈ ವಾಕ್ಯವನ್ನು **ಶ್ರೀ ಎ. ಎನ್. ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ :**ಶಾನುಭೋಗರು ಹುಲಿಯ ಆಕ್ರಮಣದಿಂದ ಹೆದರಿ, ಮರ ಹತ್ತಲು ಓಡುವಾಗ ಕಲ್ಲನ್ನು ಎಡವಿ ಬಿದ್ದು, ಪ್ರಜ್ಞೆ ತಪ್ಪಿದಾಗ, ಅದೇ ದಾರಿಯಲ್ಲಿ ಹೋಗುತ್ತಿದ್ದ ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**"ನಾನು ಪ್ರಜ್ಞೆ ತಪ್ಪಿ ಬಿದ್ದಿದ್ದಾಗ ಹುಲಿಯು ಏಕೆ ಎಳೆದುಕೊಂಡು ಹೋಗಲಿಲ್ಲ?" ಎಂಬ ಸಮಸ್ಯೆಗೆ ಶಾನುಭೋಗರು ಈ ಪ್ರಶ್ನೆಯ ಮೂಲಕ ಉತ್ತರ ಕಂಡುಕೊಳ್ಳುವುದು ಇಲ್ಲಿಯ ಸ್ವಾರಸ್ಯವಾಗಿದೆ.

೫. **"ಹುಲಿ ಈಗ ಎಷ್ಟು ಹಸಿದಿರಬೇಕು"**

**ಆಯ್ಕೆ** :ಈ ವಾಕ್ಯವನ್ನು ಶ್ರೀ ಎ. ಎನ್. **ಮೂರ್ತಿರಾವ್** ಅವರು ರಚಿಸಿರುವ **'ಸಮಗ್ರ ಲಲಿತಪ್ರಬಂಧಗಳು'** ಕೃತಿಯಿಂದ ಆಯ್ದ **'ವ್ಯಾಘ್ರಗೀತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ** :ಮದಲಿಂಗನ ಕಣಿವೆಯ ದಾರಿಯಲ್ಲಿ ಹುಲಿಯ ಆಕ್ರಮಣದಿಂದ ತಪ್ಪಿಸಿಕೊಂಡ ಶಾನುಭೋಗರು ಜೀವ ಸಹಿತ ಮನೆಗೆ ಬಂದು ರಸದೂಟವನ್ನು ಮಾಡಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ** :ನಾನು ಹುಲಿಯಿಂದ ತಪ್ಪಿಸಿಕೊಂಡು ಬಂದು ರಸದೂಟವನ್ನು ಮಾಡುತ್ತಿದ್ದೇನೆ ಆದರೆ ನನ್ನನ್ನು ಕೊಲ್ಲಲು ಬಂದ ಹುಲಿಯು ಕೊಲ್ಲಲಾಗದೆ ಹಸಿವಿನಿಂದ ಬಳಲುತ್ತಿರಬಹುದು ಎಂದು ಶಾನುಭೋಗರು ಹೇಳುವುದು ಸ್ವಾರಸ್ಯಪೂರ್ಣವಾಗಿದೆ.

## ಪದ್ಯಪಾಠ – ೧.

**ಎಮ್ಮನುಡಿಗೇಳ್** – **ಆದಿಕವಿ ಪಂಪ**

**೧. "ಎನಗಂ ಪಾಂಡುಗಮಿಲ್ಲ ಭೇದಂ"**

**ಆಯ್ಕೆ** :ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** :ದುರ್ಯೋಧನನು ತನ್ನ ಬಳಿಗೆ ಬಂದ ಮಾತಾಪಿತೃಗಳಿಗೆ (ಧೃತರಾಷ್ಟ್ರ ಮತ್ತು ಗಾಂಧಾರಿ) ವಿನಯದಿಂದ ನಮಸ್ಕರಿಸಿ ತಲೆಬಾಗಿದ ಸಂದರ್ಭದಲ್ಲಿ ದುರ್ಯೋಧನನಿಗೆ ಧೃತರಾಷ್ಟ್ರನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** :ಧೃತರಾಷ್ಟ್ರನು ದುರ್ಯೋಧನನ್ನು ಕುರಿತು "ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ (ಭೇದವಿಲ್ಲ); ರಾಜ್ಯವನ್ನು ವಿಭಾಗ ಮಾಡಿ ಆಳೋಣ. ಸಂಧಿಯನ್ನು ಮಾಡೋಣ" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**೨. "ಈ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ ಮುನಿವೈ"**

**ಆಯ್ಕೆ** :ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** :ದುರ್ಯೋಧನನು ತನ್ನ ಬಳಿಗೆ ಬಂದ ಮಾತಾಪಿತೃಗಳಿಗೆ (ಧೃತರಾಷ್ಟ್ರ ಮತ್ತು ಗಾಂಧಾರಿ) ವಿನಯದಿಂದ ನಮಸ್ಕರಿಸಿ ತಲೆಬಾಗಿದ ಸಂದರ್ಭದಲ್ಲಿ ದುರ್ಯೋಧನನಿಗೆ ಧೃತರಾಷ್ಟ್ರನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** :ಧೃತರಾಷ್ಟ್ರನು ದುರ್ಯೋಧನನ್ನು ಕುರಿತು "ರಾಜ್ಯವನ್ನು ವಿಭಾಗ ಮಾಡಿ ಆಳೋಣ. ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವವರೇ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೆ" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**೩. "ಪಗೆಗೆ ಕಣೆಯೊಂದುಂಟೇ"**

**ಆಯ್ಕೆ** :ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** :ಧೃತರಾಷ್ಟ್ರನು ದುರ್ಯೋಧನನಿಗೆ "ಪಾಂಡವರೊಡನೆ ಸಂಧಿ ಮಾಡಿಕೊಳ್ಳೋಣ ಯುದ್ಧ ಮಾಡುವುದು ಬೇಡ" ಎಂದು ಬುದ್ಧಿವಾದವನ್ನು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** :ಧೃತರಾಷ್ಟ್ರನು ದುರ್ಯೋಧನನ್ನು ಕುರಿತು "ಮಗನೇ, ದ್ವೇಷಕ್ಕೆ ಒಂದು ಸ್ಥಳ; ಬಾಂಧವ್ಯಕ್ಕೆ ಒಂದು ಸ್ಥಳ ಎಂದು ಇದೆಯೇ? ಆಲೋಚನೆ ಮಾಡು" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**೪. "ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ"**

**ಆಯ್ಕೆ** :ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** :ಧೃತರಾಷ್ಟ್ರನು ದುರ್ಯೋಧನನಿಗೆ "ಪಾಂಡವರೊಡನೆ ಸಂಧಿ ಮಾಡಿಕೊಳ್ಳೋಣ ಯುದ್ಧ ಮಾಡುವುದು ಬೇಡ" ಎಂದು ಬುದ್ಧಿವಾದವನ್ನು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** :ಧೃತರಾಷ್ಟ್ರನು ದುರ್ಯೋಧನನ್ನು ಕುರಿತು "ರಾಜರುಗಳಿಗೆ ಹಗೆತನವೂ ಬಾಂಧವ್ಯವೂ ಮಾಡಿದ ಕಾರ್ಯದಿಂದ ಉಂಟಾಗುತ್ತವೆ ಎಂದು ಪ್ರಸಿದ್ಧವಾದ ದಂಡನೀತಿಶಾಸ್ತ್ರದಲ್ಲಿ ಹೇಳಿಲ್ಲವೇ?" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**೫. "ಪಗಲೆನಿತಾನುಂ ದೀವಿಗೆಗಳುರಿದೊಡೇಮ್."**

**ಆಯ್ಕೆ** :ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ** :ಧೃತರಾಷ್ಟ್ರನು ದುರ್ಯೋಧನನಿಗೆ "ಪಾಂಡವರೊಡನೆ ಸಂಧಿ ಮಾಡಿಕೊಳ್ಳೋಣ ಯುದ್ಧ ಮಾಡುವುದು ಬೇಡ" ಎಂದು ಬುದ್ಧಿವಾದವನ್ನು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :**ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ಮಗನೇ, ನಮಗೆ ನೀನು ಇದ್ದ ಪಕ್ಷದಲ್ಲಿ ಎಲ್ಲರೂ ಇರುವರು. ಮನದಲ್ಲಿ ದುಃಖವೇನೂ ಇಲ್ಲ. ಅದು ಹೇಗೆಂದರೆ ಹಗಲಿನಲ್ಲಿ ಸೂರ್ಯನೇ ಸಾಲದೆ; ಎಷ್ಟು ದೀಪಗಳು ಉರಿದರೇನು? ಆರಿ ಹೋದರೇನು?"ಎಂದುಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**೬. "ಪೆರ್ಮರನುಳಿವಂತೆ ನೀನುಳಿದೆ"**

**ಆಯ್ಕೆ :**ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :**ಧೃತರಾಷ್ಟ್ರನು ದುರ್ಯೋಧನನಿಗೆ "ಪಾಂಡವರೊಡನೆ ಸಂಧಿ ಮಾಡಿಕೊಳ್ಳೋಣ ಯುದ್ಧ ಮಾಡುವುದು ಬೇಡ" ಎಂದು ಬುದ್ಧಿವಾದವನ್ನು ಹೇಳುವ ಸಂದರ್ಭದಲ್ಲಿ ಧೃತರಾಷ್ಟ್ರನ ಆ ಮಾತಿಗೆ ಬೆಂಬಲವಾಗಿ ಗಾಂಧಾರಿಯು ಈ ಮಾತನ್ನು ಹೇಳುತ್ತಾಳೆ.

**ಸ್ವಾರಸ್ಯ :**ಗಾಂಧಾರಿಯು ದುರ್ಯೋಧನನ್ನು ಕುರಿತು "ಕುರುವಂಶವೆಂಬ ತೋಟವು ಭೀಮನೆಂಬ ಮದದಿಂದ ಕುರುಡಾಗಿ ಸೊಕ್ಕೇರಿದ ಆನೆಯು, ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು; ಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದೆ" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾಳೆ.

## ಪದ್ಯಪಾಠ – ೨

**ಹಕ್ಕಿ ಹಾರುತಿದೆ ನೋಡಿದಿರಾ – ದ. ರಾ. ಬೇಂದ್ರೆ**

**೧. "ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ"**

**ಆಯ್ಕೆ :**ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :**ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಯಿಸಿ, ಅವುಗಳ ಫಲಿತವನ್ನು ಕೊಯ್ಲು ಮಾಡಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**ಕಾಲಪಕ್ಷಿಯು ಅನೇಕ ಸಾಮ್ರಾಜ್ಯದ ಏಳುಬೀಳುಗಳಿಗೆ ಸಾಕ್ಷಿಯಾಗಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**೨. "ಸಾರ್ವಭೌಮರ ನೆತ್ತಿಯ ಕುಕ್ಕಿ"**

**ಆಯ್ಕೆ :**ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :**ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**ಕಾಲದ ಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**೩. ಮನ್ವಂತರಗಳ ಭಾಗ್ಯವ ತೆರೆಸಿ"**

**ಆಯ್ಕೆ :**ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :**ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**ಕಾಲಪಕ್ಷಿಯು ಪ್ರಪಂಚದ ಹೊಸ ಪರಿವರ್ತನೆಗೆ / ಪ್ರಗತಿಗೆ ಕಾರಣಿಭೂತವಾಗಿದೆಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**೪. "ಹೊಸಗಾಲದ ಹಸುಮಕ್ಕಳ ಹರಸಿ"**

**ಆಯ್ಕೆ :**ಈ ವಾಕ್ಯವನ್ನು **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :**ಕವಿ ದ. ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂಬ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುತ್ತಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

## ಪದ್ಯಪಾಠ – ೩.

**ಹಲಗಲಿ ಬೇಡರು – ಜಾನಪದ (ಸಂಗ್ರಹ)**

**೧. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"**

**ಆಯ್ಕೆ :**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :** "ಕ್ರಿ.ಶ. ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ ಸರ್ಕಾರ ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :**ಭಾರತೀಯರ ಮೇಲಿನ ಬ್ರಿಟಿಷರ ದರ್ಪ ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**೨. "ಜೀವ ಸತ್ತು ಹೋಗುವದು ಗೊತ್ತ"**

**ಆಯ್ಕೆ :**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :**ಬ್ರಿಟಿಷರು ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :**ಹಲಗಲಿಯ ಬೇಡರು"ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು" ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**೩. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"**

**ಆಯ್ಕೆ :**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :**ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದು, ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದು, ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು ಎಂದು ಲಾವಣಿಕಾರನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :**ಹಲಗಲಿಯ ಬೇಡರ ಮೇಲೆ ನಿಷ್ಕರುಣೆಯಿಂದ ಗುಂಡು ಹಾರಿಸಿಕೊಲ್ಲುವ ಬ್ರಿಟಿಷರ ಕ್ರೌರ್ಯದ ಪರಮಾವಧಿಯನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**೪. "ಕೆಟ್ಟು ವರ್ಣಿಸಿ ಹೇಳಲಿಕೆ ಕಂಡಷ್ಟು"**

**ಆಯ್ಕೆ :**ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.

**ಸಂದರ್ಭ :**ಬ್ರಿಟಿಷ್ ಸೈನಿಕರು ಹಲಗಲಿಯನ್ನು ಲೂಟಿಮಾಡಿ, ಬೆಂಕಿ ಹಚ್ಚಿ ನಾಶಗೊಳಿಸಿದರು ಎಂದು ಲಾವಣಿಕಾರನು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ : "ಹಲಗಲಿಯ ಬೇಡರ ಮೇಲಿನ ಬ್ರಿಟಿಷರ ದೌರ್ಜನ್ಯವು ವರ್ಣಿಸಲು ಅಸಾಧ್ಯವಾದುದು" ಎಂದು ಲಾವಣಿಕಾರನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾನೆ.

## ಪದ್ಯಪಾಠ – ೪.

**ವಚನ ಸೌರಭ – ಜೇಡರ ದಾಸಿಮಯ್ಯ, ಬಸವಣ್ಣ**

**೧. "ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ ಅದು ನಟ್ಟಡವಿ"**

**ಆಯ್ಕೆ :**ಈ ವಾಕ್ಯವನ್ನು **ಫ. ಗು. ಹಳಕಟ್ಟಿ** ಅವರು ಸಂಪಾದಿಸಿರುವ **'ದಾಸಿಮಯ್ಯನ ವಚನಗಳು'** ಕೃತಿಯಿಂದ ಆಯ್ದ **'ವಚನ ಸೌರಭ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :**ನಿಷ್ಠನಾದ ಭಕ್ತ ದಟ್ಟವಾದ ಅರಣ್ಯದಲ್ಲಿ ಇದ್ದರೂ ಅದು ಅವನಿಗೆ ಪಟ್ಟಣ ಎನಿಸುವುದು. ನಿಷ್ಠೆಯಿಲ್ಲದ ಭಕ್ತ ನಗರವಾಸಿಯಾದರೂ ಅವನಿಗೆ ಅದು ದಟ್ಟಡವಿಯೇ ಎಂದು ಜೇಡರ ದಾಸಿಮಯ್ಯ ಅವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** 'ದೇವರಲ್ಲಿ ನಿಷ್ಠೆ ಅತ್ಯವಶ್ಯಕವಾದುದು' ಎಂಬುದನ್ನು ಜೇಡರ ದಾಸಿಮಯ್ಯ ಅವರು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾರೆ.

**೨. "ಸುಡು! ಸುಡು! ಮನವಿದು ವಿಷಯಕ್ಕೆ ಹರಿವುದು"**

**ಆಯ್ಕೆ :**ಈ ವಾಕ್ಯವನ್ನು ಸಂ. ಶಿ. ಭೂಸನೂರು ಮಠ ಅವರು ಸಂಪಾದಿಸಿರುವ **'ವಚನ ಸಾಹಿತ್ಯ ಸಂಗ್ರಹ'**ಕೃತಿಯಿಂದ ಆಯ್ದ **'ವಚನ ಸೌರಭ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** "ಪಲ್ಲಕ್ಕಿಯನ್ನು ಏರಿದ ನಾಯಿ ಹೊಲಸು ಕಂಡಾಗ ತನ್ನ ಸ್ವಭಾವದಂತೆ ಆ ಕಡೆಗೆ ಓಡುತ್ತದೆ. ಅದೇ ರೀತಿ ಚಂಚಲ ಮನಸ್ಸು ವಿಷಯ ಸುಖದ ಕಡೆಗೆ ವಾಲುತ್ತದೆ.ದೇವರನ್ನು ನೆನೆಯಲು ಬಿಡುವುದಿಲ್ಲ" ಎಂದು ಬಸವಣ್ಣನವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** "ಮಾನವನ ಮನಸ್ಸು ಯಾವಾಗಲೂ ವಿಷಯ ಸುಖದ ಕಡೆಗೆ ಹರಿಯುತ್ತದೆ' ಎಂಬುದನ್ನು ಈ ಮಾತಿನಲ್ಲಿ ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**೩. "ಹಲವು ಕೊಂಬೆಗೆ ಹಾಯುತಲಿದೆ."**

**ಆಯ್ಕೆ :**ಈ ವಾಕ್ಯವನ್ನು ಸಂ. ಶಿ. ಭೂಸನೂರು ಮಠ ಅವರು ಸಂಪಾದಿಸಿರುವ **'ವಚನ ಸಾಹಿತ್ಯ ಸಂಗ್ರಹ'**ಕೃತಿಯಿಂದ ಆಯ್ದ **'ವಚನ ಸೌರಭ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** "ಮರ್ಕಟವು ಮರ ಹತ್ತಿ ಹಲವು ಕೊಂಬೆಗಳಿಗೆ ನೆಗೆಯುವಂತೆ ಬೆಂದ ಮನವು ಚಂಚಲವಾಗಿರುತ್ತದೆ. ಹೀಗಾದಾಗ ಮನಸ್ಸು ದೇವರೆಡೆಗೆ ತಿರುಗಲು ಸಾಧ್ಯವಿಲ್ಲ" ಎಂದು ಬಸವಣ್ಣನವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** 'ಮಾನವನ ಮನಸ್ಸು ಮಂಗನಂತೆ ಚಂಚಲವಾದುದು' ಎಂಬುದನ್ನು ಈ ಮಾತಿನಲ್ಲಿ ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**೪. "ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು."**

**ಆಯ್ಕೆ :**ಈ ವಾಕ್ಯವನ್ನು ಸಂ. ಶಿ. ಭೂಸನೂರು ಮಠ ಅವರು ಸಂಪಾದಿಸಿರುವ **'ವಚನ ಸಾಹಿತ್ಯ ಸಂಗ್ರಹ'**ಕೃತಿಯಿಂದ ಆಯ್ದ **'ವಚನ ಸೌರಭ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :**ಮಾತು ಮುತ್ತಾಗಬೇಕು, ಸ್ಫಟಿಕದ ಸಲಾಕೆಯಾಗಬೇಕು, ದೇವರು ಮೆಚ್ಚುವಂತೆ ಇರಬೇಕು ಎಂದು ಬಸವಣ್ಣ ಅವರು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ :** 'ಮಾತು ಹಿತವಾಗಿರಬೇಕು'ಎಂಬುದನ್ನು ಈ ಮಾತಿನಲ್ಲಿ ಬಸವಣ್ಣನವರು ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

## ಪದ್ಯಪಾಠ – ೫.

## ಸಂಕಲ್ಪ ಗೀತೆ – ಜಿ. ಎಸ್. ಶಿವರುದ್ರಪ್ಪ

**೧. "ಪ್ರೀತಿಯ ಹಣತೆಯ ಹಚ್ಚೋಣ"**

**ಆಯ್ಕೆ :**ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನ ದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ :**ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** "ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು" ಎಂದು ಕವಿಗಳು**ಸ್ವಾರಸ್ಯಪೂರ್ಣವಾಗಿ** ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**೨. "ಮುಂಗಾರಿನ ಮಳೆಯಾಗೋಣ"**

**ಆಯ್ಕೆ :**ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನ ದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ** :ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ** : "ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು" ಎಂದು ಕವಿಗಳು**ಸ್ವಾರಸ್ಯ**ಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**೩. "ಹೊಸ ಭರವಸೆಗಳ ಕಟ್ಟೋಣ"**

**ಆಯ್ಕೆ** :ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನ ದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ** :ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ** : "ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು"ಎಂದು ಕವಿಗಳು**ಸ್ವಾರಸ್ಯ**ಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**೪. "ಹೊಸ ಎಚ್ಚರದೊಳು ಬದುಕೋಣ"**

**ಆಯ್ಕೆ** :ಈ ವಾಕ್ಯವನ್ನು ಕವಿ **ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನ ದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ** :ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ಧೃಡಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ** : "ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು"ಎಂದು ಕವಿಗಳು**ಸ್ವಾರಸ್ಯ**ಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

## ಪದ್ಯಪಾಠ – ೬.

## ಕೌರವೇಂದ್ರನ ಕೊಂದೆ ನೀನು – ಕುಮಾರ ವ್ಯಾಸ

**೧. "ರವಿಸುತನ ಕಿವಿಯಲಿ ಬಿತ್ತಿದನು ಭಯವ"**

**ಆಯ್ಕೆ** :ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ' ಎಂಬ** ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ** :ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.

**ಸ್ವಾರಸ್ಯ** : "ಕರ್ಣ ನಿಮ್ಮಲ್ಲಿ, ಯಾದವರು ಕೌರವರಲ್ಲಿ ಭೇದವಿಲ್ಲ. ಹೇಳುವುದಾದರೆ ವಂಶದಲ್ಲಿ ಮೊದಲೆರಡಿಲ್ಲ ನಿನ್ನಾಣೆ. ರಾಜ ನೀನು, ಮನದಲ್ಲಿ ನಡೆದುದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು ಎಂದು ಕವಿಯು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ.

**೨. "ಬಾಯ್ದಂಬುಲಕೆ ಕೈಯಾನುವರೆ"**

**ಆಯ್ಕೆ** :ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ' ಎಂಬ** ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ** :ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ** :"ಕರ್ಣ ನೀನು ಹಸ್ತಿನಾಪುರದ ರಾಜನಾದರೆ ನಿನಗೆ ಕೌರವರು ಮತ್ತು ಪಾಂಡವರು ಸೇವೆಯನ್ನು ಮಾಡುವರು ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ" ಎಂದು ಕೃಷ್ಣನು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ.

**೩. "ಜೀಯ ಹಸಾದವೆಂಬುದು ಕಷ್ಟ"**

**ಆಯ್ಕೆ** :ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ' ಎಂಬ** ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ :**ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :**"ಕರ್ಣ ನಿನ್ನಎಡಗಡೆ ಕೌರವರು, ಬಲಗಡೆ ಪಾಂಡವರು, ಎದುರಿನಲ್ಲಿ ಮಾದ್ರ ಮಾಗಧ ಯಾದವಾದಿಗಳು ಇರುವಾಗ, ನೀನು ಓಲಗದಲ್ಲಿ ವಿಲಾಸದಿಂದ ಮೆರೆಯುವುದನ್ನು ಬಿಟ್ಟು, ಕೌರವನಿಗೆ ಜೀಯ ಹಸಾದವೆಂಬುದು ಕಷ್ಟವಾಗುವುದಿಲ್ಲವೇ?"ಎಂದು ಕೃಷ್ಣನು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

**೪. "ನಿನ್ನಪದೆಸೆಯ ಬಯಸುವನಲ್ಲ"**

**ಆಯ್ಕೆ :**ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ :**ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕೃಷ್ಣನು ಕರ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :**ತನ್ನಜನ್ಮ ರಹಸ್ಯವನ್ನು ಅರಿತು ಕರ್ಣನು ಮನದಲ್ಲಿ ಚಿಂತಿತನಾಗಿ ಮೌನವಾದಾಗ, ಕೃಷ್ಣನು ಈ ಮಾತನ್ನು ಹೇಳುವುದರ ಮೂಲಕ ಕರ್ಣನನ್ನು ಸಮಾಧಾನಪಡಿಸಿದ್ದು ಸ್ವಾರಸ್ಯಪೂರ್ಣವಾಗಿದೆ.

**೫. "ಮಾರಿಗೌತಣವಾಯ್ತು ನಾಳಿನ ಭಾರತವು"**

**ಆಯ್ಕೆ :**ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**

**ಸಂದರ್ಭ :**ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳುತ್ತಾನೆ.

**ಸ್ವಾರಸ್ಯ :**ಕರ್ಣನು ಮುಂದೆ ನಡೆಯುವ ಮಹಾಭಾರತ ಕುರುಕ್ಷೇತ್ರ ಯುದ್ಧದ ಭೀಕರತೆಯನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.

## ಪದ್ಯಪಾಠ – ೭.

## ವೀರಲವ – ಲಕ್ಷ್ಮೀಶ

**೧. "ರಘೂದ್ವಹನ ಸೊಲ್ಗೇಳಿ ನಮಿಸಲ್"**

**ಆಯ್ಕೆ:** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಶ್ರೀರಾಮನ ಅಶ್ವಮೇಧ ಯಾಗದ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ರಾಜರುಗಳಿಂದ ಅದಕ್ಕೆ ದೊರೆತ ಭವ್ಯ ಸ್ವಾಗತ ಹಾಗೂ ನೀಡಿದ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟರು ಎಂದು ವರ್ಣಿಸಿರುವುದು ಸ್ವಾರಸ್ಯಪೂರ್ಣವಾಗಿದೆ.

**೨. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"**

**ಆಯ್ಕೆ:** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಲವನು ತನ್ನ ಆಶ್ರಮದ ತೋಟವನ್ನು ಧ್ವಂಸ ಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರಹವನ್ನು ಓದಿ ಅದನ್ನು ಕಟ್ಟಿಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಕ್ಷತ್ರಿಯನಾದ ವೀರಲವನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ ತನ್ನ ವೀರತ್ವವನ್ನು ಪ್ರದರ್ಶಿಸುವುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.

**೩. "ಅರಸುಗಳ ವಾಜಿಯಂ ಬಿಡು"**

**ಆಯ್ಕೆ:** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿ ಹಾಕಿದ ಸಂದರ್ಭದಲ್ಲಿ ಮುನಿಪುತ್ರರು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** ರಾಜನ ಯಜ್ಞಾಶ್ವವನ್ನು ಕಟ್ಟಿಹಾಕುವುದು ಅಪರಾಧ ಅದರಿಂದ ಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿಪುತ್ರರು ಭಯಗೊಳ್ಳುವುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

**೪. "ಜಾನಕಿಯ ಮಗನಿದಕೆ ಬೆದರುವನೆ"**

**ಆಯ್ಕೆ:** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿ ಹಾಕಿದ್ದನ್ನು ಕಂಡು ಮುನಿಪುತ್ರರು ಕುದುರೆಯನ್ನು ಬಿಡು ಎಂದು ಹೇಳಿದ ಸಂದರ್ಭದಲ್ಲಿ ಈ ಮಾತನ್ನು ಲವನು ಹೇಳುತ್ತಾನೆ.

**ಸ್ವಾರಸ್ಯ:** ಸೀತೆಯ ಮಗನಾದ ಲವನ ಧೈರ್ಯವು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿದೆ.

## ಪದ್ಯಪಾಠ – ೮.
## ಸಾರ್ಥಕತೆ

**ಸಂಕಟಕೆ ಗಡಿ ಇಲ್ಲ – ದು. ಸರಸ್ವತಿ ನನ್ನಾಸೆ ಇಂದುಮತಿ ಲಮಾಣಿ**

**೧. "ಗೆರೆ ಎಳೆದು 'ಗಡಿ' ಎಂದ"**

**ಆಯ್ಕೆ :**ಈ ವಾಕ್ಯವನ್ನು **ಶ್ರೀಮತಿ ದು. ಸರಸ್ವತಿ** ಅವರು ರಚಿಸಿರುವ **'ಹೆಣೆದರೆ ಜೇಡನಂತೆ'** ಕೃತಿಯಿಂದ ಆಯ್ದ **'ಸಂಕಟಕೆ ಗಡಿ ಇಲ್ಲ'** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** "ಮಾನವನು ಭೂಮಿಯ ಮಾಲೀಕನಾದೆನೆಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನು ನಿರ್ಮಿಸಿಕೊಂಡನು" ಎಂದು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** "ಎಲ್ಲ ಪ್ರಾಣಿಗಳಿಗೂ ಸಮಾನವಾಗಿ ಸೇರಬೇಕಾದ ಭೂಮಿಯ ಮೇಲೆ ಮಾನವನು ಅಹಂಕಾರದಿಂದ ಗೆರೆ ಎಳೆದು ಗಡಿ ನಿರ್ಮಿಸಿ ಅಸಮಾನತೆಗೆ ಕಾರಣನಾಗಿದ್ದಾನೆ" ಎಂಬುದನ್ನು ಕವಿಗಳು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**೨. "ಜೀವಗಳು ಶವವಾದವು"**

**ಆಯ್ಕೆ :**ಈ ವಾಕ್ಯವನ್ನು **ಶ್ರೀಮತಿ ದು. ಸರಸ್ವತಿ** ಅವರು ರಚಿಸಿರುವ **'ಹೆಣೆದರೆ ಜೇಡನಂತೆ'** ಕೃತಿಯಿಂದ ಆಯ್ದ **'ಸಂಕಟಕೆ ಗಡಿ ಇಲ್ಲ'** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** "ಮಾನವನು ಭೂಮಿಯ ಮಾಲೀಕನಾದೆನೆಂಬ ಅಮಲಿನಲ್ಲಿ ಭೂಮಿಯ ಮೇಲೆ ಗೆರೆ ಎಳೆದು ಗಡಿಯನ್ನುನಿರ್ಮಿಸಿಕೊಂಡು, ಅದರ ರಕ್ಷಣೆಗಾಗಿ ಯುದ್ಧ ಮಾಡುತ್ತಿದ್ದಾನೆ" ಎಂದು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** "ಮಾನವನು ತಾನೇ ಅಹಂಕಾರದಿಂದ ನಿರ್ಮಿಸಿಕೊಂಡ ಗಡಿಯ ರಕ್ಷಣೆಯ ನೆಪದಲ್ಲಿ ಯುದ್ಧ ಮಾಡಿದ್ದರಿಂದ ನಿರಪರಾಧಿಗಳು ಪ್ರಾಣ ಕಳೆದುಕೊಂಡರು" ಎಂಬುದನ್ನು ಕವಿಗಳು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**೩. "ಗಡಿಯ 'ಮ್ಯಾಜಿಕ್'ನಿಂದ ಜೀವತೆತ್ತವರು"**

**ಆಯ್ಕೆ :**ಈ ವಾಕ್ಯವನ್ನು **ಶ್ರೀಮತಿ ದು. ಸರಸ್ವತಿ** ಅವರು ರಚಿಸಿರುವ **'ಹೆಣೆದರೆ ಜೇಡನಂತೆ'** ಕೃತಿಯಿಂದ ಆಯ್ದ **'ಸಂಕಟಕೆ ಗಡಿ ಇಲ್ಲ'** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** "ಮಾನವನು ತಾನೇ ಅಹಂಕಾರದಿಂದ ನಿರ್ಮಿಸಿಕೊಂಡ ಗಡಿಯ ರಕ್ಷಣೆಯ ನೆಪದಲ್ಲಿ ಯುದ್ಧ ಮಾಡಿದ್ದರಿಂದ ನಿರಪರಾಧಿಗಳು ಪ್ರಾಣ ಕಳೆದುಕೊಂಡರು" ಎಂದು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :**"ಗಡಿಯ ರಕ್ಷಣೆಗಾಗಿ ಪ್ರಾಣಕೊಟ್ಟವರು ವೀರಮರಣ ಹೊಂದಿದರು; ಆದರೆ ಜೀವ ತೆಗೆದವರು ವೀರಯೋಧರಾದರು ಎನ್ನುವುದು ಒಂದು ಮ್ಯಾಜಿಕ್"ಎಂಬುದನ್ನು ಕವಿಗಳು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**೪. "ಗಡಿಯೂ ಇಲ್ಲ ಆಚೆ ಈಚೆಯೂ ಇಲ್ಲ"**

**ಆಯ್ಕೆ :**ಈ ವಾಕ್ಯವನ್ನು **ಶ್ರೀಮತಿ ದು. ಸರಸ್ವತಿ** ಅವರು ರಚಿಸಿರುವ **'ಹೆಣೆದರೆ ಜೇಡನಂತೆ'** ಕೃತಿಯಿಂದ ಆಯ್ದ **'ಸಂಕಟಕೆ ಗಡಿ ಇಲ್ಲ'** ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** "ಮಾನವನು ಗರ್ವಪಟ್ಟು ತಾನು ನಿರ್ಮಿಸಿಕೊಂಡ ಗಡಿಯ ರಕ್ಷಣೆಗಾಗಿ ಯುದ್ಧ ಮಾಡಿದ್ದರಿಂದ ಗಡಿ ಆಚೆ – ಈಚೆ ಅನೇಕ ಜೀವಗಳು ಹೋರಾಡಿ ಶವವಾದವು" ಎಂದು ವರ್ಣಿಸುವ ಸಂದರ್ಭದಲ್ಲಿ ಕವಿಗಳು ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ :** "ಗಡಿಯ ಎರಡು ಕಡೆಯವರು ಅನುಭವಿಸುವ ಒಡಲಿನ ನೋವು, ಸಂಕಟ ಒಂದೇ ತೆರನಾದುದು. ಆದ್ದರಿಂದ ಸಂಕಟಕೆ ಗಡಿ ಇಲ್ಲ" ಎಂಬುದನ್ನು ಕವಿಗಳು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

# ಲೇಖಕರ/ಕವಿಪರಿಚಯ – ೬ ಅಂಕ

**ಗದ್ಯಪಾಠ – 1**

**ಶಬರಿ – ಪು. ತಿ. ನರಸಿಂಹಾಚಾರ್**

**ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ** ಅವರು **ಕ್ರಿ. ಶ. 1905** ರಲ್ಲಿ ಮಂಡ್ಯ ಜಿಲ್ಲೆಯ **ಮೇಲುಕೋಟೆ**ಯಲ್ಲಿ ಜನಿಸಿದರು.ಇವರು **ಶಬರಿ,** ಅಹಲ್ಯೆ, ಮೊದಲಾದ ಲಲಿತ ಪ್ರಬಂಧ ಕೃತಿಗಳನ್ನೂ ರಚಿಸಿದ್ದಾರೆ. ಶ್ರೀಯುತರ **'ಶ್ರೀ ಹರಿಚರಿತೆ'** ಕೃತಿಗೆ ಕರ್ನಾಟಕ ಸರ್ಕಾರದಿಂದ **'ಪಂಪ ಪ್ರಶಸ್ತಿ'** ನೀಡಿ ಗೌರವಿಸಲಾಗಿದೆ.ಶ್ರೀಯುತರಿಗೆ **'ಪಂಪ ಪ್ರಶಸ್ತಿ'** ಮತ್ತು ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಗದ್ಯಪಾಠ – 2.**

**ಅಮೆರಿಕದಲ್ಲಿ ಗೊರೂರು. – ಗೊರೂರು ರಾಮಸ್ವಾಮಿ ಅಯ್ಯಂಗಾರ್**

**ಕವಿ ಪರಿಚಯ :**ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು **ಕ್ರಿ. ಶ. 1904ರಲ್ಲಿ** ಹಾಸನ ಜಿಲ್ಲೆಯ **ಗೊರೂರು** ಗ್ರಾಮದಲ್ಲಿ ಜನಿಸಿದರು. ಇವರು **ಅಮೆರಿಕದಲ್ಲಿ ಗೊರೂರು (ಪ್ರವಾಸ ಕಥನ),** ನಮ್ಮ ಊರಿನ ರಸಿಕರು ಮೊದಲಾದ ಕೃತಿಗಳನ್ನುರಚಿಸಿದ್ದಾರೆ. ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿ ಗೌರವಿಸಲಾಗಿದೆ.

**ಗದ್ಯಪಾಠ – 3.**

**ಜೀವನದೃಷ್ಟಿ – ವಿನಾಯಕ ಕೃಷ್ಣ ಗೋಕಾಕ್.**

**ವಿನಾಯಕ ಕೃಷ್ಣ ಗೋಕಾಕ್ :**ಡಾ. ವಿನಾಯಕ ಕೃಷ್ಣ ಗೋಕಾಕ್ ಅವರು **ಕ್ರಿ. ಶ. 1909** ರಲ್ಲಿ ಹಾವೇರಿ ಜಿಲ್ಲೆಯ **ಸವಣೂರಿನಲ್ಲಿ** ಜನಿಸಿದರು. ಇವರು **ಜೀವನಪಾಠಗಳು,** ಭಾರತ ಸಿಂಧು ರಶ್ಮಿ, ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಾಕ್ಟರೇಟ್ ಪದವಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಗದ್ಯಪಾಠ – 5**

**ಭಾಗ್ಯಶಿಲ್ಪಿ ಸರ್.ಎಂ. ವಿಶ್ವೇಶ್ವರಯ್ಯ – ಡಿ. ಎಸ್. ಜಯಪ್ಪ ಗೌಡ**

**ಡಿ. ಎಸ್. ಜಯಪ್ಪಗೌಡ : ಶ್ರೀ ದಾರದಹಳ್ಳಿ ಸುಬ್ಬೇಗೌಡ ಜಯಪ್ಪಗೌಡ** ಅವರು **ಕ್ರಿ. ಶ. 1947ರಲ್ಲಿ** ಚಿಕ್ಕಮಗಳೂರು ಜಿಲ್ಲೆಯ **ದಾರದಹಳ್ಳಿಯಲ್ಲಿ** ಜನಿಸಿದರು. ಇವರು **ದಿವಾನ್ ಸರ್.ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು,** ಕರ್ನಾಟಕ ಗ್ರಾಮೀಣ ಸಂಸ್ಥೆಗಳು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ಗದ್ಯಪಾಠ – 6.**

**ಎದೆಗೆ ಬಿದ್ದ ಅಕ್ಷರ – ದೇವನೂರು ಮಹಾದೇವ**

**ದೇವನೂರು ಮಹಾದೇವ : ಶ್ರೀ ದೇವನೂರು ಮಹಾದೇವ** ಅವರು**ಕ್ರಿ. ಶ. 1949 ರಲ್ಲಿ** ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ **ದೇವನೂರಿನಲ್ಲಿ** ಜನಿಸಿದರು. ಇವರು **ಎದೆಗೆ ಬಿದ್ದ ಅಕ್ಷರ.**ಕುಸುಮ ಬಾಲೆ, ದ್ಯಾವನೂರು, ಒಡಲಾಳ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.

**ಗದ್ಯಪಾಠ – 7**

**ವೃಕ್ಷಸಾಕ್ಷಿ – ದುರ್ಗಸಿಂಹ**

**ದುರ್ಗಸಿಂಹ : ದುರ್ಗಸಿಂಹನು ಕ್ರಿ. ಶ. ಸುಮಾರು 1031 ರಲ್ಲಿ** ಕಿಸುಕಾಡು ನಾಡಿನ **ಸಯ್ಯಡಿಯಲ್ಲಿ** ಜನಿಸಿದನು. ಇವನು ಒಂದನೆಯ ಜಗದೇಕಮಲ್ಲನ ಆಸ್ಥಾನದಲ್ಲಿ ದಂಡನಾಯಕನೂ ಸಂಧಿವಿಗ್ರಹಿಯೂ ಆಗಿದ್ದನು.ಮತಧರ್ಮ ಸಮನ್ವಯನಾದ ಈತ ಸಯ್ಯಡಿಯಲ್ಲಿ ಹಲವಾರು ಹರಿಹರ ಭವನಗಳನ್ನು ನಿರ್ಮಿಸಿದ್ದಾನೆ. ಈತನು **'ಕರ್ಣಾಟಕ ಪಂಚತಂತ್ರ'** ಎಂಬ ಚಂಪೂ ಕಾವ್ಯವನ್ನು ರಚಿಸಿದ್ದಾನೆ.

**ಗದ್ಯಪಾಠ – 8.**

**ವ್ಯಾಘ್ರಗೀತೆ – ಎ. ಎನ್. ಮೂರ್ತಿರಾವ್:**

**ಶ್ರೀ ಅಕ್ಕಿಹೆಬ್ಬಾಳು ನರಸಿಂಹ ಮೂರ್ತಿರಾವ್** ಅವರು ಕ್ರಿ. ಶ. **೧೯೦೦ ರಲ್ಲಿ** ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲೂಕಿನ **ಅಕ್ಕಿಹೆಬ್ಬಾಳು** ಗ್ರಾಮದಲ್ಲಿಜನಿಸಿದರು. ಇವರು **ಸಮಗ್ರ ಲಲಿತಪ್ರಬಂಧಗಳು,** ದೇವರು, ಹಗಲುಗನಸು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

## ಪದ್ಯಪಾಠ – 1.

**ಎಮ್ಮನುಡಿಗೇಳ್ – ಆದಿಕವಿ ಪಂಪ**

**ಪಂಪ :** ಕನ್ನಡದಆದಿಮಹಾಕವಿ **ಪಂಪನುಕ್ರಿ. ಶ. ಸುಮಾರು 941** ರಲ್ಲಿ ವೆಂಗಿಮಂಡಲದ **ವೆಂಗಿಪಳು** ಎಂಬ ಅಗ್ರಹಾರದಲ್ಲಿ ಜನಿಸಿದನು. ಪಂಪನು **'ವಿಕ್ರಮಾರ್ಜುನ ವಿಜಯ ಮತ್ತು ಆದಿ ಪುರಾಣ'** ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ. ಈತನಿಗೆ **ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ** ಎಂಬ ಬಿರುದುಗಳು ಇದ್ದವು.

## ಪದ್ಯಪಾಠ – 2

**ಹಕ್ಕಿ ಹಾರುತಿದೆ ನೋಡಿದಿರಾ – ದ. ರಾ. ಬೇಂದ್ರೆ**

**ದ. ರಾ. ಬೇಂದ್ರೆ : ಅಂಬಿಕಾತನಯದತ್ತ** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ** ಅವರು **ಕ್ರಿ. ಶ. 1896** ರಲ್ಲಿ **ಧಾರವಾಡ**ದಲ್ಲಿ ಜನಿಸಿದರು. ಇವರು **ಗರಿ,** ನಾಕುತಂತಿ, ನಾದಲೀಲೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಭಾರತ ಸರ್ಕಾರದ ಪದ್ಮಶ್ರೀ ಪ್ರಶಸ್ತಿ, ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮೊದಲಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

## ಪದ್ಯಪಾಠ – 4.

**ವಚನ ಸೌರಭ – ಜೇಡರ ದಾಸಿಮಯ್ಯ, ಬಸವಣ್ಣ**

**ಜೇಡರ ದಾಸಿಮಯ್ಯ : ಶಿವಶರಣ ಜೇಡರ ದಾಸಿಮಯ್ಯ** ಅವರು **ಕ್ರಿ. ಶ. ಸುಮಾರು 1150 ರಲ್ಲಿ** ಯಾದಗಿರಿ ಸನಿಹದ **ಮುದೇನೂರಿನಲ್ಲಿ** ಜೀವಿಸಿದ್ದರು. **ಆದ್ಯವಚನಕಾರ ಎಂದು ಪ್ರಸಿದ್ಧರಾದ ಇವರ ಸುಮಾರು 150 ವಚನಗಳು ದೊರೆತಿವೆ. 'ರಾಮನಾಥ'** ಎಂಬದು ಇವರ ಅಂಕಿತನಾಮ.ಸರಳ ಮತ್ತು ನೇರ ನಿರೂಪಣೆಯಿಂದ ಕೂಡಿರುವ ಇವರ ವಚನಗಳು ಸಾಮಾಜಿಕ ಮೌಲ್ಯಗಳಿಂದ ಜನಮಾನ್ಯವಾಗಿವೆ.

**ಶಿವಶರಣ ಬಸವಣ್ಣ : ಶಿವಶರಣ ಬಸವಣ್ಣ** ಅವರು **ಕ್ರಿ. ಶ. ಸುಮಾರು 1260** ರಲ್ಲಿ ಬಿಜಾಪುರ ಜಿಲ್ಲೆಯ **ಬಾಗೇವಾಡಿಯಲ್ಲಿ** ಜನಿಸಿದರು.ಇವರು ಕಳಚುರಿ ವಂಶದ ಬಿಜ್ಜಳನ ಆಸ್ಥಾನದಲ್ಲಿ ಮಹಾಭಂಡಾರಿಯಾಗಿ ಸೇವೆಸಲ್ಲಿಸಿದ್ದಾರೆ. **'ಕೂಡಲ ಸಂಗಮದೇವ'** ಎಂಬ ಅಂಕಿತನಾಮದಿಂದ ರಚಿಸಿರುವ ಸಾವಿರಾರು ವಚನಗಳು ದೊರೆತಿವೆ. ಇವರ ಸರಳವಾದ ಭಾವಗೀತಾತ್ಮಕವಾದ ವಚನಗಳಲ್ಲಿ ಸಾಮಾಜಿಕ, ನೈತಿಕ ವಿಚಾರಧಾರೆಗಳನ್ನು ಸಾದರಪಡಿಸಲಾಗಿದೆ.

## ಪದ್ಯಪಾಠ – 5.

**ಸಂಕಲ್ಪ ಗೀತೆ – ಜಿ. ಎಸ್. ಶಿವರುದ್ರಪ್ಪ**

**ಜಿ. ಎಸ್. ಶಿವರುದ್ರಪ್ಪ : ಶ್ರೀ ಜಿ. ಎಸ್. ಶಿವರುದ್ರಪ್ಪ** ಅವರು **ಕ್ರಿ. ಶ. 1926** ರಲ್ಲಿ ಶಿವಮೊಗ್ಗ ಜಿಲ್ಲೆಯ **ಶಿಕಾರಿಪುರದಲ್ಲಿ** ಜನಿಸಿದರು. ಇವರು **ಎದೆತುಂಬಿ ಹಾಡಿದೆನು,** ಸಾಮಗಾನ, ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ **ರಾಷ್ಟ್ರಕವಿ ಪ್ರಶಸ್ತಿ,** ನಾಡೋಜ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿಗೌರವಿಸಲಾಗಿದೆ.

## ಪದ್ಯಪಾಠ – 6.

**ಕೌರವೇಂದ್ರನ ಕೊಂದೆ ನೀನು – ಕುಮಾರ ವ್ಯಾಸ**

ಕುಮಾರವ್ಯಾಸ :**ಕುಮಾರವ್ಯಾಸ** ಎಂದು ಪ್ರಸಿದ್ಧನಾಗಿರುವ **ಗದುಗಿನ ನಾರಣಪ್ಪ** ಅವರು **ಕ್ರಿ. ಶ. ಸುಮಾರು 1430** ರಲ್ಲಿ ಗದಗ ಪ್ರಾಂತ್ಯದ **ಕೋಳಿವಾಡ**ದಲ್ಲಿ ಜನಿಸಿದರು. ಇವರು **ಕರ್ನಾಟ ಭಾರತ ಕಥಾ ಮಂಜರಿ** ಮತ್ತು **ಐರಾವತ** ಎಂಬ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದನ್ನು ನೀಡಿ ಗೌರವಿಸಲಾಗಿದೆ.

## ಪದ್ಯಪಾಠ – 7.

**ವೀರಲವ – ಲಕ್ಷ್ಮೀಶ**

**ಲಕ್ಷ್ಮೀಶ : ಕವಿ ಲಕ್ಷ್ಮೀಶನು ಕ್ರಿ. ಶ. ಸುಮಾರು 1550** ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿನಲ್ಲಿ** ಜನಿಸಿದನು. ಇವನಿಗೆ ಲಕ್ಷ್ಮೀರಮಣ, ಲಕ್ಷ್ಮೀಪತಿ ಎಂಬ ಹೆಸರುಗಳೂ ಇದ್ದವು.ಇವರು **'ಜೈಮಿನಿ ಭಾರತ'** ಎಂಬ ಪ್ರಸಿದ್ಧ ಕಾವ್ಯವನ್ನು ರಚಿಸಿದ್ದಾನೆ. ಈತನಿಗೆ **ಉಪಮಾಲೋಲ, ಕರ್ಣಾಟ ಕವಿಚೂತವನ ಚೈತ್ರ** ಎಂಬ ಬಿರುದುಗಳನ್ನು ನೀಡಿ ಗೌರವಿಸಲಾಗಿದೆ.

## ಪದ್ಯಪಾಠ – 8. ಸಾರ್ಥಕತೆ

**ಸಂಕಟಕೆ ಗಡಿ ಇಲ್ಲ – ದು. ಸರಸ್ವತಿ**

**ದು. ಸರಸ್ವತಿ** :ಶ್ರೀಮತಿ **ದುರ್ಗಪ್ಪ ಸರಸ್ವತಿ** ಅವರು **ಕ್ರಿ. ಶ. 1963** ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಇವರು **ಹೆಣೆದರೆ ಜೇಡನಂತೆ,** ಜೀವಸಂಪಿಗೆ, ಈಗೇನ್ಮಾಡೀರಿ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರು ರಂಗಕಲಾವಿದರಾಗಿ, ಸಮಾಜಸೇವಾಕರ್ತರಾಗಿ ದುಡಿಯುತ್ತಿದ್ದಾರೆ.

ನನ್ನಾಸೆ ಇಂದುಮತಿ ಲಮಾಣಿ

ಇವರು ಕ್ರಿ ಶಧ 1959ರಲ್ಲಿ ವಿಜಯಪುರ ಜಿಲ್ಲೆಯ ಬರಟಗಿಯ ಮೂರನೇ ತಾಂಡದಲ್ಲಿ ಜನಿಸಿದರು, ಇವರು ನನ್ನ ಸತ್ಯಗಳು ತಾಯಿ ಲೋಕ, ಭಾವಲೋಕ, ಕೊರಡು ಕೊನರುವುದು ಬರಡುಹಯನಹುದು ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಸಂದ ಪ್ರಶಸ್ತಿಗಳೆಂದರೆ ಕಿತ್ತೂರು ರಾಣಿಚನ್ನಮ್ಮ ಪ್ರಶಸ್ತಿ, ಮೈತ್ರೇಯಿ ಪ್ರಶಸ್ತಿ, ಡಾಟರ್ ಆಫ್ ನೈಲ್ ಪ್ರಶಸ್ತಿಗಳು.

# ಕಂಠಪಾಠದ ಪದ್ಯಗಳು ೪ಅಂಕ

## ಪದ್ಯಪಾಠ – ೧.

**ಎಮ್ಮನುಡಿಗೇಳ್ ಆದಿಕವಿ ಪಂಪ**

ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ ।
ರ್ಮರನುಳಿವಂತೆ ನೀನುಳಿದೆಯಿನ್ನಿರಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ॥

## ಪದ್ಯಪಾಠ – ೨

**ಹಕ್ಕಿ ಹಾರುತಿದೆ ನೋಡಿದಿರಾ – ದ. ರಾ. ಬೇಂದ್ರೆ**

ಯುಗ–ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತ್ತಿದೆ ನೋಡಿದಿರಾ?

## ಪದ್ಯಪಾಠ – ೫.

**ಸಂಕಲ್ಪ ಗೀತೆ – ಜಿ. ಎಸ್. ಶಿವರುದ್ರಪ್ಪ**

ಮತಗಳೆಲ್ಲವು ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

## ಪದ್ಯಪಾಠ – ೬.

**ಕೌರವೇಂದ್ರನ ಕೊಂದೆ ನೀನು – ಕುಮಾರ ವ್ಯಾಸ**

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗ ಬಲದಲಿ
ಕೌರವನ ಋಣ ಹಿಂಗೆ ರಣದಲಿ ಸುಭಟಕೋಟಿಯನು ॥
ತೀರಿಸಿಯೆ ಪತಿಯವಸರಕ್ಕೆ ಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ॥

# ಪದ್ಯ ಸಾರಾಂಶ ಮೌಲ್ಯವನ್ನಾಧರಿಸಿ – 4ಅಂಕ

ಪಗೆಗೆ ಕಣಿಯೊಂದುಂಟೇ ನಂಣ್ಪಿಂಗಮಾಗರ ಮುಂಟೆ ನೀಂ
ಬಗೆಯ ಪಗೆಯುಂ ನಂಣ್ಪುಂ ಕಯ್ಕೊಂಡ ಕಜ್ಜದಿನಲ್ತೆ ಪು
ಟ್ಟು ಗುಮರಸುಗಳ್ಗೆಂದೀ ಸಂದರ್ಥಶಾಸ್ತ್ರದೊಳೇಕೆ ಪೇಳ್
ಮಗನೆ ನೆಗಳ್ದೈ ಕಾರ್ಯಂ ಮಿತ್ರಾದಿಕಾರಕ ಮೆಂಬುದಂ

**"ಪ್ರಸ್ತುತ ಪದ್ಯ ಭಾಗವನ್ನು ಆದಿಕವಿ ಪಂಪ ವಿರಚಿತ ವಿಕ್ರಮಾರ್ಜುನ ವಿಜಯಂ ಕೃತಿಯಿಂದ ಆಯ್ದ ಎಮ್ಮ ನುಡಿಗೇಳ್ ಪದ್ಯಭಾಗದಿಂದ ಆರಿಸಲಾಗಿದೆ."**

ದುರ್ಯೋಧನನ ಹಠ ಹಾಗೂ ದ್ವೇಷದಿಂದಾಗಿ ನಡೆದ ಮಹಾಭಾರತ ಯುದ್ದದಲ್ಲಿ ತನ್ನ ತೊಂಭತ್ತೊಂಭತ್ತು ಮಕ್ಕಳನ್ನು ಕಳೆದುಕೊಂಡ ವೃದ್ದದಂಪತಿಗಳಾದ ದೃತರಾಷ್ಟ್ರ ಹಾಗೂ ಗಾಂಧಾರಿ ಉಳಿದಿರುವ ಒಬ್ಬ ಮಗನಾದರೂ ಬದುಕಲಿ ಎಂಬ ಉದ್ದೇಶದಿಂದಾಗಿ ರಣರಂಗಕ್ಕೆ ಒಂದು ದುರ್ಯೋಧನನಲ್ಲಿ ಪ್ರಾರ್ಥಿಸುವ ದೃಶ್ಯ ಹೃದಯ ವಿದ್ರಾವಕವಾಗಿದೆ.

ಹಗೆತನಕ್ಕೆ ಒಂದು ಗಣಿಯಿದೆಯೇನು? ಸ್ನೇಹಕ್ಕೆ ಒಂದು ನಮೆಯಿದೆಯೇನು? ರಾಗದ್ವೇಷಗಳೆರಡೂ ಅವರು ಅಂಗೀಕರಿಸುವ ಕಾರ್ಯದಿಂದಲ್ಲವೇ ಹುಟ್ಟುವುದು. ಅರ್ಥಶಾಸ್ತ್ರದಲ್ಲಿ ಹೇಳಿರುವಂತೆ ಕಾರ್ಯವೇ ಸ್ನೇಹ ದ್ವೇಷಗಳಿಗೆ ಕಾರಣವಾದುದು ಎಂಬ ನೀತಿಯನ್ನು ವೃದ್ದದಂಪತಿಗಳು ದುರ್ಯೋಧನನಿಗೆ ಹೇಳುವ ಮಾತು ಅತ್ಯಂತ ಮೌಲ್ಯಯುತವಾಗಿದೆ.

**ಹಕ್ಕಿ ಹಾರುತಿದೆ ನೋಡಿದಿರಾ**

ಕರಿನೆರೆ ಬಣ್ಣದ ಪುಚ್ಚಗಳುಂಟು
ಬಿಳಿಹೊಳೆಬಣ್ಣದ ಗರಿಗರಿಯುಂಟು
ಕೆನ್ನನ ಹೊನ್ನನ ಬಣ್ಣಬಣ್ಣಗಳ
ರೆಕ್ಕೆಗಳೆರಡೂ ಪಕ್ಕದಲುಂಟು
ಹಕ್ಕಿಹಾರುತಿದೆ ನೋಡಿದಿರಾ?

ಈ ಪದ್ಯಭಾಗವನ್ನು ದ.ರಾ.ಬೇಂದ್ರೆಯವರ ಹಕ್ಕಿಹಾರುತಿದೆ ನೋಡಿದಿರಾ ಎಂಬ ಪದ್ಯಪಾಠದಿಂದ ಆರಿಸಲಾಗಿದೆ. ಚಲನಶೀಲತೆ ಜೀವಂತಿಕೆಯ ಗುಣ ನಿಸರ್ಗದ ಹೊಂದಾನಿಕೆಯಂತೆ ಕಾಲ ಉರುಳುತ್ತದೆ. ಪ್ರತಿಯೊಬ್ಬ ಮಾನವನ ಬದುಕು ಬಾಲ್ಯ, ಯೌವ್ವನ ಮುದಿತನವೆಂಬ ಅವಸ್ಥಾತ್ರಯದಿಂದ ಕೂಡಿದೆ. ಯೌವ್ವನ ಕರಿಬಣ್ಣವಾದರೆ, ಮುದಿತನ ನೆರೆಬಣ್ಣದ ಸಂಕೇತಗಳು ಈ ಎರಡೂ ಬಣ್ಣಗಳೂ ಕಾಲನೆಂಬ ಹಕ್ಕಿಯ ಪುಚ್ಚೆಗಳು ಬಿಳಿಹೊಳೆಬಣ್ಣವು ಶಾಂತಿಯ ಸಂಕೇತ ಹಳದಿ ಕೆಂಪು ಬಣ್ಣಗಳು ವೀರ ಮತ್ತು ತ್ಯಾಗದ ಪ್ರತೀಕವಾಗಿದೆ. ಇವೆರಡೂ ಬಣ್ಣಗಳು ಕಾಲನೆಂಬ ಹಕ್ಕಿಯ ಬಣ್ಣದ ರೆಕ್ಕೆಗಳು ಹೀಗೆ ಕಾಲವೆಂಬ ಹಕ್ಕಿಬಣ್ಣ ಬಣ್ಣದ ಗರಿ ಪುಕ್ಕ ರೆಕ್ಕೆಗಳಿಂದ ರಂಗು ರಂಗಾಗಿ ಹಾರಾಡುತ್ತಿದೆ.

ನೀಲ ಮೇಘ ಮಂಡಲ ಸಮಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸಿಕ್ಕಿಸಿಕೊಂಡು
ಸೂರ್ಯ ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ಹಕ್ಕಿಯ ಹಾರುವಿಕೆ ಪ್ರಕೃತಿಯ ಸಹಜ ಕ್ರಿಯೆಯೊಂದಿಗೆ ಯುಗಗಳೇ ಉರುಳಿ ಹೊಸತನಕ್ಕೆತೆರೆದುಕೊಳ್ಳುವ ಸಂಕೇತವೂ ಆಗಿದೆ ಎಂಬುದಾಗಿ ದ.ರಾ.ಬೇಂದ್ರೆಯವರು ತಿಳಿಸುತ್ತಾ, ನೀಲಿಯ ಬಣ್ಣದ ಮೇಘ ಮಾಲೆಗೆ ಅಥವಾ ಮಂಡಲಕ್ಕೆ ಸಮನಾದಬಣ್ಣ ಮುಗಿಲಿಗೆ ರೆಕ್ಕೆಗಳು ಮೂಡಿದವೋ ಎನ್ನುವಂಥ ನಕ್ಷತ್ರಗಳ ಮಾಲೆಯನ್ನೇ ಕಲೆಯಲ್ಲಿ ಸಿಕ್ಕಿಸಿಕೊಂಡು ಜಗತ್ತನ್ನು ಬೆಳಗುವ ಸೂರ್ಯ ಚಂದ್ರರನ್ನು ಕಣ್ಣುಗಳನ್ನಾಗಿ ಮಾಡಿಕೊಂಡು ಹಕ್ಕಿಹಾರುತಿದೆ. ಎಂಬುದಾಗಿ ಕವಿ ದ.ರಾ ಬೇಂದ್ರೆಯವರು ವಿವರಿಸುತ್ತಾರೆ.

ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ ಗಿಂಡಲಗಳ ಗಡಮುಕ್ಕಿ
ತೇಲಿಸಿ ಮುಳುಗಿಸಿ ಖಂಡ-ಖಂಡಗಳ
ಸಾರ್ವಭೌಮರ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ?

ಕಾಲವೆಂಬ ಪಕ್ಷಿಯ ಹಾರಾಟದಲ್ಲಿ ಎಷ್ಟೋ ರಾಜ್ಯ ಸಾಮ್ರಾಜ್ಯಗಳನ್ನು ಒಕ್ಕಿ ಗಟ್ಟಿ ಸಾಮ್ರಾಜ್ಯಗಳು ಉಳಿದು ಜಳ್ಳುರಾಜ್ಯಗಳು ತೂರಿಹೋದವು. ಮಂಡಲ ಮಹಾಮಂಡಲಗಳ ಕೋಟೆ ಕೊತ್ತಲಗಳು ರಾಜ್ಯ ದಾಸೆಯಿಂದ ಗಬಗಬನೆ ಮುಕ್ಕಲ್ಪಟ್ಟವು. ಅನೇಕ ಖಂಡ ಖಂಡಗಳ ಸಾರ್ವಭೌಮರ ನೆತ್ತಿಯನ್ನು ಕುಕ್ಕಿ ಖಂಡಗಳು ಸಾಗರಗಳಲ್ಲಿ ಮುಳುಗಿದವು ತೇಲಿದವು ಎಂಬುದಾಗಿ ಕವಿ ದ.ರಾಬೇಂದ್ರೆಯವರು ತಮ್ಮ ಕವನದಲ್ಲಿ ವಿವರಿಸಿದ್ದಾರೆ.

**ಸಂಕಲ್ಪಗೀತೆ**

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ,
ಹೊಸ ಬರವಸೆಗಳ ಕಟ್ಟೋಣ
ಮನುಜರ ನಡುವಣ ಅಡ್ಡಗೋಡೆಗಳ
ಕೆಡುವುತ ಸೇತುವೆಯಾಗೋಣ

ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಐತಿಹಾಸಿಕವಾಗಿ, ನೈತಿಕವಾಗಿ ಬಿದ್ದಿರುವುದನ್ನು ಮೇಲೆಬ್ಬಿಸಿ, ಹೊಸ ಭರವಸೆಗಳನ್ನು ತುಂಬುವುದರ ಮೂಲಕ ನವಶಕ್ತಿಯನ್ನು ಪಡೆಯಬೇಕು. ಹೊಸ ಭರವಸೆಯಿಂದ ಸಮಾಜವನ್ನು ಕಟ್ಟಬೇಕಿದೆ. ಹೊಸ ಭರವಸೆಗಳ ಮೂಲಕ ಮನುಷ್ಯರ ನಡುವಿನ ಆಂತರಿಕ ಅಡ್ಡಗೋಡೆಗಳನ್ನು ಕೆಡುವುತ ಮನುಜ ಮನುಜರ ನಡುವೆ ಸೇತುವೆಯಾಗಬೇಕಿದೆ ಎಂಬುದಾಗಿ ಕವಿ. ಜಿ.ಎಸ್. ಶಿವರುದ್ರಪ್ಪರವರು ತಮ್ಮ ಕವನದಲ್ಲಿ ವಿವರಿಸಿದ್ದಾರೆ.

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ

ಮತಗಳು ದೇಶದ ವ್ಯಕ್ತಿಯ ಸಮಗ್ರ ಅಭಿವೃದ್ದಿಗೆ ಮಾರಕವಾಗಬಾರದು ಎಲ್ಲಾ ಮತಗಳು ಪ್ರತಿಯೊಬ್ಬ ವ್ಯಕ್ತಿಯ ಪ್ರಗತಿಗೆ ವಿಕಾಸಕ್ಕೆ ಪಥಗಳು ಎಂಬ ಹೊಸ ಎಚ್ಚರದಿಂದ ಬದುಕಬೇಕು ವ್ಯಕ್ತಿಯಲ್ಲಿರುವ ಭಯವನ್ನು ಸಂಶಯದಿಂದ ಕುಡಾದ ಕಣ್ಣಿನಲ್ಲಿ ಕಮರಿದ ಕಣ್ಣಿನಲ್ಲಿ ನಾಳಿನ ಕನಸನು ಬಿತ್ತುವ ಆಶಾಜ್ಯೋತಿಯಾಗಬೇಕು. ಅಂತಹ ಕನಸನ್ನು ಪ್ರತಿಯೊಬ್ಬರ ಎದೆಯೊಳದಲ್ಲಿ ಚಿತ್ತಬೇಕು ಎಂಬುದಾಗಿ ಜಿ.ಎಸ್.ಶಿವರುದ್ರಪ್ಪ ರವರು ತಮ್ಮ ಸಂಕಲ್ಪಗೀತೆ ಎಂಬ ಕವನದಲ್ಲಿ ವಿವರಿಸಿದ್ದಾರೆ.

## ೮-೧೦ವಾಕ್ಯದ ಪ್ರಶ್ನೆಗಳು ಗದ್ಯ(೪) ಪದ್ಯ(೪) ಅಂಕಗಳು - ೮ಅಂಕ

**ಗದ್ಯಪಾಠ - ೧**

**ಶಬರಿ - ಪು. ತಿ. ನರಸಿಂಹಾಚಾರ್**

**೧. ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.**

ರಾಮಲಕ್ಷ್ಮಣರನ್ನು ಕಂಡು ಶಬರಿ ಹಿಗ್ಗಿ, ಸಂತಸವನ್ನು ತುಂಬಿಕೊಳ್ಳುತ್ತಾಳೆ.ರಾಮಲಕ್ಷ್ಮಣರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ.ರಾಮನನ್ನು ಕಂಡ ತಾನು ಪರಮಸುಖಿಯೆಂದು ನರ್ತಿಸುತ್ತಾಳೆ.ರಾಮನೂ ಕೂಡ "ನಿನ್ನ ಆದರದಿಂದ ನಾವು ಸುಖಿ, ನಿನಗೆ ನಾವು ಋಣಿ" ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು "ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು ತೃಷೆ ಹಿಂಗಿತೇ?ನಾನೊಬ್ಬಳು ಬಡವಿ, ನನ್ನ ಮೇಲೆ ಮರುಕ ತೋರಿದಿರಾ?"ಎನ್ನುತ್ತಾಳೆ.ಶ್ರೀರಾಮನು "ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ, ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚೆಂದ, ನಿನ್ನ ಮನೆಯೇ ನಮ್ಮ ಮನೆ, ನೀನೇ ತಾಯಿಯಂತೆ" ಎನ್ನುತ್ತಾನೆ. ಶಬರಿಯು "ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ.ನಾನು ಧನ್ಯಳಾದೆ ಸಿದ್ಧಮಾತಂಗರ ವರ ನನಗೆ ಫಲಿಸಿತು.ನಿಮ್ಮನ್ನು ಕಂಡು ಪುಣ್ಯವು ತುಂಬಿತು.ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು.ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು" ಎನ್ನುತ್ತಾಳೆ.ಶ್ರೀರಾಮನು ಗುರುಗಳ ಮಹಿಮೆಯನ್ನು ಬಲ್ಲೆನೆಂದು ಹೇಳುತ್ತ."ದುಃಖವನ್ನು ಮರೆಸಿ, ಶಾಂತಿ ನೀಡುವ ಈ ವನದಲ್ಲಿ ಶುದ್ಧ ಪ್ರೇಮ ಮೂರ್ತಿ ನೀನು ಇದ್ದೀಯೆ.ಈ ದಿನ ನಮಗೆ ಸುದಿನ" ಎಂದು ಶಬರಿಯನ್ನು ಬಾಯಿತುಂಬ ಹೊಗಳುತ್ತಾನೆ.

**೨. ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ? ತಿಳಿಸಿ.**

ರಾಮನು ಬಂದು ತನ್ನ ಆಶ್ರಮದಲ್ಲಿ ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯಪಟ್ಟಳು.ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ, ಪಾದಕ್ಕೆ ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು.ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು.ಸಿದ್ಧತೆಯೇ ಇಲ್ಲವಲ್ಲ ಎಂದು ಹಂಬಲಿಸಿದಳು.ಮನಸ್ಸಿನ ಬಯಕೆಯಂತೆ ಬಗೆಬಗೆಯ ಕಂಪು ಇರುವ ವನಮಾಲೆಯನ್ನು ರಾಮನ ಕೊರಳಿಗೆ ಇಟ್ಟು ಹಿಗ್ಗಿದಳು.ಜಗತ್ತಿನಲ್ಲಿ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತ, ನಿಮಗಾಗಿ ತಂದಿದ್ದೇನೆಂದು ತಿಳಿಸಿ ರಾಮನ ಕೈಗೆ ಇತ್ತಳು. ಶಬರಿಯ ಸೇವೆಯಿಂದ ರಾಮನು ಸುಪ್ರಸನ್ನನಾದನು.ರಾಮಲಕ್ಷ್ಮಣರು ಧನ್ಯತಾಭಾವ ದಿಂದ ಮಂದಹಾಸ ಬೀರಿದರು.ಹೀಗೆ ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.

**೩. 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ.**

ಶಬರಿ ಮಾತಂಗ ಋಷಿಯ ಆಶ್ರಮದಲ್ಲಿ ಇರುತ್ತಾಳೆ.ಸಿದ್ಧರಾದ ಮಾತಂಗ ಋಷಿಗಳು ಶಬರಿಯ ಮನದಾಸೆಯನ್ನು ತಿಳಿದವರಾಗಿದ್ದು, "ರಾಮಲಕ್ಷ್ಮಣರು ಆಶ್ರಮಕ್ಕೆ ಬಂದೇ ಬರುತ್ತಾರೆ.ನಿನ್ನಿಷ್ಟಾರ್ಥ ನೆರವೇರುತ್ತದೆ" ಎಂದಿದ್ದರು.ಅವರ ಮಾತಿನಂತೆ ರಾಮಲಕ್ಷ್ಮಣರು ಶಬರಿಯ ಆಶ್ರಮಕ್ಕೆ ಭೇಟಿ ನೀಡುತ್ತಾರೆ.ಶಬರಿಯು ರಾಮನ ದರ್ಶನದಿಂದ ಪುಳಕಿತಳಾದಳು.ಕಣ್ತುಂಬ ರಾಮನ ದರ್ಶನ ಮಾಡಿ, ಮುಟ್ಟಿ, ನಮಸ್ಕರಿಸಿ, ಸಂಭ್ರಮಿಸಿದಳು.ಪರಿಮಳದ ವನಮಾಲೆಯನ್ನು ರಾಮನ ಕೊರಳಿಗೆ ಹಾಕಿ, ರುಚಿಕರ ಹಣ್ಣುಗಳನ್ನು ನೀಡಿ ಉಪಚರಿಸಿದಳು.ಧನ್ಯಳಾದೆನೆಂದು ಸಂತಸ ವ್ಯಕ್ತಪಡಿಸಿದಳು. ಹಲವಾರು ವರ್ಷಗಳಿಂದ ರಾಮನ ದರ್ಶನಕ್ಕಾಗಿ ಕಾದು, ಮುನಿಗಳ ಮಾತನ್ನು ನಂಬಿ, ರಾಮನು ಬರುವ ಸುದಿನವನ್ನು ಎದುರು ನೋಡುತ್ತಿದ್ದ ಶಬರಿಗೆ ರಾಮನ ದರ್ಶನವಾಯಿತು. ಶಬರಿಯ ಮನದಾಸೆ ಈಡೇರಿತು. ಹಾಗಾಗಿ 'ನಂಬಿ ಕೆಟ್ಟವರಿಲ್ಲ' ಎಂಬ ಮಾತು ಶಬರಿಯ ಪಾಲಿಗೆ ನಿಜವಾಯಿತು.

**ಗದ್ಯಪಾಠ – ೨.**

**ಅಮೆರಿಕದಲ್ಲಿ ಗೊರೂರು.– ಗೊರೂರು ರಾಮಸ್ವಾಮಿ ಅಯ್ಯಂಗಾರ್**

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು / ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

**೧. ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಹೇಗಿದ್ದವು?**

ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಅಗಲವಾದ ಎಂಟೂವರೆ ಮೊಳ ಉದ್ದದ, ನಾಲ್ಕು ಜರಿ ಗೆರೆಗಳುಳ್ಳ ಕೆಂಪು ಕಂಬಿಯ ಖಾದಿ ಕಚ್ಚೆ ಪಂಚೆ ಹಾಗೂ ಕಾವಿ ಬಣ್ಣದ ನೀಳವಾದ ಜುಬ್ಬ ಧರಿಸಿದ್ದರು. ಚಳಿಗಾಗಿ ಒಂದು ಕೆಂಪು ಉಣ್ಣೆಯ ಶಾಲು ಹಾಗೂ ಮಫ್ಲರ್ ಕಟ್ಟಿದ್ದರು.ಹಣೆಯಲ್ಲಿ ಢಾಳಾದ ಕೆಂಪು ನಾಮ ಹಾಕಿದ್ದರು. ತಲೆಯ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು, ಬಿಳಿಗಡ್ಡ, ಮೀಸೆ ಇತ್ತು.ಕಾಲಿಗೆ ದಪ್ಪನಾದ ಎಕ್ಕಡ ಧರಿಸಿದ್ದರು.ಅವರ ಮೈಮೇಲಿದ್ದ ಉಡುಪುಗಳು ಏಳೆಂಟು ಬಣ್ಣಗಳಿಂದ ಕೂಡಿ ಹೊಳೆಯುತ್ತಿತ್ತು. ಈ ವಿಚಿತ್ರವಾದ ವೇಷಭೂಷಣಗಳನ್ನು ಕಂಡು ಅಮೆರಿಕದ ವಿದ್ಯಾರ್ಥಿಗಳು ಪೈಡ್ ಪೈಪರ್, ಸಾಂತಾ ಕ್ಲಾಸ್ ಎಂದು ಕೂಗಿದರು. ಉಪಾಧ್ಯಾಯರು "ನಿಮ್ಮ ಉಡುಪು ಸ್ವಲ್ಪ ವಿಚಿತ್ರವಾಗಿದೆ" ಎಂದು ಗೊರೂರರಿಗೆ ಹೇಳಿದರು.

**೨. ಖಾದಿ ಬಟ್ಟೆಯ ವೈಶಿಷ್ಟ್ಯವನ್ನು ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಹೇಗೆ ಪರಿಚಯಿಸಿದರು?**

ಗೊರೂರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಗಾಂಧೀಜಿಯವರನ್ನು ನೆನಪಿಸಿಕೊಳ್ಳುವ ಮೂಲಕ ಖಾದಿಬಟ್ಟೆಯ ವೈಶಿಷ್ಟ್ಯವನ್ನು ಪರಿಚಯಿಸಿದರು.ಗೊರೂರರು "ನಾನು ಗಾಂಧಿ ಭಾರತದಲ್ಲಿ ಜನಿಸಿದವನು ಭಾರತದ ಹವೆ ಬಹಳ ಹಿತವಾಗಿರುತ್ತದೆ ಅಲ್ಲಿ ಅತ್ಯಂತ ಕಡಿಮೆ ಬಟ್ಟೆಗಳಿಂದಲೇ ಜೀವಿಸಬಹುದು ಈ ಬಟ್ಟೆಯನ್ನು ಭಾರತದಲ್ಲಿ ಪ್ರಚಾರಕ್ಕೆ ತಂದವರು ಗಾಂಧೀಜಿ. ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಸೋಂಕು ಉಂಟಾಗಿಲ್ಲ" ಎಂದು ಹೇಳಿದರು."ನಾನು ಧರಿಸಿರುವ ಈ ಖಾದಿಬಟ್ಟೆ ಕೈಯಿಂದಲೇ ಮಾಡಿದ್ದು" ಎಂದು ಗೊರೂರರು ಹೇಳಿದ ಕೂಡಲೇ ಎಲ್ಲ ಉಪಾಧ್ಯಾಯರು ಹಾಗೂ ಹುಡುಗರು ಬಂದು ಅವರ ಬಟ್ಟೆಗಳನ್ನು ಮುಟ್ಟಿ ನೋಡಿದರು. ಒಬ್ಬ ಉಪಾಧ್ಯಾಯರು "ಕೈಯಿಂದ ಇದನ್ನು ಮಾಡುವುದು ಹೇಗೋ" ಎಂದು ಗೊರೂರರ ಮಾತಿನಲ್ಲಿ ಅಪನಂಬಿಕೆಯನ್ನು ವ್ಯಕ್ತ ಪಡಿಸಿದರು ಆಗ ಗೊರೂರರು ರಾಟೆ(ಚರಕ)ದಿಂದ ಹತ್ತಿಯನ್ನು ನೂಲುವ, ಹಾಗೂ ಮಗ್ಗದಿಂದ ಬಟ್ಟೆಯನ್ನು ನೇಯುವ ವಿಧಾನಗಳನ್ನು ಕುರಿತು ಅವರೆಲ್ಲರಿಗೆ ವಿವರಿಸಿದರು.

**೩. ವಿದ್ಯುತ್ ಒಲೆಯಿಂದ ಉಂಟಾದ ಅಪಾಯವನ್ನು ಗೊರೂರರು ಹೇಗೆ ಪರಿಹರಿಸಿ ಕೊಂಡರು?**

ಗೊರೂರು ರಾಮಸ್ವಾಮಿ ಅಯ್ಯಂಗಾರರು ಇದ್ದ ಮನೆಯ ಅಡುಗೆಯ ಮನೆಯಎಲ್ಲ ಸ್ವಿಚ್‌ಗಳೂ ಆಫ್ ಆಗಿದ್ದರೂ ವಿದ್ಯುತ್ ಒಲೆಯಿಂದ ಕೊಂಬಿನ ಸದ್ದು ಒಂದೇ ಸಮನಾಗಿ ಬರುತ್ತಿತ್ತು. ವಿದ್ಯುತ್ ಒಲೆಗಳ ಸ್ವಿಚ್ ಜೋಡಣೆ ಹೊಸ ತರಹದಾಗಿದ್ದು "ಯಾವುದನ್ನು ಮುಟ್ಟಿದರೆ ಏನೋ" ಎಂಬ ಭಯದಿಂದ "ಮನೆಯಲ್ಲಿ ಬೆಂಕಿ ಹೊತ್ತಿ ಕೊಂಡೀತು" ಎಂಬ ಆತಂಕವನ್ನು ಉಂಟುಮಾಡಿತ್ತು. ಅಡುಗೆ ಮನೆಯ ವಿದ್ಯುತ್ ಒಲೆಯಿಂದ ಬರುತ್ತಿದ್ದ ಕೊಂಬಿನ ಸದ್ದನ್ನು ನಿಲ್ಲಿಸಲು ತಿಳಿಯದೆ, ಯಾರನ್ನಾದರೂ ಕರೆಯುವ ಉದ್ದೇಶದಿಂದ ಗೊರೂರರು ಸ್ಕೂಲಿನತ್ತ ಹೆಜ್ಜೆ ಹಾಕಿದರು.ಅವರು ಆ ಶಾಲೆಯ ಉಪಾಧ್ಯಾಯರು ಹಾಗೂ ವಿದ್ಯಾರ್ಥಿಗಳನ್ನು ಪರಿಚಯ ಮಾಡಿಕೊಂಡು, ತಮ್ಮ ಸಮಸ್ಯೆಯನ್ನು ತಿಳಿಸಿ, ಸಹಾಯ ಮಾಡುವಂತೆ ಕೇಳಿಕೊಂಡರು.ಆಗ ಶಾಲೆಯ ಉಪಾಧ್ಯಾಯರು ಬಲಿಷ್ಠನಾದ ಹುಡುಗನೊಬ್ಬನನ್ನು ಅವರೊಡನೆ ಕಳುಹಿಸಿ ಕೊಟ್ಟರು.ಆ ಹುಡುಗ ಗೊರೂರರ ಜೊತೆ ನೆಟ್ಟನೆ ಅಡುಗೆ ಮನೆಗೆ ಬಂದು, ಸುತ್ತ ನೋಡಿ ವಿದ್ಯುತ್ ಒಲೆಗೆ ಸಂಬಂಧಿಸಿದ ಒಂದು ಮುಳ್ಳಿಗೆ ಆ ಧ್ವನಿ ಸಂಬಂಧಿಸಿದ್ದು ಎಂದು ತಿಳಿದು, ಆ ಸ್ವಿಚ್ಚನ್ನು ಪತ್ತೆಮಾಡಿ, ಅದನ್ನು ಅಮುಕಿದನು, ಕೂಡಲೆ ಧ್ವನಿ ನಿಂತಿತು ಹೀಗೆ ವಿದ್ಯುತ್ ಒಲೆಯಿಂದ ಉಂಟಾದ ಅಪಾಯವನ್ನು ಗೊರೂರರು ಪರಿಹರಿಸಿಕೊಂಡರು.

## ಪದ್ಯಪಾಠ – ೧.

**ಎಮ್ಮನುಡಿಗೇಳ್ – ಆದಿಕವಿ ಪಂಪ**

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು / ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**೧. ಧೃತರಾಷ್ಟ್ರನು ಸಂಧಿ ಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು?**

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ಮಗನೇ, ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ (ಭೇದವಿಲ್ಲ); ರಾಜ್ಯವನ್ನು ವಿಭಾಗ ಮಾಡಿ ಆಳೋಣ.ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವವರೇ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೇ; ಭೀಷ್ಮನಿಗೆ, ದ್ರೋಣನಿಗೆ, ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಕೋಪಿಸಿ ಯುದ್ಧ ಮಾಡುವವರು ಇನ್ನು ಯಾರು?ಸಂಧಿಯನ್ನು ಮಾಡೋಣ.ದ್ವೇಷಕ್ಕೆ ಒಂದು ಸ್ಥಳ; ಬಾಂಧವ್ಯಕ್ಕೆ ಒಂದು ಸ್ಥಳ ಎಂದು ಇದೆಯೇ? ಆಲೋಚನೆ ಮಾಡು.ರಾಜರುಗಳಿಗೆ ಹಗೆತನವೂ ಬಾಂಧವ್ಯವೂ ಮಾಡಿದ ಕಾರ್ಯದಿಂದ ಉಂಟಾಗುತ್ತವೆ ಎಂದು ಪ್ರಸಿದ್ಧವಾದ ದಂಡನೀತಿಶಾಸ್ತ್ರದಲ್ಲಿ ಹೇಳಿಲ್ಲವೇ?ಮಿತ್ರರನ್ನೂ ಶತ್ರುಗಳನ್ನೂ ಉಂಟುಮಾಡುವ ಕಾರ್ಯವನ್ನು ಏಕೆ ಮಾಡುತ್ತೀಯೇ?ನಮಗೆ ನೀನು ಇದ್ದ ಪಕ್ಷದಲ್ಲಿ ಎಲ್ಲರೂ ಇರುವವರು.ಮನದಲ್ಲಿ ದುಃಖವೇನೂ ಇಲ್ಲ. ಅದು ಹೇಗೆಂದರೆ ಹಗಲಿನಲ್ಲಿ ಸೂರ್ಯನೇ ಸಾಲದೆ; ಎಷ್ಟು ದೀಪಗಳು ಉರಿದರೇನು?ಆರಿ ಹೋದರೇನು?ಅದಲ್ಲದೆಯೂ ಪಾಂಡವರಾದರೆ ನನಗೆ ಪಾಂಡುರಾಜನಿಗೆ ಮಾಡಿದುದನ್ನೇ ಮಾಡುವರು.(ಹೇಳಿದಂತೆ ಕೇಳುವರು). ಹೇಳಿದ ಮಾತನ್ನು ಮೀರುವವರಲ್ಲ. ಅವರನ್ನು ನಾನು ಹೇಗಾದರೂ ಒಪ್ಪಿಸಿ, ನೀನು ಹೇಳಿದುದ್ದನ್ನು ಹೇಳಿಸುವೆನು. ಅದಕ್ಕೆ ಪ್ರತಿಭಟಿಸದೆ ಒಪ್ಪಿಕೋ, ನಿನ್ನನ್ನು ಕೈಯೊಡ್ಡಿ ಬೇಡುವೆನು" ಎಂದು ಹೇಳುತ್ತಾನೆ.

**೨. ದುರ್ಯೋಧನನ ತಂದೆತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.**

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ಮಗನೇ, ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ (ಭೇದವಿಲ್ಲ); ರಾಜ್ಯವನ್ನು ವಿಭಾಗ ಮಾಡಿ ಆಳೋಣ.ಆ ಪಾಂಡುವಿನ ಮಕ್ಕಳೂ ನಿನ್ನಲ್ಲಿ ಸರಿಯಾಗಿ ಹೊಂದಿಕೊಳ್ಳುವವರೇ; ಈ ಯುದ್ಧವು ನಿನ್ನಿಂದ ಆಯಿತು ಎಂದರೆ ಇನ್ನು ಕೋಪಗೊಳ್ಳುತ್ತೀಯೇ; ಭೀಷ್ಮನಿಗೆ, ದ್ರೋಣನಿಗೆ, ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಕೋಪಿಸಿ ಯುದ್ಧ ಮಾಡುವವರು ಇನ್ನು ಯಾರು?ಸಂಧಿಯನ್ನು ಮಾಡೋಣ.ನಮಗೆ ನೀನು ಇದ್ದ ಪಕ್ಷದಲ್ಲಿ ಎಲ್ಲರೂ ಇರುವವರು.ಮನದಲ್ಲಿ ದುಃಖವೇನೂ ಇಲ್ಲ. ಅದು ಹೇಗೆಂದರೆ ಹಗಲಿನಲ್ಲಿ ಸೂರ್ಯನೇ ಸಾಲದೆ; ಎಷ್ಟು ದೀಪಗಳು ಉರಿದರೇನು?ಆರಿ ಹೋದರೇನು? ಪ್ರತಿಭಟಿಸದೆ ಸಂಧಿಗೆ ಒಪ್ಪಿಕೋ, ನಿನ್ನನ್ನು ಕೈಯೊಡ್ಡಿ ಬೇಡುವೆನು" ಎಂದು ಹೇಳುತ್ತಾನೆ. ಧೃತರಾಷ್ಟ್ರನ ಆ ಮಾತಿಗೆ ಬೆಂಬಲವಾಗಿ ಗಾಂಧಾರಿಯು ದುರ್ಯೋಧನನ್ನು ಕುರಿತು "ಕುರುವಂಶವೆಂಬ ತೋಟವು ಭೀಮನೆಂಬ ಮದದಿಂದ ಕುರುಡಾಗಿ ಸೊಕ್ಕೇರಿದ ಆನೆಯು ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು; ಪುಣ್ಯದಿಂದ ಒಂದು ದೊಡ್ಡ ಮರವು ಉಳಿಯುವಂತೆ ನೀನು ಉಳಿದೆ; ಇನ್ನು ಯುದ್ಧ ಮಾಡುವಂಥವರೂ ಇಲ್ಲ; ಮಗನೇ, ಮುದುಕರೂ ಕುರುಡರೂ ಎಂದು ಹೇಳದೆ ನಮ್ಮ ಮಾತನ್ನು ಕೇಳು, ಆಲೋಚಿಸು, ತಂದೆಯ ಮಾತಿಗೆ ಒಪ್ಪಿಗೆ ಕೊಡು" ಎಂದು ಹೇಳುತ್ತಾಳೆ.ಹೀಗೆದುರ್ಯೋಧನನ ತಂದೆತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದರು.

## ಪದ್ಯಪಾಠ – ೨

**ಹಕ್ಕಿ ಹಾರುತಿದೆ ನೋಡಿದಿರಾ – ದ. ರಾ. ಬೇಂದ್ರೆ**

**ಕೊಟ್ಟಿರುವ ಪ್ರಶ್ನೆಗೆ ಎಂಟು / ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**೧. ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳಾವುವು?**

ದ. ರಾ. ಬೇಂದ್ರೆ ಅವರು 'ಹಕ್ಕಿ ಹಾರುತ್ತಿದೆ ನೋಡಿದಿರಾ' ಕವನದಲ್ಲಿ ಚಲನಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಿದ್ದಾರೆ.

ಇರುಳು ಇರುಳು ಅಳಿದು ದಿನ ದಿನ ಬೆಳಗೆ ಸುತ್ತಮುತ್ತಲೂ ಮೇಲೆ ಕೆಳಗೆ ಕಣ್ಣು ರೆಪ್ಪೆ ಮಿಟಿಕಿಸುವಷ್ಟು ಸಮಯದಲ್ಲಿ (ನಿಮಿಷದಲ್ಲಿ) ಕಾಲಪಕ್ಷಿಯು ಗಾವುದ ಗಾವುದ ಗಾವುದ ಮುಂದೆ ಸಾಗುತ್ತಿರುತ್ತದೆ.

ಕಾಲಪಕ್ಷಿಗೆ ಕರಿನರೆ ಬಣ್ಣದ ಪುಚ್ಚಗಳು (ಬಾಲ) ಉಂಟು, ಬಿಳಿಹೊಳೆ ಬಣ್ಣದ ಗರಿ ಗರಿ ಉಂಟು, ಕೆನ್ನನ ಹೊನ್ನನ ಬಣ್ಣ-ಬಣ್ಣಗಳ ರೆಕ್ಕೆಗಳು ಎರಡೂ ಪಕ್ಕದಲಿ ಉಂಟು ಅಂದರೆ ಇಲ್ಲಿ ಕವಿಗಳು ಕಾಲದ ಮೂರು ಅವಸ್ಥೆಗಳನ್ನು ಬಣ್ಣಗಳ ಹೋಲಿಕೆಯ ಮುಖಾಂತರ ಬಹು ಸ್ವಾರಸ್ಯವಾಗಿ ವರ್ಣಿಸುತ್ತಾರೆ.

ತರತಮರಹಿತ ಸಮದೃಷ್ಟಿಯಿಂದ ಕೂಡಿದ ನೀಲಮೇಘಮಂಡಲ – ಸಮಬಣ್ಣದಂತೆ, ಅನಂತ ಆಕಾಶದಲ್ಲಿರುವ ಮುಗಿಲಿಗೆ ರೆಕ್ಕೆಗಳು ಮೂಡಿದಂತೆ, ನಕ್ಷತ್ರ ಮಾಲೆಯನ್ನು ಧರಿಸಿಕೊಂಡು, ಸೂರ್ಯ ಚಂದ್ರರನ್ನು ಕಣ್ಣಾಗಿಸಿಕೊಂಡು ಹಕ್ಕಿಯು ಹಾರಾಡುತ್ತಿರುವ ನೋಟ ಅದ್ಭುತವಾದುದು ಎಂದು ಕವಿಗಳು ವರ್ಣಿಸುತ್ತಾರೆ.

ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಯಿಸಿ, ಅವುಗಳ ಫಲಿತವನ್ನು ಕೊಯ್ಲು ಮಾಡಿದೆ.ಅದೇ ರೀತಿ ಅನೇಕ ಸಾಮ್ರಾಜ್ಯಗಳನ್ನು, ರಾಜ್ಯಗಳನ್ನು, ಕೋಟೆಕೊತ್ತಲಗಳನ್ನು ನಾಶಗೊಳಿಸಿದೆ.ಕಾಲಪಕ್ಷಿಯು ತನ್ನ ಪಯಣದಲ್ಲಿ ಭೂಮಂಡಲದ ಮೇಲಿರುವ ಖಂಡಗಳನ್ನು ತೇಲಿಸಿ, ಮುಳುಗಿ ಪ್ರಾಕೃತಿಕ (ಪ್ರಗತಿ ಮತ್ತು

ವಿನಾಶ) ಬದಲಾವಣೆಗಳಿಗೂ ಕಾರಣವಾಗಿದೆ.ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂದು ಕವಿಗಳು ವರ್ಣಿಸುತ್ತಾರೆ.
ಕಾಲಪಕ್ಷಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.

## ಪದ್ಯಪಾಠ – ೫.

**ಸಂಕಲ್ಪ ಗೀತೆ – ಜಿ. ಎಸ್. ಶಿವರುದ್ರಪ್ಪ**

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತರಿಸಿ.**

**೧. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯ?**

"ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚುವ, ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ, ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳಿಗೆ ಶುದ್ಧೀಕರಿಸುವ ಮುಂಗಾರಿನ ಮಳೆಯಂತಹ ಪರಿಸರ ಪ್ರೇಮಿಯಾಗುವ, ಬರಡಾಗಿರುವ ಕಾಡುಮೇಡುಗಳು ಹಚ್ಚಹಸಿರಿನಿಂದ ಕಂಗೊಳಿಸಿ, ಸಮೃದ್ಧವಾಗುವಂತಹ ವಸಂತಕಾಲವಾಗುವ, ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ, ಅಸ್ಪೃಶ್ಯತೆ, ಅಸಮಾನತೆಗಳಿಂದ ಅಧಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವ, ಭಾಷೆ, ಜಾತಿ, ಮತ, ಧರ್ಮಗಳ ಭೇದಭಾವದಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ. ಸಮಾನತೆಯ ಮನೋಭಾವನೆಯನ್ನು ಮೂಡಿಸುವ ಸೇತುವೆಯಾಗುವ, ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ, ಭಯ ಹಾಗೂ ಸಂಶಯಗಳಿಂದ ಮಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು"ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪ ಅವರ ಆಶಯವಾಗಿದೆ.

**೨. ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.**

ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು. ನಾವು ಬದುಕಿನಲ್ಲಿ ಎಚ್ಚರಿಕೆಯಿಂದ ಮುನ್ನಡೆಯುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು.ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು.ನಾವು ವನಸಂರಕ್ಷಣೆಯ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಂವೃದ್ಧವಾಗುವಂತೆ ಮಾಡಬಹುದು.ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು.ನಾವು ಸಮಾನತೆ ಮನೋಭಾವನೆಯುಳ್ಳವರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡುಹಬಹುದು.ಎಲ್ಲ ಮತಗಳು ಸಾಧನೆಯ ದಾರಿಗಳು ಎಂಬ ಎಚ್ಚರದಲ್ಲಿ ಬದುಕುವ ಸಂಕಲ್ಪ ಕೈಗೊಳ್ಳುವುದರಿಂದ ದೇಶದಲ್ಲಿ ಶಾಂತಿಯು ನೆಲೆಸುವಂತೆ ಮಾಡಬಹುದು.ಭಯ ಹಾಗೂ ಸಂಶಯಗಳಿಂದ ಮುಕ್ತರಾಗುವ ಸಂಕಲ್ಪ ಕೈಗೊಳ್ಳುವುದರಿಂದ ಭವಿಷ್ಯದ ಹೊಂಗನಸನ್ನು ಕಾಣಬಹುದು. ಹೀಗೆ ಕವಿ ಶ್ರೀ ಜಿ. ಎಸ್. ಶಿವರುದ್ರಪ್ಪನವರುಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

## ಪದ್ಯಪಾಠ – ೬.

**ಕೌರವೇಂದ್ರನ ಕೊಂದೆ ನೀನು – ಕುಮಾರ ವ್ಯಾಸ**

**ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು/ಹತ್ತು ವಾಕ್ಯಗಳಲ್ಲಿ ಉತ್ತರಿಸಿ.**

**೧. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?**

"ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ.ನೀನು ನಿಜವಾಗಿ ಭೂಮಿಯ ಒಡೆಯ.ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ" ಎಂದು ಹೇಳುತ ಕೃಷ್ಣನು ಕರ್ಣನ ಕಿವಿಯಲ್ಲಿ ಉಭಯವನ್ನು (ದ್ವಂದ್ವವನ್ನು) ಬಿತ್ತಿದನು.ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು, ನಿನ್ನಯ ನಂತರ ಧರ್ಮರಾಯ, ಮೂರನೆಯಾತ ಕಲಿಭೀಮ, ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದರು.ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ ಸಹದೇವರು ಇಬ್ಬರು ಹುಟ್ಟಿದರು.ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು.ಪಾಂಡವ ಕೌರವ ರಾಜರು ನಿನ್ನನ್ನು ಓಲೈಸುವರು.ನಿನಗೆ ಎರಡು ವಂಶವು ಮರುಮಾತನಾಡದೆ ಸೇವೆಯನ್ನು ಮಾಡುವುವು.ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ ಹೇಳು.ಎಡಭಾಗದಲ್ಲಿ ಕೌರವೇಂದ್ರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ್ರ ಮಾಗಧ ಯಾದವಾದಿಗಳು ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆದು, ದುರ್ಯೋಧನ ನುಡಿಸಲು 'ಒಡೆಯ ಅನುಗ್ರಹವಾಗಲಿ' ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ?"ಎಂದು ಆಮಿಷ ಒಡ್ಡಿದನು.

**೨. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.**

ಕೃಷನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು, ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ "ಅಯ್ಯೋ, ದುರ್ಯೋಧನನಿಗೆ ಕೇಡಾದುದು" ಎಂದನು. ಹರಿಯ ಹಗೆತನವು ಹೊಗೆ

ತೋರದೆ ಸುಟ್ಟುಹಾಕುವುದಲ್ಲದೆ; ಸುಮ್ಮನೆ ಹೋಗುವುದೆ.ಕೃಷ್ಣನು "ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು" ಎಂದು ಮನದಲ್ಲಿ ನೊಂದುಕೊಂಡನು. "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ ಕೊಂದೆ.ವೀರ ದುರ್ಯೋಧನನೇ ಒಡೆಯನು.ಆತನ ಹಗೆಯೆ ಹಗೆ, ಅಭಿಮಾನವೇ ಅಭಿಮಾನವು, ದುರ್ಯೋಧನ ಆದಂತೆ ಆಗುವೆನು.ಕೃಷ್ಣ ಕೇಳು, ನಾಳೆ ಸಮರದ ವಿಷಯದಲ್ಲಿ ಪಾಂಡವರಲ್ಲಿ ನಿಜ ಪರಾಕ್ರಮದ ಶ್ರೇಷ್ಠತನವನ್ನು ತೋರುವೆನು.ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನ ಕೂಟ ಆಗುವುದು.ನಾನು ಕೌರವನ ಉಪಕಾರದ ಋಣ ತೀರಿಸುವಂತೆ ಹೋರಾಡಿ, ಯುದ್ಧರಂಗದಲ್ಲಿ ಲೆಕ್ಕವಿಲ್ಲದಷ್ಟು ವೀರಯೋಧರ ಕೊಂದು, ನನ್ನ ಒಡೆಯನಿಗಾಗಿ ಪ್ರಾಣವನ್ನು ಬಿಡುವೆನು. ಸೂರ್ಯನ ಮೇಲಾಣೆ ಪಾಂಡವರನ್ನು ನೋಯಿಸೆನು" ಎಂದನು.

**೩. ಕರ್ಣನ ನಿರ್ಧಾರ ಸರಿ ಎನ್ನುವಿರಾ? ಏಕೆ?**

ಕೃಷ್ಣನು ಕರ್ಣನ ಜನ್ಮ ರಹಸ್ಯವನ್ನು ತಿಳಿಸುತ್ತಾ ಆತನನ್ನು ಸಕಲ ಸಾಮ್ರಾಜ್ಯಕ್ಕೆ ಚಕ್ರವರ್ತಿಯನ್ನಾಗಿ ಮಾಡುವುದಾಗಿ ತಿಳಿಸುತ್ತಾನೆ. ಸೂರ್ಯನ ಅನುಗ್ರಹದಿಂದ ಜನಿಸಿದ ಕರ್ಣನನ್ನು ಮಗುವಾಗಿದ್ದಾಗ ಕುಂತಿಯು ನೀರಿನಲ್ಲಿ ತೇಲಿಬಿಟ್ಟದ್ದರಿಂದ ಅಂಬಿಗನ ಮನೆಯಲ್ಲಿ ಮಾತೃವಾತ್ಸಲ್ಯದಿಂದ ವಂಚಿತನಾಗಿ ಸೂತಪುತ್ರನಾಗಿ ಬೆಳೆಯ ಬೇಕಾಯಿತು. ಸೂತಪುತ್ರನೆಂದು ಸಮಾಜದಲ್ಲಿ ಆತನ ಶಕ್ತಿ ಸಾಮರ್ಥ್ಯಕ್ಕೆ ಸೂಕ್ತವಾದ ಸ್ಥಾನಮಾನ ದೊರೆಯಲಿಲ್ಲ.ಅಂತಹ ಸಂದರ್ಭದಲ್ಲಿ ದುರ್ಯೋಧನ ಕರ್ಣನನ್ನು ಗೆಳೆಯನಾಗಿ ಸ್ವೀಕರಿಸಿ ಅಂಗರಾಜ್ಯದ ಅಧಿಪತಿಯನ್ನಾಗಿಸುತ್ತಾನೆ. ಆತನಿಗೆ ಒಂದು ಸ್ಥಾನ, ಗೌರವಗಳನ್ನು ದೊರಕಿಸಿಕೊಡುತ್ತಾನೆ. ಈ ಕಾರಣಗಳಿಂದ ಕರ್ಣನು ದುರ್ಯೋಧನನೇ ತನಗೆ ಒಡೆಯ, ಆತನ ಹಗೆಗಳು ನನಗೂ ಹಗೆಗಳೇ, ಆತನ ಅಭಿಮಾನ ನನ್ನ ಅಭಿಮಾನ, ದುರ್ಯೋಧನನ ಹಾದಿಯನ್ನೇ ಅನುಸರಿಸುತ್ತೇನೆ. ಯುದ್ಧದಲ್ಲಿ ನಿಜ ಪರಾಕ್ರಮದ ಶ್ರೇಷ್ಠತನ ತೋರಿಸುತ್ತೇನೆ ಎನ್ನುವುದು ಕರ್ಣನ ಜಾಯಮಾನಕ್ಕೆ ಸರಿಯಾಗಿಯೇ ಇದೆ. ಕೌರವನು ತನಗೆ ಮಾಡಿದ ಉಪಕಾರವನ್ನು ಯುದ್ಧರಂಗದಲ್ಲಿ ತೀರಿಸುತ್ತೇನೆ. ತಮ್ಮಂದಿರನ್ನು ನೋಯಿಸದೆ, ಸೈನ್ಯಬಲವನ್ನು ಮಾರಿಗೆ ಔತಣವನ್ನಾಗಿ ನೀಡಿ, ಅನ್ನದಾತನ ಋಣವನ್ನು ಮುಗಿಸಿ, ಶರೀರವನ್ನು ತ್ಯಜಿಸುತ್ತೇನೆ ಎಂಬ ಕರ್ಣನ ಮಾತು ಆತನ ಸ್ವಾಮಿ ಭಕ್ತಿಗೆ ಸಾಕ್ಷಿಯಾಗಿದೆ.ಸ್ಥಾನ, ಗೌರವ ಹಾಗೂ ಕೀರ್ತಿ ದೊರಕಿಸಿಕೊಟ್ಟ ಒಡೆಯನಿಗೆ ತನ್ನ ಪ್ರಾಣವನ್ನು ಸಮರ್ಪಿಸುವುದು ಧರ್ಮವೇ ಆಗಿದೆ ಎಂಬ ಕರ್ಣನ ನಿರ್ಧಾರ ಸರಿಯಾಗಿದೆ.

# ವ್ಯಾಕರಣಾಂಶಗಳು – (14ಅಂಕ)

## ವ್ಯಾಕರಣಾಂಶಗಳು

### ಕನ್ನಡ ವರ್ಣಮಾಲೆ

| | |
|---|---|
| ಸ್ವರಗಳು | 13 |
| ಯೋಗವಾಹಕಗಳು | 2 |
| ವರ್ಗೀಯ ವ್ಯಂಜನಗಳು | 25 |
| ಅವರ್ಗೀಯ ವ್ಯಂಜನಗಳು | 9 |
| ಒಟ್ಟು | 49 ಅಕ್ಷರಗಳು |

**ಸ್ವರಗಳು :–** ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳು ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ.
ಸ್ವರಗಳಲ್ಲಿ 2 ವಿಧಗಳಿವೆ.

1) ಹ್ರಸ್ವಸ್ವರ 2) ದೀರ್ಘಸ್ವರ

**ಹ್ರಸ್ವಸ್ವರ :–** ಒಂದು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು
ಅ ಇ ಉ ಋ ಎ ಒ

**ದೀರ್ಘಸ್ವರ :–** ಎರಡು ಮಾತ್ರಾಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳು.
ಆ ಈ ಊ ಏ ಐ ಓ ಔ

**ಯೋಗವಾಹಕಗಳು :–** 1) ಅನುಸ್ವಾರ – ಅಂ 2) ವಿಸರ್ಗ–ಅಃ

**ವರ್ಗೀಯ ವ್ಯಂಜನಗಳು :–**

ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್

**ವರ್ಗೀಯ ವ್ಯಂಜನಗಳು 3 ವಿಧಗಳಿವೆ.**

1) **ಅಲ್ಪ ಪ್ರಾಣಾಕ್ಷರಗಳು :–** ಸ್ವಲ್ಪ ಉಸಿರನ್ನು ತೆಗೆದುಕೊಂಡು ಹೇಳುವ ಅಕ್ಷರಗಳು
ವರ್ಗದ 1 ಮತ್ತು 3ನೇ ಅಕ್ಷರಗಳು
ಉದಾ :– ಕ್, ಗ್, ಚ್.ಜ್ – – – – –

2) **ಮಹಾಪ್ರಾಣಾಕ್ಷರಗಳು :–** ಹೆಚ್ಚು ಉಸಿರನ್ನು ತೆಗೆದುಕೊಂಡು ಹೇಳುವ ಅಕ್ಷರಗಳು
ವರ್ಗದ 2 ಮತ್ತು 4ನೇ ಅಕ್ಷರಗಳು
ಉದಾ :– ಖ್, ಘ್, ಛ್, ಝ್ – – – – –

3) **ಅನುನಾಸಿಕ ಅಕ್ಷರಗಳು :–** ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳು
ವರ್ಗದ 5ನೇ ಅಕ್ಷರಗಳು
ಉದಾ :– ಙ, ಞ, ಣ, ನ, ಮ

**ಅವರ್ಗೀಯ ವ್ಯಂಜನಗಳು :–**

ಯ, ರ, ಲ, ವ, ಶ, ಷ, ಸ, ಹ, ಳ

*****

## ನಾಮಪದಗಳು :– ಒಬ್ಬ ವ್ಯಕ್ತಿ, ಸ್ಥಳ ವಸ್ತು ಮುಂತಾದ ಹೆಸರನ್ನು ತಿಳಿಸುವ ಪದ

**ನಾಮಪದಗಳ ವಿಧಗಳು**

1. ವಸ್ತುವಾಚಕ 2 ಗುಣವಾಚಕ 3 ಪರಿಮಾಣವಾಚಕ 4 ದಿಗ್ವಾಚಕ 5ಪ್ರಕಾರವಾಚಕ
6 ಸಂಖ್ಯಾವಾಚಕ 7 ಸಂಖ್ಯೇಯವಾಚಕ 8ಭಾವನಾಮಗಳು 9ಸರ್ವನಾಮಗಳು

1. **ವಸ್ತುವಾಚಕ :–** ವಸ್ತುವಾಚಕವನ್ನು ಸೂಚಿಸುವ ಪದ. ಇದರಲ್ಲಿ 3 ವಿಧಗಳಿವೆ
1. ರೂಢನಾಮ 2. ಅಂಕಿತನಾಮ 3. ಅನ್ವರ್ಥನಾಮ
1. **ರೂಢನಾಮ:–** ರೂಢಿಯಿಂದ ಬಂದಿರುವ ಪದಗಳು
ಉದಾ; ನದಿ, ಪರ್ವತ, ಹುಡುಗ, – – – – –
2. **ಅಂಕಿತನಾಮ :–** ವ್ಯಕ್ತಿ ಸ್ಥಳ, ಪ್ರಾಣಿಗಳನ್ನು ಗುರುತಿಸಲು ಇಟ್ಟು ಕೊಂಡಿರುವ ಪದಗಳು ಅಂದರೆ ವಸ್ತುವಿನ ಬೇರೆ ಬೇರೆ ಹೆಸರನ್ನು ಸೂಚಿಸುವುದು / ವ್ಯವಹಾರದ ಉಪಯೋಗಕ್ಕೆ ಇಟ್ಟುಕೊಂಡ ಹೆಸರು
ಉದಾ : ರಾಮ, ಕೃಷ್ಣ, ಅಮೃತ – – – – –
3. **ಅನ್ವರ್ಥನಾಮ :–** ಒಂದು ವಸ್ತುವಿನ, ವ್ಯಕ್ತಿಯ ಸ್ವಭಾವ ನಡವಳಿಕೆ, ಗುಣಲಕ್ಷಣಗಳನ್ನು ಗುರುತಿಸಲು ಬಳಸುವ ಪದ
ಉದಾ ಕುಂಟ, ಕುರುಡ, ಎಳವ, ವಿದ್ಯಾರ್ಥಿ, ಶಿಕ್ಷಕ, ಮುಖ್ಯಮಂತ್ರಿ, ನ್ಯಾಯಾಧೀಶ, – – – – –

**4.ಗುಣವಾಚಕ :–** ಒಂದು ವಸ್ತುವಿನ ಗುಣವನ್ನು ತಿಳಿಸುವ ಪದ
ಉದಾ : ಒಳ್ಳೆಯ ಹುಡುಗ, ಕರಿನಾಯಿ, ಬಿಳಿಕುದರೆ, ಕಳ್ಳಬೆಕ್ಕು – – – – –

**5.ಪರಿಮಾಣವಾಚಕ :–** ವಸ್ತುವಿನ ಅಳತೆಯನ್ನು ಸೂಚಿಸುವ ಪದ ಉದಾ : ಅಷ್ಟು, ಇಷ್ಟು, ಹೆಚ್ಚು, ಕಡಿಮೆ, ಉದ್ದ, ದಪ್ಪ

**6.ದಿಗ್ವಾಚಕ :–** ದಿಕ್ಕುಗಳನ್ನು ಸೂಚಿಸುವ ಪದಗಳು ಉದಾ : ಪೂರ್ವ, ಪಶ್ಚಿಮ, ಮೂಡಲ ತೆಂಕಣ – – – – –

**7.ಪ್ರಕಾರವಾಚಕ :–** ವಸ್ತುವಿನ ಸ್ಥಿತಿ, ರೀತಿಗಳನ್ನು ತಿಳಿಸುವ ಪದಗಳು ಉದಾ : ಅಂತಹ, ಇಂತಹ, ಎಂತಹ – – – –

**8.ಸಂಖ್ಯಾವಾಚಕ :–** ಸಂಖ್ಯೆಗಳನ್ನು ಸೂಚಿಸುವ ಪದಗಳು   ಉದಾ ; ಒಂದು, ಎರಡು, ಷಟ್ಪದಿ, ನಾಲ್ಕು – – – – –

**9.ಸಂಖ್ಯೇಯವಾಚಕ :–** ಲೆಕ್ಕದ ಸಂಖ್ಯೆಯಿಂದ ಕೂಡಿದ ವಸ್ತುಗಳು  ಉದಾ ; ಒಂದನೆಯ, ಎರಡನೆಯ, ಐದನೆಯ,

**ಸರ್ವ ನಾಮಪದಗಳು :–** ನಾಮಪದಗಳಿಗೆ ಬದಲಾಗಿ ಹೇಳುವ ಪದಗಳು  ಉದಾ : ಅವನು, ಅವಳು ಅದು –
ಸರ್ವನಾಮಪದಗಳಲ್ಲಿ 4 ವಿಧಗಳಿವೆ

1. **ಪುರುಷ ವಾಚಕ ಸರ್ವನಾಮ :–**

| | **ಏಕವಚನ** | **ಬಹುವಚನ** |
|---|---|---|
| ಪ್ರಥಮ ಪುರುಷ | ಅವನು, ಅವಳು, ಅದು | ಅವರು, ಅವು |
| ಮಧ್ಯಮ ಪುರುಷ | ನೀನು | ನೀವು |
| ಉತ್ತಮ ಪುರುಷ | ನಾನು | ನಾವು |

2. **ಪ್ರಶ್ನಾರ್ಥಕ ಸರ್ವನಾಮ :–**
   ಪ್ರಶ್ನೆಗಳನ್ನು ಕೇಳುವುದರಿಂದ ಪ್ರಶ್ನಾರ್ಥಕ ಸರ್ವನಾಮ ಎನಿಸುವುದು
   ಉದಾ : ಯಾರು ಅವಳು?   ಯಾವ ಊರು ನಿನ್ನದು ?
3. **ಆತ್ಮಾರ್ಥಕ ಸರ್ವನಾಮ :–**
   ತಾವು– ತಾನು ಎಂಬ ರೂಪಗಳು ಆತ್ಮಾರ್ಥಕ ಸರ್ವನಾಮ ಎನಿಸುವುವು
   ಉದಾ :– ತಾನು, ತಾವು  ಅವನು ತನ್ನ ಪಾಡಿಗೆ ತಾನು ಹೋದನು

**ಭಾವನಾಮಗಳು :–** ವಸ್ತು ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದಗಳು

| | | | |
|---|---|---|---|
| ಬಿಳಿಯದರ ಭಾವ | – ಬಿಳಿಪು | ಹಿರಿಯದರ ಭಾವ | – ಹಿರಿದು |
| ಕರಿಯದರ ಭಾವ | – ಕಪ್ಪು | ನೋಡುವುದರ ಭಾವ | – ನೋಟ |
| ಮಾಡುವುದರ ಭಾವ | – ಮಾಟ | ಉಣ್ಣುವುದರ ಭಾವ | – ಊಟ |
| ಕೂಡುವುದರ ಭಾವ | – ಕೂಟ | | |

## ಕ್ರಿಯಾಪದ

ಕ್ರಿಯೆಯನ್ನು ತಿಳಿಸುವ ಪದಗಳೇ ಕ್ರಿಯಾಪದಗಳು ಮಾಡುತ್ತಾನೆ, ನೋಡುತ್ತಾನೆ, ಹುಟ್ಟಿದನು, ಬರುವುದು––––

**ಕ್ರಿಯಾಧಾತು :–** ಕ್ರಿಯಾಪದದ ಮೂಲರೂಪವೇ ಕ್ರಿಯಾಧಾತು
ಉದಾ :   ಮಾಡುತ್ತಾನೆ  – ಮಾಡು  ಬರುವಳು – ಬರು  ನೋಡುತ್ತಾನೆ – ನೋಡು

**ಸಕರ್ಮಕ :–**
ಅರ್ಥ ಪೂರ್ತಿಯಾಗಿ ಕರ್ಮಪದವನ್ನು ಅಪೇಕ್ಷಿಸುವ ಕ್ರಿಯಾಪದಕ್ಕೆ ಸಕರ್ಮಕ ಎನ್ನುವರು
ಉದಾ :   ಹುಡುಗಿ ಪಾತ್ರೆಯನ್ನು ತೊಳೆಯುತ್ತಾಳೆ
ಹಸು ಹಾಲನ್ನು ಕೊಡುತ್ತದೆ

**ಅಕರ್ಮಕ :–**
ಕರ್ಮ ಪದವಿಲ್ಲದೆಯೇ ಪೂರ್ಣವಾದ ಅರ್ಥವನ್ನು ಕೊಡುವ ಕ್ರಿಯಾಪದಕ್ಕೆ ಅಕರ್ಮಕ  ಕ್ರಿಯಾಪದ ಎನ್ನುವರು
ಉದಾ :   ರಾಮನು ಓಡುತ್ತಾನೆ
ಮಗು ಹುಟ್ಟಿತು.

**ಕ್ರಿಯಾಪದದ ರೂಪಗಳು :–** ಇದರಲ್ಲಿ 3 ರೀತಿಯಿದೆ.

1. ವಿಧ್ಯರ್ಥಕ ರೂಪ   2) ಸಂಭವನಾರ್ಥಕ ರೂಪ   3) ನಿಷೇದಾರ್ಥಕ ರೂಪ

1) **ವಿಧ್ಯರ್ಥಕ ರೂಪ :–** ಆಜ್ಞೆ, ಆಶೀರ್ವಾದ, ಹಾರೈಕೆ, ಮುಂತಾದ ಸಂದರ್ಭಗಳಲ್ಲಿ ಬಳಕೆಯಾಗುವ ಪದಗಳನ್ನು ವಿಧ್ಯರ್ಥಕ ರೂಪ ಎನ್ನುವರು.
ಉದಾ : ಬರೆಯಲಿ, ನೋಡಲಿ, ಮಾಡಲಿ, ಶುಭವಾಗಲಿ ––––––––––

2) **ಸಂಭವನಾರ್ಥಕ ರೂಪ :–** ಕ್ರಿಯೆಯು ನಡೆಯುವಲ್ಲಿ ಸಂಶಯವನ್ನು ಸೂಚಿಸುವ ಕ್ರಿಯಾಪದಗಳಿಗೆ ಸಂಭವನಾರ್ಥಕ ಕ್ರಿಯಾಪದ ಎನ್ನುವರು.
ಉದಾ : ಬರೆದಾನು, ಬಂದಾನು ––––––––––

3) **ನಿಷೇಧಾರ್ಥಕ ರೂಪ :–** ಕ್ರಿಯೆಯು ನಡೆದಿಲ್ಲ ಎಂದು ಸೂಚಿಸುವ  ಕ್ರಿಯಾಪದಗಳಿಗೆ ನಿಷೇಧಾರ್ಥಕ ಕ್ರಿಯಾಪದ ಎನ್ನುವರು
ಉದಾ : ಬರನು, ನೋಡನು, ತಿನ್ನನು –––––––––

## ವಿಭಕ್ತಿ ಪ್ರತ್ಯಯಗಳು

ವಾಕ್ಯದಲ್ಲಿ ಪ್ರಯೋಗವಾಗುವ ನಾಮಪದ ಹಾಗೂ ವಾಕ್ಯಾರ್ಥಕ್ಕೆ ಸಂಬಂಧ ಕಲ್ಪಿಸಿ ಕೊಡುವ ಪ್ರತ್ಯಯ ರೂಪಗಳೇ ವಿಭಕ್ತಿ ಪ್ರತ್ಯಯಗಳು

## ವಿಭಕ್ತಿ ಕಾರಕಾರ್ಥಗಳು – ಪ್ರತ್ಯಯ – ನಾಮಪದ ಕೋಷ್ಟಕ

| ವಿಭಕ್ತಿಗಳು | ಕಾರಕಾರ್ಥಗಳು | ವಿಭಕ್ತಿ ಪ್ರತ್ಯಯಗಳು | | ಉದಾ | |
|---|---|---|---|---|---|
| | | ಹೊಸಗನ್ನಡ | ಹಳೆಗನ್ನಡ | ಹೊಸಗನ್ನಡ | ಹಳೆಗನ್ನಡ |
| ಪ್ರಥಮ | ಕತ್ರಾರ್ಥ | ಉ | ಮ್ | ರಾಮನು | ರಾಮಮಂ |
| ದ್ವಿತೀಯ | ಕರ್ಮಾರ್ಥ | ಅನ್ನು | ಅಮ್ | ರಾಮನನ್ನು | ರಾಮನಂ |
| ತೃತೀಯ | ಕರಣಾರ್ಥ | ಇಂದ | ಇಂ,ಇಂದಂ | ರಾಮನಿಂದ | ರಾಮನಿಂದಂ |
| ಚತುರ್ಥಿ | ಸಂಪ್ರದಾನ | ಗೆ,ಕೆ | ಗೆ,ಕೆ | ರಾಮನಿಗೆ | ರಾಮನಿಗೆ |
| ಪಂಚಮಿ | ಅಪದಾನ | ದೆಸೆಯಿಂದ | ಅತ್ತಣಿಂ | ರಾಮನದೆಸೆಯಿಂದ | ರಾಮನತ್ತಣಿಂ |
| ಷಷ್ಠಿ | ಸಂಬಂಧ | ಅ | ಅ | ರಾಮನ | ರಾಮನ |
| ಸಪ್ತಮಿ | ಅಧಿಕರಣ | ಅಲ್ಲಿ | ಒಳ್ | ರಾಮನಲ್ಲಿ | ರಾಮನೊಳ್ |

### ಅನ್ಯ ದೇಶೀಯ ಪದಗಳು :

**ಗ್ರೀಕ್ ಮತ್ತು ರೋಮನ್ ಭಾಷೆ ಪದಗಳು** : ದಮ್ಮಡಿ, ದಮಡಿ, ದಮ್ಮು, ದೀನಾರ, ಗದ್ಯಾಣ
**ಅರಬ್ಬೀ ಪದಗಳು** : ಅಮಾನತು, ಅಸಲು, ಇನಾಮು, ಕಾಯ್ದೆ, ಗಲೀಜು, ತಕರಾರು, ತರಬೇತು, ನಕಲಿ
**ಪರ್ಷಿಯನ್ ಪದಗಳು** : ದಿವಾನ, ಅಜಮಾಯಿಸಿ
**ಪೋರ್ಚುಗೀಸ್ ಪದಗಳು** : ಮೇಜು, ತಂಬಾಕು, ಅನಾನಸು, ಸಾಬೂನು, ಆಸ್ಪತ್ರೆ, ಚೊಂಬು, ಚಾ, ಇಸ್ತ್ರಿ, ರಸೀದಿ
**ಸಂಸ್ಕೃತ** : ಪ್ರೌಢ, ಶಿಕ್ಷಣ
**ಉರ್ದು ಪದಗಳು** : ಕಿಮ್ಮತ್ತು, ತಾರೀಖು, ತಾಲ್ಲೂಕು, ಅಹವಾಲು, ಇಲಾಖೆ, ದರ್ಜೆ, ಬಂದೂಕು, ರುಜು, ಶುರು, ಶಾಮೀಲು
**ಹಿಂದುಸ್ಥಾನಿ ಪದಗಳು** : ಅರ್ಜಿ, ಕಛೇರಿ, ಕಾರ್ಖಾನೆ, ಸಲಾಮು, ದರ್ಬಾರು, ಕುರ್ಚಿ, ಕಾಗದ, ಹುಕುಂ
**ಇಂಗ್ಲೀಷ್ ಪದಗಳು** : ಬಸ್ಸು, ಕಾರು, ಕಾಲೇಜು, ಲೈಟು, ಪೆನ್ನು, ಸ್ಯಾನಿಟರಿ, ಡಿಪ್ಲೋಮೋ, ಸೋಪು

# ತತ್ಸಮ – ತದ್ಭವ

ಹಲವಾರು ಸಂಸ್ಕೃತ ಪದಗಳು ಕನ್ನಡಕ್ಕೆ ಬರುವಾಗ ಯಾವ ರೀತಿಯ ಬದಲಾವಣೆಗೂ ಒಳಗಾಗದೇ ಯಥಾ ಸ್ಥಿತಿಯಲ್ಲಿ ಬಂದು ಸೇರಿಕೊಂಡರೆ ಅವುಗಳು ತತ್ಸಮ ಎನ್ನುವರು.

ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಬರುವಾಗ ಅಲ್ಪಸ್ವಲ್ಪ ಬದಲಾವಣೆ ಹೊಂದಿ ಆ ಪದದಿಂದ ಬರುವ ಪದವನ್ನು ತದ್ಭವ ಎನ್ನುವರು.

ಕನ್ನಡದಲ್ಲಿ ಬಳಕೆಯಾಗುವ ಸಂಸ್ಕೃತದ ಮೂಲರೂಪ ಪದಗಳನ್ನು ತತ್ಸಮಗಳೆಂದೂ ಅದರಿಂದ ಹುಟ್ಟಿದ ರೂಪವನ್ನು ತದ್ಭವಗಳೆಂದು ಕರೆಯುವರು

## ಪಠ್ಯ ಪುಸ್ತಕದಲ್ಲಿರುವ ತತ್ಸಮ-ತದ್ಭವ ಪದಗಳು

| ತತ್ಸಮ | – | ತದ್ಭವ | | | |
|---|---|---|---|---|---|
| ವೀರ | – | ಬೀರ | ಚಂದ್ರ | – | ಚಂದಿರಾ |
| ಯಜ್ಞ | – | ಜನ್ನ | ಸೊಧೆ | – | ಸುಧೆ |
| ವಂಧ್ಯಾ | – | ಬಂಜೆ | ಅಮರ್ದು | – | ಅಮೃತ |
| ವರ್ಷ | – | ವರುಷ | ಕಾರ್ಯ | – | ಕಜ್ಜ |
| ಶ್ರೀ | – | ಸಿರಿ | ಪಕ್ಷಿ | – | ಹಕ್ಕಿ |
| ರಾಜ | – | ರಾಯ | ಬ್ರಹ್ಮ | – | ಬೊಮ್ಮ |
| ಭಕ್ತ | – | ಭಕುತ | ದೀವಿಗೆ | – | ದೀಪಿಕಾ |
| ವಿಜ್ಞಾಪನೆ | – | ಭಿನ್ನಹ | ಪುಣ್ಯ | – | ಹುನ್ಯ |
| ದೆಸೆ | – | ದಿಶಾ | ಕಣಿ | – | ಗಣಿ |

# ಸಂಧಿಗಳು

ಎರಡು ಪದಗಳು ಕಾಲವಿಳಂಬವಿಲ್ಲದೇ ಅರ್ಥಕೆಡದಂತೆ ಸೇರಿ ಒಂದು ಪದವಾಗುವುದಕ್ಕೆ ಸಂಧಿ ಎನ್ನುವರು

ಸಂಧಿಗಳಲ್ಲಿ 2 ವಿಧಗಳಿವೆ : 1) ಕನ್ನಡಸಂಧಿಗಳು
2) ಸಂಸ್ಕೃತಸಂಧಿಗಳು

## ಪಠ್ಯ ಪುಸ್ತಕದಲ್ಲಿರುವ ಸಂಧಿ ಪದಗಳು

**ಲೋಪಸಂಧಿ :** ಊರೂರು, ಬಲ್ಲೆನೆಂದು, ಮಾತಂತಿ, ಸಂಪನ್ನರಾದ, ಕಾಣಲಾಗದು, ತಪ್ಪಲೀಯಿದೆ, ತಕ್ಕನಿತು. ಪೊಳ್ದಡೆ, ಕಾದಾಟದಾಟ, ಆದನೆಂಬ, ನೆತ್ತರೊಂದು

**ಆಗಮ ಸಂಧಿ :** ಕೈಯನ್ನು, ಮನೆಯಿಂದ ಶಾಲೆಯಲ್ಲಿ ಮರವನ್ನು ಮಗುವಿಗೆ, ಬೇಧವಿಲ್ಲ, ವೃದ್ದಿಯಾಗಿ ಶವವಾದವು.

**ಆದೇಶ ಸಂಧಿ** : ಮಳೆಗಾಲ ಮೈದೋರು, ಬೆಂಬತ್ತು, ಕಡುವೆಳ್ಳು, ಮೇಲ್ವಾವು, ಕೈಪಿಡಿದು, ಪೊಗಲ್ವೇಳ್ಕುಂ

**ಸವರ್ಣದೀರ್ಘಸಂಧಿ :–** ಮಹಾತ್ಮ, ಗಿರೀಶ, ಸುರಾಸುರ, ವಧೂಪೇತ, ಸಕಳಾಚಾರ್ಯ, ಜನಾಲಯ, ಚಂದಾರ್ಕ

**ವೃದ್ದಿಸಂಧಿ :** ಏಕೈಕ, ಜನ್ಮೈಕ್ಯ, ವನೌಷಧ, ಅಷ್ಟೈಶ್ವರ್ಯ

**ಗುಣಸಂಧಿ :** ದೇವೇಂದ್ರ ಜ್ಞಾನೇಶ್ವರ, ಸುರ್ಯೋದಯ, ಮಹರ್ಷಿ, ಮಹೇಶ, ಮಂಡಳೇಶ್ವರ

**ಯಣ್ ಸಂಧಿ ;** ಅತ್ಯಾವಸರ, ಜಾತ್ಯತೀತ, ಕೋಟ್ಯಧೀಶ್ವರ, ಕೋಟ್ಯಾನುಕೋಟಿ.

**ಜಸ್ತ್ವ ಸಂಧಿ :** ವಾಗ್ದೇವಿ, ಅಜಂತ, ಷಡಾನನ, ದಿಗಂತ, ಅಬ್ಧ

**ಶ್ಚುತ್ವಸಂದಿ :** ಪಯಶ್ವಯನ, ಶರಶ್ಚಂದ್ರ, ಜಗಜ್ಯೋತಿ, ಬೃಹಚ್ಛತ್ರ

**ಅನುನಾಸಿಕ ಸಂಧಿ :** ಷಣ್ಮುಖ, ಸನ್ಮಾನ, ವಾಙ್ಮಯ, ಉನ್ಮಾದ, ತನ್ಮಯ, ಶ್ರೀಮನ್ಮಹಾ

# ಅವ್ಯಯಗಳು – ವಿಧಗಳು

ನಾಮಪದ, ಕ್ರಿಯಾಪದಗಳಂತೆ ಲಿಂಗ, ವಚನ ವಿಭಕ್ತಿಗಳಿಂದ ರೂಪಭೇದವನ್ನು ಹೊಂದದೇ ಏಕರೂಪವಾಗಿರುವ ಪದಗಳೇ ಅವ್ಯಯಗಳು

## ಅವ್ಯಯಗಳ ವಿಧಗಳು :–

1. **ಸಾಮಾನ್ಯ ಅವ್ಯಯ :–** ಕ್ರಿಯೆ ನಡೆದ ರೀತಿಯನ್ನು ಹೇಳುವವಂತಹುದ್ದು ಚೆನ್ನಾಗಿ, ತಟ್ಟನೆ, ನೆಟ್ಟನೆ, ಸುಮ್ಮನೆ, ಇತ್ಯಾದಿ.ಉದಾ : ಅವಳು ಚೆನ್ನಾಗಿ ಹಾಡಿದಳು
   ಅದು ತಟ್ಟನೆ ಬಿತ್ತು.

2. **ಅನುಕರಣಾವ್ಯಯ :–** ಅರ್ಥವಿಲ್ಲದ ಧ್ವನಿ ವಿಶೇಷಣಗಳನ್ನು ಕೇಳಿದಂತೆಯೇ ಮತ್ತೆ ಮತ್ತೆ ಅನುಕರಣೆ ಮಾಡಿ ಹೇಳುವ ಪದಗಳು ಪಟಪಟನೆ, ಧಗಧಗ ಇತ್ಯಾದಿ.

ಉದಾ : ನೀರು ದಬದಬ ಬಿತ್ತು

ಮಳೆ ಪಟಪಟ ಸುರಿಯಿತು

3. **ಭಾವಸೂಚಕವ್ಯಯ :–**

ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸುವಾಗ ಕೆಲವು ಅರ್ಥವಿಲ್ಲದ ಪದಗಳನ್ನು ಬಳಸುತ್ತೇವೆ, ಅವು ಮನಸ್ಸಿನ ಭಾವ ಸೂಚಕಗಳು – ಅಬ್ಬಾ, ಛೆ, ಥೂ, ಇತ್ಯಾದಿ

ಉದಾ : ಅಬ್ಬಾ ಎಷ್ಟು ಸೊಗಸಾಗಿದೆ

4. **ಸಂಬಂಧಕಾವ್ಯಯ :–** ಎರಡು ಪದಗಳ ಅಥವಾ ಅದಕ್ಕಿಂತ ಹೆಚ್ಚು ಪದಗಳನ್ನಾಗಲೀ, ವಾಕ್ಯಗಳನ್ನಾಲೀ ಜೋಡಿಸುವ ಪದಗಳಿವು ಉ ಉಂ ಮತ್ತು ಅಥವಾ ಆದ್ದರಿಂದ ಅಲ್ಲದೇ ಇತ್ಯಾದಿ.

ಉದಾ : ರಾಮನೂ ಲಕ್ಷ್ಮಣನೂ ಬಂದರು.

ಒಂದು ಮೂಟೆ ಅಕ್ಕಿ ಕೊಡು ಅಥವಾ ಸಾವಿರ ರೂಪಾಯಿ ಕೊಡು

ಅವನು ಬರಲಿಲ್ಲ ಆದ್ದರಿಂದ ನಾನೂ ಬರಲಿಲ್ಲ.

ಮದುವೆಗೆ ನೀನು ಬರಬೇಕು ಅಲ್ಲಿದೆ ಸಾವಿರ ಊಟದೇಲೆ ತರಬೇಕು.

5. **ಅವಧಾರಣಾರ್ಥಕಾವ್ಯಯ :–**

ನಿಶ್ಚಯಾರ್ಥದಲ್ಲಿ ಬರುವ ಅವ್ಯಯವಿದು ಹಲವು ವಸ್ತುಗಳಲ್ಲಿ ಒಂದನ್ನು ನಿಶ್ಚಯಿಸುವುದೇ ಅವಧಾರಣೆ.

ಉದಾ : ಅದೇ ನನ್ನ ಪುಸ್ತಕ

ನಾನೇ ಪುಸ್ತಕ ಕೊಟ್ಟೆ.

ಲೇಖನ ಚಿಹ್ನೆಗಳು

## ಗ್ರಾಮ್ಯ ಗ್ರಾಂಥಿಕ ರೂಪ

| | | | | | |
|---|---|---|---|---|---|
| ಬ್ಯಾಸಗಿ | – | ಬೇಸಿಗೆ | ತಸ್ಹೊತ್ತು | – | ತಾಸು ಹೊತ್ತು |
| ಬ್ಯಾಸರ | – | ಬೇಸರ | ಏಸೊಂದು | – | ಎಷ್ಟೊಂದು |
| ಹೊಟ್ಟೆಗಿಲ್ದೆ | – | ಹೊಟ್ಟೆಗಿಲ್ಲದೆ | ಮ್ಯಾಲೊಂದು | – | ಮೇಲೊಂದು |
| ಕುಂತವಳ | – | ಕುಳಿತುಕೊಂಡವಳು | ಇವಳ್ನ | – | ಇವಳನ |

## ಲೇಖನ ಚಿಹ್ನೆಗಳು

**ಪೂರ್ಣವಿರಾಮ :–** ವಾಕ್ಯದ ಪೂಣಾರ್ಥ ಕ್ರಿಯೆಯನ್ನು ಸೂಚಿಸುವುದು.

ಉದಾ : ಹಕ್ಕಿಯು ಹಣ್ಣನ್ನು ತಿನ್ನುತ್ತಿದೆ.

**ಅರ್ಧವಿರಾಮ :–** ಪ್ರಧಾನ ವಾಕ್ಯದಲ್ಲಿಒಯ ಅನೇಕ ಉಪವಾಕ್ಯಗಳ ಅಂತ್ಯದಲ್ಲಿ ಮಾತ್ರ ಬರುವುದು.

ಉದಾ : ಮೇಷ್ಟೇ ಅಳಬೇಡಿ ಸಮಾಧಾನ ಮಾಡಿಕೊಳ್ಳಿ

**ಅಲ್ಪವಿರಾಮ :–** ಸಂಬೋಧನೆಯ ಮುಂದೆ ಅಲ್ಲದೇ ಕರ್ತೃ ಕರ್ಮ ಕ್ರಿಯಾ ಪದಗಳಿಗೆ ವಿಶೇಷಣಗಳು ಬಂದಾಗ ಕೊನೆಯ ಪದವನ್ನು ಬಿಟ್ಟು ಉಳಿದ ಪದಗಳ ಮುಂದೆ ಬಳಸುವ ಚಿಹ್ನೆ.

ಉದಾ ; ಹೌದು ಮೇಷ್ಟೇ, ತಪ್ಪುಮಾಡುತ್ತೀರಿ, ಜುಲ್ಮಾನೆ ಬೀಳುತ್ತದೆ

**ಪ್ರಶ್ನಾರ್ಥಕ :–** ಪ್ರಶ್ನೆಗಳನ್ನು ಕೇಳುವ ಸಂದರ್ಭದಲ್ಲಿ ಬಳಸುವ ಚಿಹ್ನೆ

ಉದಾ : ಯಾವ ವೆಂಕಟ ಸುಬ್ಬಯ್ಯ ?

**ಭಾವಸೂಚಕ :–** ಹರ್ಷ, ಅಚ್ಚರಿ, ಸಂತಸ, ದುಃಖ, ಕೋಪ, ತಿರಸ್ಕಾರ ಇತ್ಯಾದಿ ಭಾವನೆಗಳನ್ನು ವ್ಯಕ್ತಪಡಿಸುವಾಗ ಬಳಸುವ ಚಿಹ್ನೆ. ಉದಾ : ಅಹಾ ಎಷ್ಟು ಸುಂದರವಾಗಿದೆ.

**ವಿವರಣಾತ್ಮಕ :–** ಅಭಿಪ್ರಾಯದ ವಿವರಣೆ ಇಂತಿದೆ ಎನ್ನುವುದನ್ನು ತಿಳಿಸುವ ಸಂದರ್ಭದಲ್ಲಿ ಬಳಸುವುದು

ಉದಾ : ಭಾಷಾವಿಜ್ಞಾನ ಭಾಷೆಯ ವೈಜ್ಞಾನಿಕ ಅಧ್ಯಯನ.

**ಉದ್ಧರಣ :–** ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ಬರೆಯುವಾಗ ಬಳಸುವ ಚಿಹ್ನೆ.

ಉದಾ : ಒಳ್ಳೆಯದು ಮೇಷ್ಟ್ರೆ ನೀವು ನಿಲ್ಲಿರಿ "ಎಂದು ಹೇಳಿ. ರಂಗಣ್ಣ ಬೈಸಿಕಲ್ ಹತ್ತಿ ಹೊರಟರು.

**ವಾಕ್ಯವೇಷ್ಟನ :–** ಬರವಣಿಗೆಯಲ್ಲಿ ಪಾರಿಭಾಷಕ / ಪ್ರಧಾನ / ವಿಶಿಷ್ಟ ಪದಗಳನ್ನು ಬಳಸಿದಾಗ ಉಪಯೋಗಿಸುವ ಚಿಹ್ನೆ.

ಉದಾ : ಕನ್ನಡದಲ್ಲಿ ಅನೇಕ ' ಇಂಗ್ಲೀಷ್' ಪದಗಳು ಬಳಕೆಯಲ್ಲಿದೆ.

() **ಆವರಣ :–** ಹೆಚ್ಚಿನ ವಿವರಣೆಗಳನ್ನು ಅರ್ಥಗಳನ್ನು ನೀಡುವ ಸಂದರ್ಭದಲ್ಲಿ ಈ ಚಿಹ್ನೆಯನ್ನು ಬಳಸಲಾಗುತ್ತದೆ.

ಉದಾ: ಒಂದು ದಿನ ನರಿಯು ಕೊಕ್ಕರೆ (ನೀರುಹಕ್ಕಿ)ಯನ್ನು ಊಟಕ್ಕೆ ಕರೆಯಿತು

## ವಾಕ್ಯ ಪ್ರಬೇಧಗಳು

ವಾಕ್ಯಗಳಲ್ಲಿ 3 ವಿಧಗಳಿವೆ : 1. ಸಾಮಾನ್ಯವಾಕ್ಯ
2. ಸಂಯೋಜಿತವಾಕ್ಯ
3. ಮಿಶ್ರವಾಕ್ಯ

1. **ಸಾಮಾನ್ಯವಾಕ್ಯ :–** ಒಂದು ಪೂರ್ಣ ಕ್ರಿಯಾಪದದೊಡನೆ ಸ್ವತಂತ್ರ ಖಚಿತ ಅರ್ಥ ಕೊಡುವುದು.
   ಉದಾ : ಹಕ್ಕಿಯು ಹಣ್ಣನ್ನು ತಿನ್ನುತ್ತದೆ.
   ಮಕ್ಕಳು ಶಾಲೆಗೆ ಹೋದರು.
2. **ಸಂಯೋಜಿತವಾಕ್ಯ :–** ಎರಡು / ಅನೇಕ ಸ್ವತಂತ್ರ ವಾಕ್ಯಗಳು ಒಟ್ಟಾಗಿ ಸೇರಿ ಪೂರ್ಣ ಅರ್ಥವನ್ನು ನೀಡುತ್ತದೆ
   ಉದಾ : ಮಕ್ಕಳು ಹಾಲನ್ನು ಕುಡಿಯುತ್ತಾರೆ ಆದರೆ ಅವರಿಗೆ ಕೊಡಲು ಸಾಕಷ್ಟು ಹಾಲಿಲ್ಲ
   ಮಕ್ಕಳು ಶಾಲೆಗೆ ಹೋದರು ಆದರೆ ಅವರು ಅಲ್ಲಿ ಓದಲಿಲ್ಲ.
3. **ಮಿಶ್ರವಾಕ್ಯ :–** ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿರುತ್ತದೆ.
   ಉದಾ : ತಮ್ಮ ಗ್ರಾಮಕ್ಕೆ ಹೆಚ್ಚು ಬಸ್ಸುಗಳು ಬರುತ್ತದೆ. ಎಂದು ತಿಳಿದು ಗ್ರಾಮಸ್ಥರು ಸಂತಸ ಪಟ್ಟರು
   ಮಕ್ಕಳು ಶಾಲೆಗೆ ಹೋದರೆಂಬ ಸುದ್ದಿಕೇಳಿ ಜನರು ಅಲ್ಲಿಗೆ ಓಡಿ ಬಂದರು.

**ದ್ವಿರುಕ್ತಿ :–** ಯಾವುದಾದರೊಂದು ವಿಶೇಷಾರ್ಥವನ್ನು ಹೇಳುವುದಕ್ಕಾಗಿ ಎರಡೆರಡು ಬಾರಿ ಪ್ರಯೋಗ ಮಾಡಲ್ಪಡುವ ಪದವೊಂದಕ್ಕೆ ದ್ವಿರುಕ್ತಿ ಎನ್ನುವರು.

ಉದಾ :– ಬೇಗ ಬೇಗ, ಮೆಲ್ಲಮೆಲ್ಲಗೆ, ಅಹುದುಹುದು.
ದೂರದೂರ, ಎಳೆಎಳೆ -----------

**ಜೋಡುನುಡಿ :–** ನಾವು ದಿನನಿತ್ಯ ಒಂದಕ್ಕೊಂದು ಪೂರಕವಾದ, ವಿರುದ್ದವಾದ ಅಥವಾ ಸಾಮಿಪ್ಯ ಅರ್ಥ ಕೊಡುವ ಪದಗಳನ್ನು ಜೋಡುನುಡಿ ಎನ್ನುವರು.

ಉದಾ : ಬೆಟ್ಟ ಗುಡ್ಡ, ನಾಯಿ ನರಿ ಎದ್ದು ಬಿದ್ದು ಕಷ್ಟ ಸುಖ ಉಡುಗೆತೊಡುಗೆ ---------

## ಪಠ್ಯ ಪುಸ್ತಕದಲ್ಲಿರುವ ಸಮಾಸ ಪದಗಳು

**ತತ್ಪುರುಷ** : ಸ್ವಾಮಿ ದ್ರೋಹ, ಪರಧನ, ಧನಹರಣ, ಪೂದೋಟ, ಬೆಟ್ಟದಾವರೆ, ತಲೆನೋವು
**ಕರ್ಮಧಾರೆಯ** : ಅತಿಕುಟಿಲ, ನಲ್ಲುದುರೆ, ಇಮ್ಮಾವು, ಮೆಲ್ಬಾತು, ಹೊಸಗನ್ನಡ
**ಕ್ರಿಯಾ** : ಕೈಕೊಳ್ಳುವದು, ಸಾಕ್ಷಿ ಮಾಡಿ, ಬಲವಂದು, ಮೋಸ ಮಾಡು, ಸೊಲ್ಗೇಳಿ, ಬಿಲ್ಗೊಂಡು, ಬಿಲ್ದಿರುವನೇರಿಸಿ, ಹೊಗೆದೋರು.
**ದ್ವಂದ್ವ** : ಹನುಮ ಭೀಮರಾಯ, ಗಿರಿವನದುರ್ಗಗಳು, ಕರಿತುರಗರಥ
**ಅಂಶಿ ಸಮಾಸ** : ಮುಂಗೈ, ಮುಂದಲೆ, ಕಡೆಗಣ್ಣು, ನಡುರಾತ್ರಿ
**ದ್ವಿಗು** : ಮುಗಾವುದ, ಮುಕ್ಕಣ್ಣು, ಸಪ್ತಸ್ವರಗಳು
**ಬಹುವ್ರೀಹಿ** : ಇನತನುಜ, ದನುಜರಿಪು,
ಗಮಕಸಮಾಸ : ಈ ಬೆಕ್ಕು, ನೇಯ್ದು ವಸ್ತ್ರ, ಬೆಂದಬೇಳೆ

## ಕೃದಂತಗಳು

ಧಾತುಗಳಿಗೆ ಕೃತ್ ಪ್ರತ್ಯಯ ಸೇರಿ ಕೃದಂತ ಎನಿಸುತ್ತದೆ ಇವುಗಳಲ್ಲಿ 3 ವಿಧಗಳು

1) ಕೃದಂತ ನಾಮ 2) ಕೃದಂತ ಭಾವನಾಮ 3) ಕೃದಂತವ್ಯಯಗಳು

1. **ಕೃದಂತ ನಾಮ :–** ಧಾತುಗಳಿಗೆ ಕರ್ತೃ ಮೊದಲಾದ ಅರ್ಥದಲ್ಲಿ ಸಾಮಾನ್ಯವಾಗಿ ಅ ಎಂಬ ಕೃತ್ ಪ್ರತ್ಯಯ ಬರುವುದು ವರ್ತಮಾನಕಾಲದಲ್ಲಿ 'ಅದ' ಎಂಬ ಪ್ರತ್ಯಯ ಆಗಮವಾಗುತ್ತದೆ.

ಉದಾ :– **ವರ್ತಮಾನ ಕೃದಂತ :–** ಮಾಡು + ವ +ಅ = ಮಾಡುವ

ಬರೆ + ಉವ + ಅ = ಬರೆಯುವ

**ಭೂತ ಕೃದಂತ :–** ತಿನ್ನು + ದ + ಅ = ತಿಂದ

ಹೋಗು + ದ + ಅ = ಹೋದ

**ನಿಷೇದ ಕೃದಂತ :–** ಮಾಡು + ಅದ + ಅ = ಮಾಡದ

**ಕೃದಂತ ಭಾವನಾಮ :–** ಧಾತುಗಳ ಮೇಲೆ ಭಾವಾರ್ಥದಲ್ಲಿರುವುದು, ಐಕೆ, ಇಕೆ, ಇಗೆ, ಗೆ, ತ,ಟ, ವಣಿಗೆ, ಅವು, ವು ಪು, ಅವ ,ಎ, ಆಕೆ ಮುಂತಾದ ಭಾವಾರ್ಥ ಕೃತ್ ಪ್ರತ್ಯಯಗಳು ಸೇರಿ ಕೃದಂತ ಭಾವನಾಮಗಳಾಗುತ್ತವೆ.

ಉದಾ :–

| | | | | | |
|---|---|---|---|---|---|
| ವುದು | – | ನೋಡುವುದು | ಐಕೆ | – | ನೋಡುವಿಕೆ |
| ಇಗೆ | – | ಉಡುಗೆ, ತೊಡುಗೆ | ಗೆ | – | ನಂಬುಗೆ |
| ಅವು | – | ಬರವು, ಸೆಳವು | ವು | – | ನಾವು, ನೋವು |
| ತ | – | ಸೆಳೆತ, ನುರಿತ | ವಳಿ | – | ಸಾಗುವಳಿ, ತೀರುವಳಿ |
| ವು | – | ಕಾವು, ತೀರ್ಪು | ಅಲು | – | ಕೇಳಲು, ನೋಡಲು |
| ಎ | – | ನೆರೆ, ಹೊರೆ | ಆಕೆ | – | ಬೆರಕೆ, ಮೊಳಕೆ |
| ವಣಿಗೆ | – | ಬರವಣಿಗೆ, ಮೆರವಣಿಗೆ | ಟ | – | ನೋಟ, ಮಾಟ |

**ಕೃದಂತಾವ್ಯಯ:–**

ಧಾತು ಅವ್ಯಯ ಉತ, ಉತ್ತ, ಅದೆ, ದರೆ, ಅಲು, ಆಲಿಕ್ಕೆ, ಅ, ಇ, ದು ಇತ್ಯಾದಿ ಪ್ರತ್ಯಯಗಳು ಸೇರಿ ಕೃದಂತಾವ್ಯಯ ಎನಿಸುವುದು

| | | | | | |
|---|---|---|---|---|---|
| ಉತ | – | ಮಾಡುತ, ಓಡುತ | ದು | – | ತಿಂದು, ಸವಿದು |
| ಉತ್ತ | – | ಮಾಡುತ್ತ, ಸವಿಯುತ್ತ | ಅದೆ | – | ಮಾಡದೆ, ನೋಡದೆ |
| ದರೆ | – | ನೋಡಿದೆ, ಮಾಡಿದರೆ | ಅಲು | – | ಬರಲು, ನಡೆಯಲು |
| ಅಲಿಕೆ | – | ಮಾಡಲಿಕ್ಕೆ, ನೋಡಲಿಕ್ಕೆ | ಅ | – | ನೋಡ, ಮಾಡ |
| ಇ | – | ಮೋಡಿ, ಕೇಳಿ,ತಿನ್ನಿ | | | |

## ತದ್ಧಿತಾಂತ

ನಾಮಪದಗಳಿಗೆ ತದ್ದಿತ ಪ್ರತ್ಯಯಗಳು ಅಂತ್ಯದಲ್ಲಿ ಉಳ್ಳವು ತದ್ದಿತಾಂತ ಎನಿಸುತ್ತದೆ

ತದ್ದಿತಾಂತದಲ್ಲಿ 3 ಬಗೆಯಿದೆ

1. ತದ್ದತಾಂತ ನಾಮ
2. ತದ್ದಿತಾಂತ ಭಾವನಾಮ
3. ತದ್ದಿತಾಂತಾವ್ಯಯ

1. **ತದ್ಧಿತಾಂತ ನಾಮಪದ :–** ನಾಮಪದಗಳಿಗೆ ಸಾರ, ಕಾರ, ಇಗ, ವಂತ, ವಳ, ಅಡಿಗ, ಅಳಿ, ಗುಳಿ, ಅರ ಅನೆಯ ಎಂಬ ತದ್ದಿತಪ್ರತ್ಯಯಗಳು ಸೇರಿಸಿ ಒಂದುಪದವಾದರೆ ಅದು ತದ್ದಿತಾಂತ ನಾಮಪದ ಎನಿಸುತ್ತದೆ.

| | | | |
|---|---|---|---|
| ಗಾರ | – | ಮಾಲೆಯನ್ನು ಕಟ್ಟುವವ | ಮಾಲೆಗಾರ |
| ಕಾರ | – | ಓಲೆಯನ್ನು ತರುವವ | ಓಲೆಕಾರ |
| ಇಗ | – | ಲೆಕ್ಕವನ್ನು ಬಲ್ಲವನು | ಲೆಕ್ಕಿಗ |
| ವಂತ | – | ಹಣವನ್ನು ಉಳ್ಳವನು | ಹಣವಂತ |

| | | | |
|---|---|---|---|
| ವಾಳ | – | ಮಡಿಯನ್ನು ಮಾಡಿವವನು | ಮಡಿವಾಳ |
| ಆಡಿಗ | – | ಹೂವನ್ನು ಕಟ್ಟುವವನು | ಹೂವಾಡಿಗ |
| ಆಳಿ | – | ಮಾತನ್ನು ಹೆಚ್ಚು ಆಡುವವನು | ವಾಚಾಳಿ |
| ಗುಳಿ | – | ಲಂಚವನ್ನು ತೆಗೆದುಕೊಳ್ಳುವವ | ಲಂಚಗುಳಿ |
| ಆರ | – | ಕುಂಭವನ್ನು ಮಾಡುವವ | ಕುಂಬಾರ |
| ಆನೆಯ | – | ಹತ್ತು ಸಂಖ್ಯೆಯುಳ್ಳದ್ದು | ಹತ್ತನೆಯ |

2. **ತದ್ಧಿತಾಂತ ಭಾವನಾಮ :–** ನಾಮಪದಗಳಿಗೆ ಭಾವಾರ್ಥದಲ್ಲಿ ತನ, ಇದೆ, ಪು, ಮೆ ಇತ್ಯಾದಿ ರದ್ದಿನ ಪ್ರತ್ಯಯಗಳನ್ನು ಸೇರಿಸುವ ಪದಚರನೆಯೇ ತದ್ಧಿತಾಂತ ಭಾವನಾಮ

ತನ – ದೊಡ್ಡತನಭಾವ ದೊಡ್ಡತನ
ಇಕೆ – ಚೆಲುವಿನ ಭಾವ ಚೆಲುವಿಕೆ
ಉ – ಕುರುಡನ ಭಾವ ಕುರುಡು
ವು – ಬಿಳಿಯದರ ಭಾವ ಬಿಳಿಪು
ಮೆ – ಜಾಣತನದ ಭಾವ ಜಾಣ್ಮೆ

3. **ತದ್ಧಿತಾಂತ ಅವ್ಯಯ :–** ನಾಮಪದಗಳ ಮುಂದೆ ಅಂತೆ, ವೊಲ್, ವೊಲು, ವೋಲ್, ವೋಲು, ತನಕ, ವರಗೆ ಮಟ್ಟಿಗೆ, ಓಸ್ಕರ, ಇಂತ, ಆಗಿ, ಓಸುಗ, ತದ್ಧಿತ ಪ್ರತ್ಯಯಗಳು ಸೇರಿ ರಚಿತವಾಗುವ ಪದರಚನೆಯೇ ತದ್ಧಿತಾಂತವ್ಯಯ

| | | | | | | | |
|---|---|---|---|---|---|---|---|
| ರಾಮನ | – | ಅಂತೆ | – | ರಾಮನಂತೆ | ವೊಲ್ | – | ಚಂದ್ರನವೊಲ್ |
| | | ವೊಲು | – | ಮನೆಯವೊಲು | ತನಕ | – | ಅಲ್ಲಿಯತನಕ |
| | | ವರೆಗೆ | – | ಶಾಲೆಯವರೆಗೆ | ಮಟ್ಟಿಗೆ | – | ಆತನಮಟ್ಟಿಗೆ |
| | | ಓಸ್ಕರ | – | ಅವನಿಗೋಸ್ಕರ | ಇಂತ | – | ಮನೆಗಿಂತ |
| | | ಆಗಿ | – | ಅವನಿಗಾ | ಓಸುಗ | – | ಹುಡುಗನಿಗೋಸುಗ |

## ಛಂದಸ್ಸು (3ಅಂಕ)

## ಮತ್ತೇಭ ವಿಕ್ರೀಢಿತ ವೃತ್ತ

**ಸೂತ್ರ : ಸಭರಂನಂಮಯಲಂಗಮುಂ ಬಗೆಗೊಳಲ್ ಮತ್ತೇಭವಿಕ್ರೀಢಿತಂ**

**ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ**

| ಸ | ಭ | ರ | ನ | ಮ | ಯ | ಲ ಗು |
|---|---|---|---|---|---|---|
| ∪∪— | —∪∪ | —∪— | ∪∪∪ | ——— | ∪—— | ∪— |
| ಎನಗಂ | ಪಾಂಡುಗ | ಮಿಲ್ಲಭೇ | ದಮಿಳೆ | ಯುಂಪಚ್ಚಾ | ಳ್ವಮಾಪಾಂ | ಡುನಂ |

ಈ ಮೇಲಿನ ಪದ್ಯವು ಅಕ್ಷರ ಗಣದ **'ಮತ್ತೇಭ ವಿಕ್ರೀಡಿತ ವೃತ್ತ'**ದಲ್ಲಿ ರಚಿತವಾಗಿದೆ.

## ಚಂಪಕ ಮಾಲಾ ವೃತ್ತ

**ಸೂತ್ರ : ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕಮಾಲೆಯೆಂದಪರ್**

**ಕುರುಕುಳನಂದನಂ ಪವನನಂದನನೆಂಬ ಮದಾಂಧ ಗಂಧಸಿಂ**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪∪∪ | ∪—∪ | —∪∪ | ∪—∪ | ∪—∪ | ∪—∪ | —∪— |
| ಕುರುಕು | ಳನಂದ | ನಂಪವ | ನನಂದ | ನನೆಂಬ | ಮದಾಂಧ | ಗಂಧಸಿಂ |

ಈ ಮೇಲಿನ ಪದ್ಯವು ಅಕ್ಷರ ಗಣದ **'ಚಂಪಕ ಮಾಲಾ ವೃತ್ತ'**ದಲ್ಲಿ ರಚಿತವಾಗಿದೆ

## ಉತ್ಪಲಾ ಮಾಲಾ ವೃತ್ತ

**ಸೂತ್ರ :– ಉತ್ಪಲಮಾಲೆಯಪ್ಪುದು ಭರಂನಭಭಂರಲಗಂ ನೆಗಳ್ದಿರಲ್**

**ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ**

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| — ∪ ∪ | — ∪ — | ∪ ∪ ∪ | — ∪ ∪ | — ∪ ∪ | — ∪ — | ∪ — |
| ಮೇದಿನಿ | ಯಂಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

**ಈ ಮೇಲಿನ ಪದ್ಯವು ಅಕ್ಷರ ಗಣದ 'ಉತ್ಪಲಾಮಾಲಾ ವೃತ್ತ'ದಲ್ಲಿ ರಚಿತವಾಗಿದೆ.**

## ಮಾತ್ರಾಗಣದಲ್ಲಿ ರಚಿತವಾಗುವ ಪದ್ಯಗಳು

### ಭಾಮಿನಿ ಷಟ್ಪದಿ

ಭಾಮಿನಿ ಷಟ್ಪದಿಯ 1, 2, 4, 5 ನೇ ಪಾದಗಳಲ್ಲಿ ಮೂರು ಮತ್ತು ನಾಲ್ಕು ಮಾತ್ರೆಯ ಎರಡೆರಡು ಗಣಗಳು ಇರುತ್ತವೆ. ಅದೇ ರೀತಿ 3 ಮತ್ತು 6 ನೇ ಪಾದಗಳಲ್ಲಿ ಮೂರು ಮತ್ತು ನಾಲ್ಕು ಮಾತ್ರೆಯ ಮೂರು ಮೂರು ಗಣಗಳು ಹಾಗೂ ಕೊನೆಯಲ್ಲಿ ಒಂದು ಗುರುವು ಇರುತ್ತದೆ.ಪ್ರತಿ ಪದ್ಯದಲ್ಲೂ ಆದಿಪ್ರಾಸ ಇರುತ್ತದೆ.

| 3 | 4 | 3 | 4 |
|---|---|---|---|
| — ∪ | — — | — ∪ | — — |
| ಏನು | ಹೇಳೈ | ಕರ್ಣ | ಚಿತ್ತ |

| 3 | 4 | 3 | 4 |
|---|---|---|---|
| — ∪ | — ∪ ∪ | ∪ ∪ ∪ | — — |
| ಗ್ಲಾನಿ | ಯಾವುದು | ಮನಕೆ | ಕುಂತೀ |

| 3 | 4 | 3 | 4 | 3 | 4 | ಗುರು |
|---|---|---|---|---|---|---|
| — ∪ | ∪ ∪∪ ∪ | — ∪ | — ∪∪ | — ∪ | — ∪ ∪ | — |
| ಸೂನು | ಗಳಬೆಸೆ | ಕೈಸಿ | ಕೊಂಬುದು | ಸೇರ | ದೇನಿನ | ಗೆ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ಭಾಮಿನಿ ಷಟ್ಪದಿ'**ಯಲ್ಲಿ ರಚಿತವಾಗಿದೆ.

## ವಾರ್ಧಕ ಷಟ್ಪದಿ

ವಾರ್ಧಕ ಷಟ್ಪದಿಯ 1, 2, 4, 5 ನೇ ಪಾದಗಳಲ್ಲಿ ಐದು ಮಾತ್ರೆಯ ನಾಲ್ಕು ಗಣಗಳು ಇರುತ್ತವೆ. ಅದೇ ರೀತಿ 3 ಮತ್ತು 6 ನೇ ಪಾದಗಳಲ್ಲಿ ಐದು ಮಾತ್ರೆಯ ಆರು ಗಣಗಳು ಹಾಗೂ ಕೊನೆಯಲ್ಲಿ ಒಂದು ಗುರುವು ಇರುತ್ತದೆ. ಪ್ರತಿ ಪದ್ಯದಲ್ಲೂ ಆದಿಪ್ರಾಸ ಇರುತ್ತದೆ.

| | | | |
|---|---|---|---|
| 5 | 5 | 5 | 5 |
| — ᴗ — | — — ᴗ | ᴗ ᴗ ᴗ ᴗᴗ | — ᴗ — |
| ಉರ್ವಿಯೆಳ್ | ಕೌಸಲ್ಯೆ | ಪಡೆದಕುವ | ರಂ ರಾಮ |

| | | | |
|---|---|---|---|
| 5 | 5 | 5 | 5 |
| — ᴗ — | — ᴗ — | ᴗ ᴗ — ᴗ | ᴗ ᴗ ᴗ ᴗᴗ |
| ನೊರ್ವನೇ | ವೀರನಾ | ತನಯಜ್ಞ | ತುರಗಮಿದು |

| | | | | | | |
|---|---|---|---|---|---|---|
| 5 | 5 | 5 | 5 | 5 | 5 | ಗು |
| — ᴗᴗᴗ | — ᴗ — | — ᴗ — | ᴗ ᴗ ᴗ— | — ᴗ — | ᴗ ᴗ ᴗ — | — |
| ನಿರ್ವಹಿಸ | ಲಾರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನವನೋ | ದಿ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ವಾರ್ಧಕ ಷಟ್ಪದಿ'**ಯಲ್ಲಿ ರಚಿತವಾಗಿದೆ.

## ಕಂದ ಪದ್ಯ

ಕಂದ ಪದ್ಯವು ನಾಲ್ಕು ಸಾಲಿನ ಪದ್ಯ. ಒಂದನೆಯ ಮತ್ತು ಮೂರನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಮೂರು ಗಣಗಳಿಂದ ಕೂಡಿರುತ್ತದೆ. ಎರಡನೆಯ ಮತ್ತು ನಾಲ್ಕನೆಯ ಸಾಲುಗಳು ಸಮನಾಗಿದ್ದು ನಾಲ್ಕು ಮಾತ್ರೆಯ ಐದು ಗಣಗಳಿಂದ ಕೂಡಿರುತ್ತದೆ. ವಿಷಮ ಗಣ ಸ್ಥಾನದಲ್ಲಿ ಮಧ್ಯ ಗುರುವಿನ ಗಣ ಬರುವುದಿಲ್ಲ. ಆರನೆಯ ಮತ್ತು ಹದಿನಾಲ್ಕನೆಯ ಗಣಗಳು ಸರ್ವಲಘುಗಳ ಗಣ ಅಥವಾ ಮಧ್ಯ ಗುರುವಿನ ಗಣವಾಗಿರುತ್ತದೆ. ಆದಿ ಪ್ರಾಸವು ಇರುತ್ತದೆ. ಕಂದಪದ್ಯದಲ್ಲಿ ಒಟ್ಟು 16 ಗಣಗಳು, 64 ಮಾತ್ರೆಗಳು ಇರುತ್ತದೆ.

**ಅತಿಕುಟಿಲಮನಂ ಧನಲು**

**ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ**

| | | |
|---|---|---|
| 4 | 4 | 4 |
| ᴗ ᴗ ᴗᴗ | ᴗ ᴗ — | ᴗᴗ — |
| ಅತಿಕುಟಿ | ಲಮನಂ | ಧನಲು |

| | | | | |
|---|---|---|---|---|
| 4 | 4 | 4 | 4 | 4 |
| ᴗ ᴗ — | — — | ᴗ — ᴗ | ᴗ ᴗ — | ᴗ ᴗ — |
| ಬ್ಧತೆಯಿಂ | ದಂ ದು | ಷ್ಟಬುದ್ಧಿ | ನುಡಿದಂ | ಪುಸಿಯಂ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ಕಂದಪದ್ಯ ಛಂದಸ್ಸಿನಲ್ಲಿ** ರಚಿತವಾಗಿದೆ.

# ಅಲಂಕಾರ (3ಂಕ)

ಅಲಂಕಾರಗಳಲ್ಲಿ 2 ವಿಧಗಳು

1) ಶಬ್ದಾಲಂಕಾರ
2) ಅರ್ಥಾಲಂಕಾರ

ಶಬ್ದ (ಅ) ಅಕ್ಷರಗಳ ಜೋಡನೆಯ ಚಮತ್ಕಾರದಿಂದ ಕಾವ್ಯದ ಸೌಂದರ್ಯ ಹೆಚ್ಚಾದರೆ ಅದೇ ಶಬ್ದಾಲಂಕಾರ ಶಬ್ದಾಲಂಕಾರದ ಅಂಶವನ್ನು ಈ ಕೆಳಕಂಡಂತೆ ವಿವರಿಸಬಹುದು

**ಶಬ್ದಾಲಂಕಾರ**

- ಅನುಪ್ರಾಸ
  - ವೃತ್ತಾನುಪ್ರಾಸ
  - ಛೇಕಾನುಪ್ರಾಸ
- ಯಮಕ
- ಚಿತ್ರಕವಿತ್ವ

**ಅರ್ಥಾಲಂಕಾರ:–**

ಪದಗಳ ಅರ್ಥ ಚಮತ್ಕಾರದಿಂದ ಕಾವ್ಯ ಅಥವಾ ಮಾತಿನ ಸೌಂದರ್ಯ ಹೆಚ್ಚಾದರೆ ಅದೇ ಅರ್ಥಾಲಂಕಾರ. ಇದರಲ್ಲಿ 100ಕ್ಕೂ ಮಿಕ್ಕಿದ ಅಲಂಕಾರಗಳಿವೆ. ಪ್ರಮುಖವಾಗಿ 6 ಅಲಂಕಾರಗಳು ಕಂಡು ಬರುತ್ತದೆ.

1. ಉಪಮಾಲಂಕಾರ
2. ರೂಪಕಾಲಂಕಾರ
3. ಉತ್ಪ್ರೇಕ್ಷಾಲಂಕಾರ
4. ದೃಷ್ಟಾಂತಾಲಂಕಾರ
5. ಅರ್ಥಾಂತರನ್ಯಾಸಾಲಂಕಾರ
6. ಶ್ಲೇಷಾಲಂಕಾರ

## ಉಪಮಾಲಂಕಾರ

ಎರಡು ವಸ್ತುಗಳಿಗಿರುವ (ಉಪಮೇಯ ಮತ್ತು ಉಪಮಾನಗಳಿಗಿರುವ) ಸಾದೃಶ್ಯ ಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದನ್ನು **'ಉಪಮಾಲಂಕಾರ'** ಎನ್ನುವರು.

**1.'ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷಬೆರೆದಂತೆ'**

**ಅಲಂಕಾರ** :– ಉಪಮಾಲಂಕಾರ

ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ** :– ಸತಿಪತಿಗಳೊಂದಾಗದವನ ಭಕ್ತಿ

**ಉಪಮಾನ** :– ಅಮೃತದೊಳು ಬೆರೆತ ವಿಷ

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಸ್ಪಷ್ಟವಾಗಿಲ್ಲ (ನಿಷ್ಪ್ರಯೋಜಕವಾದುದು)

**ಸಮನ್ವಯ** :– ಇಲ್ಲಿ ಉಪಮೇಯವಾದ ಸತಿಪತಿಗಳೊಂದಾಗದ ಭಕ್ತಿಯನ್ನು ಉಪಮಾನವಾದ ಅಮೃತದೊಳು ಬೆರೆತ ವಿಷಕ್ಕೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ

*****

**2.ನೀಚರಿಗೆ ಮಾಡಿದ ಉಪಕಾರವು ಹಾವಿಗೆ ಹಾಲೆರೆದಂತೆ**

**ಅಲಂಕಾರ** :– ಉಪಮಾಲಂಕಾರ

ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ** :– ನೀಚರಿಗೆ ಮಾಡುವ ಉಪಕಾರ

**ಉಪಮಾನ** :– ಹಾವಿಗೆ ಎರೆದ ಹಾಲು

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಸ್ಪಷ್ಟವಾಗಿಲ್ಲ (ಪ್ರಯೋಜನವಿಲ್ಲ)

**ಸಮನ್ವಯ** :– ಇಲ್ಲಿ ಉಪಮೇಯವಾದ ನೀಚರಿಗೆ ಮಾಡಿದ ಉಪಕಾರವನ್ನು ಉಪಮಾನವಾದ ಹಾವಿಗೆ ಎರೆದ ಹಾಲಿಗೆ ಹೋಲಿಸಿ ವರ್ಣಿಸಲಾಗಿರುವುದರಿಂದ ಇದು ಉಪಮಾಲಂಕಾರವಾಗಿದೆ.

*****

**3.ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು.**

**ಅಲಂಕಾರ** :– ಉಪಮಾಲಂಕಾರ

ಲಕ್ಷಣ :– ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು 'ಉಪಮಾಲಂಕಾರ'.

**ಉಪಮೇಯ** :– ಭೀಮ ದುರ್ಯೋಧನರು

**ಉಪಮಾನ** :– ಮದಗಜಗಳು

**ಉಪಮಾ ವಾಚಕ** :– ಅಂತೆ

**ಸಮಾನ ಧರ್ಮ** :– ಹೋರಾಡುವುದು

**ಸಮನ್ವಯ** :– ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿ ವರ್ಣಿಸಲಾಗಿದೆ.

**4.ಒಳಗಿನ ಮಂದಿ ಗುಂಡು ಹೊಡೆಸಿದರೋ ಮುಂಗಾರಿ ಸಿಡಿಲ ಸಿಡಿದಾಂಗ**

**ಉಪಮೇಯ** –

**ಸಮನ್ವಯ** –

**ಉಪಮಾ ವಾಚಕ** –

**ಸಮಾನ ಧರ್ಮ** –

**ಉಪಮಾನ** –

**5.ಸಿಡಿಲು ಸಿಡುದಾಂಗ ಗುಂಡು ಸುರಿದಾವ**

**ಉಪಮೇಯ** –

**ಸಮನ್ವಯ** –

**ಉಪಮಾ ವಾಚಕ** –

**ಸಮಾನ ಧರ್ಮ** –

**ಉಪಮಾನ**

*****

## ರೂಪಕಾಲಂಕಾರ

ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'**.

**ಅಳ್ಳಿರಿಯುತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ ಪೇಳು ವಿಶ್ವಾಮಿತ್ರ**

**ಅಲಂಕಾರ** :– **ರೂಪಕಾಲಂಕಾರ**

**ಲಕ್ಷಣ** :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'**.

**ಉಪಮೇಯ** :– ಒಡಲಬೇಗೆ
**ಉಪಮಾನ** :– ಬೆಂಕಿಯುರಿ
**ಸಮನ್ವಯ** :– ಇಲ್ಲಿ ಉಪಮೇಯವಾದ ಅಯೋಧ್ಯೆಯ ಪ್ರಜೆಗಳ ಒಡಲಬೇಗೆಯನ್ನು ಉಪಮಾನವಾದ ಬೆಂಕಿಯುರಿಗೆ ಅಭೇದವಾಗಿ ಊಹಿಸಿರುವುದರಿಂದ ಇದು ರೂಪಕಾಲಂಕಾರ.

*****

**"ಮಾರಿಗೌತಣವಾಯ್ತು ನಾಳಿನ ಭಾರತವು"**
**ಅಲಂಕಾರ** :– **ರೂಪಕಾಲಂಕಾರ**
**ಲಕ್ಷಣ** :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'**.
**ಉಪಮೇಯ** :– ನಾಳಿನ ಭಾರತ ಯುದ್ಧ
**ಉಪಮಾನ** :– ಮಾರಿಯ ಔತಣ
**ಸಮನ್ವಯ** :– ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

**ಅಳ್ಳಿರಿಯುತ್ತಿಪ್ಪ ಎಮ್ಮ ಒಡಲಬೇಗೆಯ ಬೆಂಕಿಯುರಿ ನಿನ್ನನಿರಿಯದೆ.**
**ಅಲಂಕಾರ** :– **ರೂಪಕಾಲಂಕಾರ**
**ಲಕ್ಷಣ** :– ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ **'ರೂಪಕಾಲಂಕಾರ'**.
**ಉಪಮೇಯ** :– ಬೆಂಕಿಯುರಿ
**ಉಪಮಾನ** :– ಒಡಲಬೇಗೆ
**ಸಮನ್ವಯ** :– ಇಲ್ಲಿ ಉಪಮೇಯವಾದ ಬೆಂಕಿಯುರಿವನ್ನು ಉಪಮಾನವಾದ ಒಡಲಬೇಗೆಗೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ

*****

## ದೃಷ್ಟಾಂತಾಲಂಕಾರ

ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದನ್ನು **'ದೃಷ್ಟಾಂತಾಲಂಕಾರ.'** ಎನ್ನುವರು.

**ಉದಾ :–**

* **ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.**
ಅಲಂಕಾರ : ದೃಷ್ಟಾಂತಾಲಂಕಾರ
ಲಕ್ಷಣ : ಎರಡು ಬೇರೆ ಬೇರೆ ವಾಕ್ಯಗಳು (ಉಪಮೇಯ, ಉಪಮಾನ) ಅರ್ಥ ಸಾದೃಶ್ಯದಿಂದ ಒಂದಕ್ಕೊಂದು ಬಿಂಬ ಪ್ರತಿಬಿಂಬ ಭಾವದಂತೆ ತೋರುತ್ತಿದ್ದರೆ ಅದು **'ದೃಷ್ಟಾಂತಾಲಂಕಾರ'.**
ಉಪಮೇಯ : ಮಾತು ಬಲ್ಲವನಿಗೆ ಜಗಳವಿಲ್ಲ
ಉಪಮಾನ : ಊಟ ಬಲ್ಲವನಿಗೆ ರೋಗವಿಲ್ಲ
ಸಮನ್ವಯ : ಇಲ್ಲಿ ಉಪಮೇಯವಾದ **ಮಾತುಬಲ್ಲವನಿಗೆ ಜಗಳವಿಲ್ಲ** ಹಾಗೂ ಉಪಮಾನವಾದ **ಊಟ ಬಲ್ಲವನಿಗೆ ರೋಗವಿಲ್ಲ** ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ. ಆದ್ದರಿಂದ ಇದು ದೃಷ್ಟಾಂತಾಲಂಕಾರ.

## ಉತ್ಪ್ರೇಕ್ಷಾಲಂಕಾರ

ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು **ಉತ್ಪ್ರೇಕ್ಷಾಲಂಕಾರ.**

* **ಅಚ್ಛೋದ ಸರೋವರವು ತ್ರೈಲೋಕ್ಯಲಕ್ಷ್ಮಿಯು ತನ್ನ ಸೌಂದರ್ಯವನ್ನು ನೋಡಲು ಮಾಡಿಟ್ಟ ರನ್ನಗನ್ನಡಿಯೋ ಎಂಬಂತೆ ಶೋಭಿಸಿತು.**

ಅಲಂಕಾರ : **ಉತ್ಪ್ರೇಕ್ಷಾಲಂಕಾರ**

ಲಕ್ಷಣ : ಉಪಮೇಯವನ್ನು ಉಪಮಾನವನ್ನಾಗಿ ಸಂಭಾವಿಸಿ ಅಂದರೆ ಕಲ್ಪಿಸಿ ವರ್ಣಿಸಿದರೆ ಅದು **ಉತ್ಪ್ರೇಕ್ಷಾಲಂಕಾರ.**

ಉಪಮೇಯ : ಅಚ್ಛೋದ ಸರೋವರ

ಉಪಮಾನ : ರನ್ನಗನ್ನಡಿ

ಸಮನ್ವಯ : ಉಪಮೇಯವಾದ ಅಚ್ಛೋದ ಸರೋವರವನ್ನು ಉಪಮಾನವಾದ ರನ್ನಗನ್ನಡಿ ಎಂಬುದಾಗಿ ಸಂಭಾವಿಸಿ (ಕಲ್ಪಿಸಿ) ವರ್ಣಿಸಲಾಗಿದೆ.

## ಅರ್ಥಾಂತರನ್ಯಾಸಾಲಂಕಾರ

ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ **ಅರ್ಥಾಂತರನ್ಯಾಸ ಅಲಂಕಾರ.**

**"ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?"**

ಅಲಂಕಾರ : **ಅರ್ಥಾಂತನ್ಯಾಸಾಲಂಕಾರ.**

ಲಕ್ಷಣ : ಒಂದು ವಿಶೇಷ ವಾಕ್ಯವನ್ನು (ಉಪಮೇಯ) ಸಾಮಾನ್ಯ ವಾಕ್ಯದಿಂದ (ಉಪಮಾನ) ಸಮರ್ಥನೆ ಮಾಡುವುದೇ **ಅರ್ಥಾಂತರನ್ಯಾಸ ಅಲಂಕಾರ.**

ಉಪಮೇಯ (ವಿಶೇಷ ವಾಕ್ಯ) : ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.

ಉಪಮಾನ ( ಸಾಮಾನ್ಯ ವಾಕ್ಯ): ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

ಸಮನ್ವಯ : ಇಲ್ಲಿ ಉಪಮೇಯವಾದ "ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನಪಡೆದುಉತ್ತೀರ್ಣನಾದನು" ಎಂಬ ವಿಶೇಷವಾಕ್ಯವನ್ನು ಉಪಮಾನವಾದ "ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?" ಎಂಬ ಸಾಮಾನ್ಯವಾಕ್ಯದಿಂದ ಸಮರ್ಥಿಸಲಾಗಿದೆ. ಆದ್ದರಿಂದ ಇದು ಅರ್ಥಾಂತರನ್ಯಾಲಂಕಾರ.

## ಗಾದೆಗಳ ವಿಸ್ತರಣೆ – 3ಅಂಕ

# (ಉದಾಹರಣೆಗೆ ಮಾದರಿ)

### 1. ಶಕ್ತಿಗಿಂತ ಯುಕ್ತಿ ಮೇಲು

**ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ವೇದಗಳ ತಲೆದಿಂಬು. ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.**

ಪ್ರಸ್ತುತ ಗಾದೆ 'ಶಕ್ತಿಗಿಂತ ಯುಕ್ತಿ ಮೇಲು' ಎಂಬುದು ಒಂದು ಜನಪ್ರಿಯ ಗಾದೆ.ಶಕ್ತಿ ದೈಹಿಕವಾದದ್ದು. ಯುಕ್ತಿ ಬುದ್ಧಿಚಾತುರ್ಯವನ್ನು ಅವಲಂಬಿಸಿದೆ. ಶಕ್ತಿಯಿಂದ ಗೆಲ್ಲಲಾಗದ ಸಂದರ್ಭದಲ್ಲಿ ಯುಕ್ತಿಯನ್ನು ಪ್ರಯೋಗಿಸಬೇಕು. ತನ್ನ ಜೀವ ಉಳಿಸಿಕೊಳ್ಳಲು ಮೊಲವೊಂದು ಸಿಂಹದಿಂದ ತನ್ನನ್ನು ತಾನು ಯುಕ್ತಿಯಿಂದ ಕಾಪಾಡಿಕೊಂಡ ಪಂಚತಂತ್ರದ ಕಥೆ ಎಲ್ಲರಿಗೂ ತಿಳಿದಿದೆ. ಈ ಹಿನ್ನೆಲೆಯಲ್ಲಿ ದೈಹಿಕ ಶಕ್ತಿಗಿಂತ ಮನಸ್ಸಿನ ಯುಕ್ತಿಯೇ ಶ್ರೇಷ್ಠ ಎಂಬುದೇ ಈ ಗಾದೆಯ ಅರ್ಥವಾಗಿದೆ.

### 2. ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು.

**ಗಾದೆಗಳು ವೇದಗಳಿಗೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗದು.ಗಾದೆಗಳು ವೇದಗಳ ತಲೆದಿಂಬು. ಗಾದೆಗಳು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಇವು ಕಿರಿದರಲ್ಲಿ ಹಿರಿದಾದ ಅರ್ಥವನ್ನು ಹೊಂದಿರುತ್ತವೆ.**

ಪ್ರಸ್ತುತ ಗಾದೆ 'ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲು' ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ. ತಾಯಿ ನಮ್ಮನ್ನು ಒಂಬತ್ತು ತಿಂಗಳು ತನ್ನ ಗರ್ಭದಲ್ಲಿಟ್ಟುಕೊಂಡು ಪೋಷಿಸಿದರೆ, ಹೊತ್ತನಾಡು ನಮ್ಮನ್ನು ಜೀವನಪೂರ್ತಿ ತನ್ನ ಮಡಿಲಲ್ಲಿಟ್ಟು ಪೋಷಿಸುತ್ತದೆ. ಹೆತ್ತತಾಯಿಯ ಮಡಿಲಿನಲ್ಲಿ ದೊರಕುವ ಸುಖಕ್ಕೆ ಸಮನಾದ ಸುಖ ಬೇರೊಂದಿಲ್ಲ. ಅದೇ

ರೀತಿ ಜನ್ಮಭೂಮಿಯ ಸಂಬಂಧವು ಸಹ ಬಿಡಿಸಲಾಗದಂತಹುದು. ನಮ್ಮ ನಾಡಿನಲ್ಲಿ ನಮಗೆ ದೊರೆಯುವ ಆನಂದ ಮತ್ತೆ ಎಲ್ಲೂ ದೊರೆಯಲು ಸಾಧ್ಯವಿಲ್ಲ. ಆದ್ದರಿಂದ ಹೆತ್ತತಾಯಿ ಹೊತ್ತನಾಡು ಸ್ವರ್ಗಕ್ಕಿಂತ ಮಿಗಿಲಾದುದು. ರಾಮಾಯಣ ಮಹಾಕಾವ್ಯದಲ್ಲಿ ಶ್ರೀರಾಮನು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ.

# ಪತ್ರ ಲೇಖನ 5ಅಂಕ

## ವ್ಯವಹಾರಿಕ ಪತ್ರದ ಮಾದರಿ

ಇಂದ

______________________

______________________

______________________

ರವರಿಗೆ

______________________

______________________

______________________

ಮಾನ್ಯರೇ,

ವಿಷಯ :– ________________________________________________

ಈ ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ______________________________________________________________

______________________________________________________________

______________________________________________________________

______________________________________________________________

______________________________________________________________

____________________

ವಂದನೆಗಳೊಂದಿಗೆ

ಸ್ಥಳ : ಇಂತಿ ತಮ್ಮ ನಂಬುಗೆಯ

ದಿನಾಂಕ:

# ಪ್ರಬಂಧಗಳು – 5ಅಂಕ

## ಮಾದರಿ ಪ್ರಬಂಧ

## ಸ್ವಚ್ಛ ಭಾರತ ಅಭಿಯಾನ

**ಪೀಠಿಕೆ :** ಭಾರತವು ಸನಾತನ ಧರ್ಮದ ನೆಲೆವೀಡು, ಸಾಧುಸಂತರ, ಋಷಿಮುನಿಗಳ ತಪೋನಾಡು ಪವಿತ್ರ ನದಿಗಳ ಪುಣ್ಯದ ಬೀಡು ಎಂಬ ಅಭಿದಾನಕ್ಕೆ ಪಾತ್ರವಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಇದೇ ದೇಶವು ವಿಶ್ವದ ಕೊಳಕು

ರಾಷ್ಟ್ರಗಳ ಪಟ್ಟಿಯಲ್ಲಿ ಸೇರಿರುವುದು ವಿಪರ್ಯಾಸವೇ ಸರಿ. ದೇಶದ ಈ ಮಾಲಿನ್ಯವನ್ನು ಹೊಗಲಾಡಿಸಿ ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಸ್ವಚ್ಛಭಾರತ ಅಭಿಯಾನದ ಬಗ್ಗೆ ತಿಳಿಯೋಣ.

**ವಿಷಯ ವಿಶ್ಲೇಷಣೆ :** ಸ್ವಚ್ಛಭಾರತ ಅಭಿಯಾನವು ಪ್ರಸ್ತುತ ಪ್ರಧಾನಮಂತ್ರಿಗಳಾಗಿರುವ ಶ್ರೀ ನರೇಂದ್ರಮೋದಿಯವರ ಮಹತ್ವದ ಯೋಜನೆಗಳಲ್ಲೊಂದಾಗಿದೆ. 2014ರ ಗಾಂಧಿಜಯಂತಿಯಂದು ಮಾನ್ಯ ಪ್ರಧಾನಮಂತ್ರಗಳು ಈ ಯೋಜನೆಗೆ ಚಾಲನೆ ನೀಡಿದರು.

ನಮ್ಮ ಮನೆ, ಶಾಲೆ, ಆಸ್ಪತ್ರೆ, ಅಂಗಡಿ, ದೇವಾಲಯ, ರಸ್ತೆಗಳು, ಉದ್ಯಾನವನಗಳು ಹಾಗೂ ಸಾರ್ವಜನಿಕ ಸಂಚಾರಿ ವಾಹನಗಳಾದ ಬಸ್ಸು, ರೈಲುಗಳು, ನಿಲ್ದಾಣಗಳು ಮುಂತಾದ ಯಾವುದೇ ಸ್ಥಳವನ್ನು ಸ್ವಚ್ಛವಾಗಿಡುವುದೇ, ಮಾಲಿನ್ಯರಹಿತಗೊಳಿಸುವುದೇ ಸ್ವಚ್ಛಭಾರತ ಅಭಿಯಾನದ ಉದ್ದೇಶವಾಗಿದೆ.

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ಗುಜರಾತಿನಿಂದ ಅಸ್ಸಾಂವರೆಗೆ ಹರಡಿದ ವಿಶಾಲವಾದ ಭರತ ಭೂಮಿಯಲ್ಲಿ. 128 ಕೋಟಿಗೂ ಮೀರಿ ಬೆಳೆಯುತ್ತಿರುವ ಈ ಉಪಖಂಡವನ್ನು ಸ್ವಚ್ಚವಾಗಿರಿಸುವುದು ಭಗೀರಥ ಪ್ರಯತ್ನವೇ ಸರಿ, ಆದರೆ ಭಾರತದ ಪ್ರತಿಯೊಬ್ಬ ನಾಗರೀಕನೂ ಸ್ವಚ್ಚತಾ ಕಾರ್ಯದಲ್ಲಿ ಪ್ರಾಮಾಣಿಕವಾಗಿ ತೊಡಗಿದರೆ "ಸ್ವಚ್ಚಭಾರತ" ಕನಸು ನನಸಾಗುವುದರಲ್ಲಿ ಯಾವ ಆಶ್ಚರ್ಯವೂ ಇಲ್ಲ.

ಆದ್ದರಿಂದ ವಿದ್ಯಾರ್ಥಿಗಳಾದ ನಾವು ಸ್ವತಃ ಸ್ವಚ್ಛತೆಯನ್ನು ಪಾಲಿಸುತ್ತಾ ನಮ್ಮ ಕುಟುಂಬದ ಸದಸ್ಯರಿಗೂ, ನೆರೆಹೊರೆಯವರಿಗೂ ಈ ಬಗ್ಗೆ ತಿಳಿವಳಿಕೆ ಹೇಳಿ ಜಾಗೃತಿ ಮೂಡಿಸಬೇಕು.

"Cleanliness is next to Godliness" ಎಂಬಂತೆ ಸ್ವಚ್ಛತೆಯಿದ್ದರೆ ದೇವರುಗಳು ನೆಲಸುತ್ತಾರೆ. ಎಂಬುದು ನಾಣ್ನುಡಿ ಸ್ವಚ್ಛತೆಯಿದ್ದಲ್ಲಿ ಆರೋಗ್ಯ ವರ್ದಿಸುತ್ತದೆ. ಆರೋಗ್ಯವಿದ್ದಲ್ಲಿ ಸಂಪತ್ತು, ಸಮೃದ್ಧಿ, ಶಾಂತಿ, ನೆಮ್ಮದಿ ತಾನಾಗಿಲೇ ನೆಲೆಸುತ್ತದೆ.

ಸರ್ಕಾರಿ ವಲಯದಲ್ಲಾಗಲೀ, ಖಾಸಗೀ ವಲಯದಲ್ಲಾಗಲೀ ಅಲ್ಲಿನ ಅಧಿಕಾರಿಗಳು ಸ್ವಚ್ಛತೆಯನ್ನು ಕಾಪಾಡುವ ಉಸ್ತುವಾರಿ ವಹಿಸಿರುತ್ತಾರೆ. ಈ ಹಿನ್ನಲೆಯಲ್ಲಿ ಮೈಸೂರುನಗರವು "Cleancity" "ಸ್ವಚ್ಛನಗರ" ಎಂಬ ಖ್ಯಾತಿಗೆ ಪಾತ್ರವಾಗಿರುವುದು ಮೈಸೂರಿಗರಿಗೆಲ್ಲಾ ಸಂತಸ ತಂದಿದೆ. ಅಂತೆಯೇ ಪ್ರತೀ ಗ್ರಾಮ, ತಾಲ್ಲೂಕು, ಜಿಲ್ಲೆ, ರಾಜ್ಯ ಸ್ವಚ್ಛಗೊಂಡರೆ ಸ್ವಚ್ಛ ಭಾರತ ಸಾಕಾರಗೊಳ್ಳುವುದು.

**ಉಪಸಂಹಾರ:** ಸ್ವಚ್ಛ ಭಾರತ ಅಭಿಯಾನವು ಕೇವಲ ಸರ್ಕಾರದ ಕಾರ್ಯಕ್ರಮದಲ್ಲ. ಅದು ಸಾರ್ವಜನಿಕರ ಕಾರ್ಯಕ್ರಮವಾಗಿದೆ. ಆದ್ದರಿಂದ ಸ್ನೇಹಿತರೆ, ನಾವೆಲ್ಲರೂ ಗಾಂಧಿಜಯಂತಿಯಂದು ಮಾತ್ರವಲ್ಲದೇ ಪ್ರತಿದಿನವೂ ಸ್ವಚ್ಛತೆಯನ್ನು ನಿರ್ವಹಿಸೋಣ, "ಸ್ವಚ್ಛಭಾರತ ನಮ್ಮ ಭಾರತ" ಎಂದು ಜಗತ್ತಿಗೆ ಸಾರೋಣ.

## ಅಕ್ಷರ ದಾಸೋಹ ಮತ್ತು ಕ್ಷೀರಭಾಗ್ಯ ಯೋಜನೆಗಳು

**ಪ್ರಸ್ತಾವನೆ :**ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸರ್ವರಿಗೂ ಶಿಕ್ಷಣ ನೀಡುವ ಉದ್ದೇಶದಿಂದ ಹಾಗೂ ಆರ್ಥಿಕವಾಗಿ ತೊಂದರೆಯಲ್ಲಿರುವ ವರ್ಗದ ಮಕ್ಕಳಿಗೆ ಸಹಾಯ ಮಾಡುವ ಉದ್ದೇಶದಿಂದ ಅನುಷ್ಠಾನಗೊಳಿಸಲಾಗಿರುವ ಜನಪ್ರಿಯ ಯೋಜನೆಗಳೇ ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯ ಯೋಜನೆಗಳು.

**ವಿಷಯ ನಿರೂಪಣೆ :** ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಒಂದರಿಂದ ಹತ್ತನೆಯ ತರಗತಿಯವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಈ ಯೋಜನೆಯ ಸೌಲಭ್ಯ ನೀಡಲಾಗಿದೆ. ಅಕ್ಷರ ದಾಸೋಹ ಯೋಜನೆಯ ಅಡಿಯಲ್ಲಿ ಮಧ್ಯಾಹ್ನದ ಬಿಸಿಯೂಟವನ್ನು ನೀಡಲಾಗುತ್ತಿದೆ.ಇದಕ್ಕಾಗಿ ಪ್ರತೀ ಶಾಲೆಯಲ್ಲೂ ಪ್ರತ್ಯೇಕ ಅಡುಗೆಮನೆ ನಿರ್ಮಾಣ ಮಾಡಿ ಅಡುಗೆ ಸಿಬ್ಬಂದಿಯನ್ನು ನೇಮಿಸಲಾಗಿದೆ ದವಸ ಧಾನ್ಯಗಳನ್ನು ಸರ್ಕಾರವೇ ಸರಬರಾಜು ಮಾಡಿ ಉಳಿದ ಖರ್ಚಿಗೆ ಹಣವನ್ನು ಬಿಡುಗಡೆಗೊಳಿಸುತ್ತಿದೆ.ಎಲ್ಲ ಶಾಲೆಗಳಲ್ಲೂ ವ್ಯವಸ್ಥಿತವಾಗಿ ಈ ಯೋಜನೆಯು ನಡೆದುಕೊಂಡು ಬರುತ್ತಿದೆ.ಹೀಗೆಯೇ ಈ ಮಕ್ಕಳಿಗೆ ಕ್ಷೀರಭಾಗ್ಯ ಯೋಜನೆಯ ಅಡಿಯಲ್ಲಿ ವಾರಕ್ಕೆ ಮೂರು ದಿನಗಳು ಪೌಷ್ಠಿಕವಾದ ಹಾಲನ್ನು ನೀಡಲಾಗುತ್ತಿದೆ.ಈ ಯೋಜನೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ವಾರದ ಐದೂ ದಿನಗಳಿಗೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.ಈ ಎರಡೂ ಯೋಜನೆಗಳಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಹೆಚ್ಚು ಉಪಯುಕ್ತವಾಗಿದೆ ಅಲ್ಲದೆ ಶಾಲೆಯ ದಾಖಲಾತಿ ಮತ್ತು ಹಾಜರಾತಿಯೂ ಉತ್ತಮಗೊಳ್ಳುತ್ತಿದೆ.

**ಉಪಸಂಹಾರ :** ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಮಕ್ಕಳಿಗೆ ಬಹಳ ಉಪಯುಕ್ತವಾಗಿದ್ದು ವರದಾನವಾಗಿದೆ. ಈ ಯೋಜನೆಗಳು ಯಶಸ್ವಿಯಾಗಿದ್ದು ಉದ್ದೇಶ ಸಾಧನೆಯಲ್ಲಿ ಫಲಕಾರಿಯಾಗಿದೆ.